ಲಿಖಿತ ಮೂಲಕ ಉತ್ತರಿಸುವ
ಪ್ರಶ್ನೆಗಳ ಪಟ್ಟಿ

ಒಟ್ಟು ಪ್ರಶ್ನೆಗಳು –120

**ಪಟ್ಟಿ – ೧೨**

# ಕರ್ನಾಟಕ ವಿಧಾನ ಪರಿಷತ್ತು

**ನೂರ ಇಪ್ಪತ್ತೇಳನೇ ಅಧಿವೇಶನ**

**ಮುಂದುವರೆದ ಉಪವೇಶನ**

**ಬುಧವಾರ, ದಿನಾಂಕ : ೧೮ನೇ ಮಾರ್ಚ್, ೨೦೧೫**

---

**ಸಮೂಹ –III**

೧. ಅರಣ್ಯ ಸಚಿವರು

೨. ಕಂದಾಯ ಸಚಿವರು

೩. ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು

೪. ಜವಳಿ ಹಾಗೂ ಬಂದರು ಮತ್ತು ಒಳನಾಡು ಜಲ ಸಾರಿಗೆ ಸಚಿವರು

೫. ಸಣ್ಣ ನೀರಾವರಿ ಸಚಿವರು

೬. ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ ಮೀನುಗಾರಿಕೆ ರಾಜ್ಯ ಸಚಿವರು

೭. ಕಾರ್ಮಿಕ ರಾಜ್ಯ ಸಚಿವರು

---

F-1 B/B

## ಅಂತರ್‌ಜಲ ನಿರ್ವಹಣೆ ಬಗ್ಗೆ

**ಶ್ರೀಮತಿ ಜಯಮ್ಮ (ವಿಧಾನ ಸಭೆಯಿಂದ ಚುನಾಯಿತರಾದವರು) :–**

೧೩೯೨ (೧೫೨೯) ಮಾನ್ಯ ಸಣ್ಣ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಚಿತ್ರದುರ್ಗ ಜಿಲ್ಲೆ, ಚಳ್ಳಕೆರೆ ತಾಲ್ಲೂಕು ನಾಯಕನಹಟ್ಟಿ ಮತ್ತು ತಳಕು ಹೋಬಳಿ ವ್ಯಾಪ್ತಿಯಲ್ಲಿ ಅಂತರ್‌ಜಲ ಮಟ್ಟ ಸಂಪೂರ್ಣ ಕುಸಿದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಬಂದಿದ್ದಲ್ಲಿ, ಮೇಲ್ಕಂಡ ಹೋಬಳಿಗಳಲ್ಲಿ ಅಂತರ್‌ಜಲ ಮಟ್ಟ ಹೆಚ್ಚಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ?

## ಕೆರೆಗಳ ನಿರ್ವಹಣೆ ಬಗ್ಗೆ

**ಶ್ರೀಮತಿ ಜಯಮ್ಮ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೩೯೩ (೧೩೧೩) ಮಾನ್ಯ ಸಣ್ಣ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಚಿತ್ರದುರ್ಗ ಜಿಲ್ಲೆ, ಚಳ್ಳಕೆರೆ ತಾಲ್ಲೂಕು, ಮೊಳಕಾಲ್ಮೂರು ವಿಧಾನಸಭಾ ಕ್ಷೇತ್ರದಲ್ಲಿ ಇರುವ ಕೆರೆಗಳ ಸಂಖ್ಯೆ ಎಷ್ಟು ; ಅವು ಯಾವುವು ;

(ಆ) ೨೦೧೪–೧೫ನೇ ಸಾಲಿನಲ್ಲಿ ಯಾವ ಯಾವ ಕೆರೆಗಳನ್ನು ಅಭಿವೃದ್ಧಿಪಡಿಸಲಾಗಿದೆ ; (ಕೆರೆವಾರು ವಿವರ ನೀಡುವುದು)

(ಇ) ಚಿತ್ರದುರ್ಗ ಜಿಲ್ಲೆ, ಮೊಳಕಾಲ್ಮೂರು ಕ್ಷೇತ್ರದ ಯಾತ್ರಾ ಸ್ಥಳವಾದ ನಾಯಕನಹಟ್ಟಿಯಲ್ಲಿರುವ ಚಿಕ್ಕ ಕೆರೆ ಅಭಿವೃದ್ಧಿಪಡಿಸುವ ಉದ್ದೇಶ ಸರ್ಕಾರಕ್ಕೆ ಇದೆಯೇ ;

(ಈ) ಇದ್ದಲ್ಲಿ, ಅಭಿವೃದ್ಧಿ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗುವುದು ಯಾವಾಗ ?

## ೨೦೧೪-೧೫ನೇ ಸಾಲಿನ ವೃದ್ಧಾಪ್ಯ ವೇತನ

**ಶ್ರೀಮತಿ ಜಯಮ್ಮ (ವಿಧಾನಸಭೆಯಿಂದ ಚುನಾಯಿತರಾದವರು) :-**

೧೩೯೪ (೧೩೧೪) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ೨೦೧೪-೧೫ನೇ ಸಾಲಿನಲ್ಲಿ ನೀಡಲಾದ ವೃದ್ಧಾಪ್ಯ ವೇತನ ಹಾಗೂ ವಿಧವಾ ವೇತನದ ಸಂಖ್ಯೆ ಎಷ್ಟು ;

(ಆ) ಸದರಿ ಫಲಾನುಭವಿಗಳಿಗೆ ಅವರಿಗೆ ಸಲ್ಲಿಸಬೇಕಾದ ವೇತನವನ್ನು ಸೂಕ್ತ ಸಮಯದಲ್ಲಿ ನೀಡುವ ವ್ಯವಸ್ಥೆ ಮಾಡಲಾಗಿದೆಯೇ ;

(ಇ) ೨೦೧೫-೧೬ನೇ ಸಾಲಿನಲ್ಲಿ ವೃದ್ಧಾಪ್ಯ ವೇತನ ಹಾಗೂ ವಿಧವಾ ವೇತನದ ಮೊತ್ತವನ್ನು ಹೆಚ್ಚಿಸುವ ಉದ್ದೇಶ ಸರ್ಕಾರಕ್ಕಿದೆಯೇ ?

## ರಾಜ್ಯ ಸರ್ಕಾರಿ ನೌಕರರ ಕ್ರೀಡಾ ಮತ್ತು ಸಾಂಸ್ಕೃತಿಕ ಸ್ಪರ್ಧೆಯಲ್ಲಿ ನೌಕರರಿಗೆ ಆಗುತ್ತಿರುವ ಅನ್ಯಾಯ

**ಶ್ರೀಮತಿ ತಾರಾಅನೂರಾಧ (ನಾಮನಿರ್ದೇಶನ) :-**

೧೩೯೫ (೧೫೨೬) ಮಾನ್ಯ ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ ಮೀನುಗಾರಿಕೆ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ೨೦೧೩-೧೪ ಹಾಗೂ ೨೦೧೪-೧೫ನೇ ಸಾಲಿನಲ್ಲಿ ರಾಜ್ಯ ಸರ್ಕಾರಿ ನೌಕರರ ರಾಜ್ಯ ಮಟ್ಟದ ಕ್ರೀಡಾ ಮತ್ತು ಸಾಂಸ್ಕೃತಿಕ

ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಗಳಿಸಿದವರ ಹೆಸರು, ಜಿಲ್ಲೆ ಮತ್ತು ಭಾಗವಹಿಸಿದ ಕ್ರೀಡೆ ಮತ್ತು ಸಾಂಸ್ಕೃತಿಕ ಸ್ಪರ್ಧೆಗಳ ವಿವರಗಳನ್ನು ನೀಡುವುದು ;

(ಆ) ಸದರಿ ಎರಡೂ ಸಾಲುಗಳಲ್ಲಿ ರಾಜ್ಯ ಮಟ್ಟದ ಕ್ರೀಡಾ ಮತ್ತು ಸಾಂಸ್ಕೃತಿಕ ಸ್ಪರ್ಧೆಯಲ್ಲಿ ಭಾಗವಹಿಸಿ ಪ್ರಥಮ ಸ್ಥಾನ ಗಳಿಸಿ ರಾಷ್ಟ್ರ ಮಟ್ಟದ ಸರ್ಕಾರಿ ನೌಕರರ ಕ್ರೀಡಾ ಮತ್ತು ಸಾಂಸ್ಕೃತಿಕ ಸ್ಪರ್ಧೆಗೆ ಆಯ್ಕೆಯಾದವರ ಹೆಸರು, ಜಿಲ್ಲೆ ಹಾಗೂ ಭಾಗವಹಿಸಿದ ಕ್ರೀಡೆ ಮತ್ತು ಸಾಂಸ್ಕೃತಿಕ ಸ್ಪರ್ಧೆಯ ವಿವರಗಳನ್ನು ನೀಡುವುದು ;

(ಇ) ರಾಷ್ಟ್ರ ಮಟ್ಟದ ಕ್ರೀಡಾ ಮತ್ತು ಸಾಂಸ್ಕೃತಿಕ ಸ್ಪರ್ಧೆಗೆ ಆಯ್ಕೆ ಮಾಡಲು ಇರುವ ಮಾನದಂಡಗಳೇನು ; (ವಿವರ ನೀಡುವುದು)

(ಈ) ಹಲವಾರು ವರ್ಷಗಳಿಂದ ರಾಜ್ಯ ಮಟ್ಟದಲ್ಲಿ ಪ್ರಥಮ ಸ್ಥಾನ ಗಳಿಸಿದ ಅಭ್ಯರ್ಥಿಗಳಿಗೆ ಯಾವುದೇ ಮಾಹಿತಿ ನೀಡದೆ ಕೆಲವು ಅಧಿಕಾರಿ/ನೌಕರರು ಹಾಗೂ ತರಬೇತುದಾರರು ತಮ್ಮ ಪ್ರಭಾವವನ್ನು ಬೀರಿ ತಮಗೆ ಬೇಕಾದ ಅಧಿಕಾರಿ/ನೌಕರರನ್ನು ರಾಷ್ಟ್ರ ಮಟ್ಟಕ್ಕೆ ಆಯ್ಕೆ ಮಾಡಿ ಕಳುಹಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಉ) ಬಂದಿದ್ದಲ್ಲಿ, ರಾಜ್ಯ ಮಟ್ಟದಲ್ಲಿ ಪ್ರಥಮ ಸ್ಥಾನ ಗಳಿಸಿ ರಾಷ್ಟ್ರ ಮಟ್ಟಕ್ಕೆ ಆಯ್ಕೆ ಮಾಡದೇ ಇರುವುದರಿಂದ ಪ್ರತಿಭಾನ್ವಿತ ಕ್ರೀಡಾಪಟುಗಳು ಹಾಗೂ ಸಾಂಸ್ಕೃತಿಕ ಸ್ಪರ್ಧೆಗಳಿಗೆ ಅನ್ಯಾಯ ಮಾಡಿದಂತಾಗುವುದಿಲ್ಲವೇ ; ಇಂತಹ ಅನ್ಯಾಯ ತಡೆಯಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು ?

## ಪ್ಲಾಸ್ಟಿಕ್ ಬಳಕೆ ನಿಷೇಧ

**ಶ್ರೀಮತಿ ತಾರಾಅನೂರಾಧ (ನಾಮನಿರ್ದೇಶನ) :-**

೧೩೯೬ (೧೩೧೬) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದಲ್ಲಿ ಪ್ಲಾಸ್ಟಿಕ್ ಉತ್ಪಾದನೆಯ ಘಟಕ/ಉದ್ದಿಮೆಗಳು/ ಕೈಗಾರಿಕೆಗಳ ಸಂಖ್ಯೆಗಳೆಷ್ಟು ;

(ಆ) ಅವುಗಳು ಪೈಕಿ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯಲ್ಲಿ ಎಷ್ಟು ನೋಂದಣಿಯಾಗಿವೆ ಮತ್ತು ಅವರ ನಿಯಂತ್ರಣದಲ್ಲಿವೆ ;

(ಇ) ನಾಗರೀಕರ ಮತ್ತು ಪ್ರಾಣಿಗಳ ಆರೋಗ್ಯ ಹಿತರಕ್ಷಣೆಗಾಗಿ ಈ ಪ್ಲಾಸ್ಟಿಕ್ ಉತ್ಪಾದನೆ, ಮಾರಾಟ ಮತ್ತು ಬಳಕೆಯನ್ನು ನಿಷೇಧಿಸಬೇಕೆಂದು ಯಾರಿಂದಲಾದರೂ ಸರ್ಕಾರಕ್ಕೆ ನಿರ್ದೇಶನಗಳು ಬಂದಿದೆಯೇ ; ಅಥವಾ ಸರ್ಕಾರವೇ ನಿಷೇಧಿಸಲು ಉದ್ದೇಶವನ್ನು ಹೊಂದಿದೆಯೇ ? (ವಿವರಗಳನ್ನೊದಗಿಸುವುದು)

## ಭೂ ಒತ್ತುವರಿ

**ಶ್ರೀಮತಿ ತಾರಾಅನೂರಾಧ (ನಾಮನಿರ್ದೇಶನ) :-**

೧೩೯೭ (೧೩೧೫) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಬೆಂಗಳೂರು ನಗರ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಲ್ಲಿ ಒತ್ತುವರಿಯಾಗಿರುವ/ಕಬಳಿಕೆಯಾಗಿರುವ ಸರ್ಕಾರಿ ಭೂಮಿ ಎಷ್ಟು; (ವಿಸ್ತೀರ್ಣಗಳೊಡನೆ ಒತ್ತುವರಿ /ಕಬಳಿಕೆದಾರರ ವಿವರ ನೀಡುವುದು)

(ಆ) ಈವರೆಗೆ ಎಷ್ಟು ಸರ್ಕಾರಿ ಭೂಮಿಯ ಒತ್ತುವರಿ/ಕಬಳಿಕೆಯನ್ನು ತೆರವುಗೊಳಿಸಲಾಗಿದೆ ; ಎಷ್ಟು ಬಾಕಿಯಿದೆ ;

(ಇ) ಅಕ್ರಮ ಒತ್ತುವರಿ/ಕಬಳಿಕೆದಾರರ ವಿರುದ್ಧ ಸರ್ಕಾರ ಕೈಗೊಂಡಿರುವ ಕ್ರಮಗಳೇನು ?

## ಶರಾವತಿ ಯೋಜನೆಯ ನಿರಾಶ್ರಿತರು

**ಡಾ॥ ಜಯಮಾಲ ರಾಮಚಂದ್ರ (ನಾಮನಿರ್ದೇಶನ) :-**

೧೩೯೮ (೧೩೬೦) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಶರಾವತಿ ಮುಳುಗಡೆಯ ಎಷ್ಟು ಸಂತ್ರಸ್ತರಿಗೆ ಪುನರ್ವಸತಿ ನೀಡಬೇಕಿತ್ತು ; ಆ ಪೈಕಿ ಎಷ್ಟು ಸಂತ್ರಸ್ತರಿಗೆ ಪುನರ್ವಸತಿ ಒದಗಿಸಲಾಗಿದೆ ; ಎಷ್ಟು ಬಾಕಿಯಿದೆ ;

(ಆ) ಹಲವು ದಶಕಗಳ ಹಿಂದೆಯೇ ಈ ಸಂತ್ರಸ್ತರಿಗೆ ಭೂಮಿಯನ್ನು ಸರ್ಕಾರ ಬಿಡುಗಡೆಗೊಳಿಸಿದ್ದರೂ ಆ ಭೂಮಿಗಳನ್ನು ಗುರುತಿಸಿ ಅಳತೆ ಮಾಡಿ, ನಕಾಶೆ ಸಿದ್ಧಪಡಿಸಿ, ಅರಣ್ಯ ಮತ್ತಿತರೆ ಕಾನೂನು ತೊಡುಕುಗಳನ್ನು ಸರಿಪಡಿಸಿ ಸಂತ್ರಸ್ತರಿಗೆ ಒದಗಿಸಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಬಂದಿದ್ದಲ್ಲಿ, ಐದು ದಶಕಗಳಿಗೂ ಹೆಚ್ಚು ಅವಧಿಯ ಈ ಸಮಸ್ಯೆಗೆ ಸರ್ಕಾರ ಯಾವ ಕಾಲಮಿತಿಯೊಳಗೆ ಪರಿಹಾರ ಒದಗಿಸಲಿದೆ ?

# ಕೆರೆಗಳ ಒತ್ತುವರಿ

**ಡಾ॥ ಜಯಮಾಲ ರಾಮಚಂದ್ರ (ನಾಮನಿರ್ದೇಶನ) :-**

೧೩೯೯ (೧೩೬೧) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಬೆಂಗಳೂರು ನಗರ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಲ್ಲಿ, ಜಲಸಂಪನ್ಮೂಲ ಇಲಾಖೆಯ ವ್ಯಾಪ್ತಿಗೆ ಒಳಪಡುವ ಕೆರೆಗಳ ಸಂಖ್ಯೆ ಎಷ್ಟು ; (ಪ್ರತಿ ಕೆರೆವಾರು ವಿಸ್ತೀರ್ಣ, ನೀರಿನ ಮೂಲಗಳ ವಿವರಗಳನ್ನು ಒದಗಿಸುವುದು)

(ಆ) ಇವುಗಳ ಪೈಕಿ ಯಾವ್ಯಾವ ಕೆರೆಗಳು ಯಾವ್ಯಾವ ಇಲಾಖೆ/ ಪ್ರಾಧಿಕಾರಿಗಳ ನಿರ್ವಹಣೆ ನಿಯಂತ್ರಣಗಳಲ್ಲಿವೆ ;

(ಇ) ಇವುಗಳ ಪೈಕಿ, ಎಷ್ಟು ಕೆರೆಗಳು ಒತ್ತುವರಿಯಾಗಿವೆ/ ಭೂ ಕಬಳಿಕೆಯಾಗಿವೆ ; (ಪ್ರತಿ ಕೆರೆಗಳ ಹೆಸರು, ಒತ್ತುವರಿ/ ಕಬಳಿಕೆಯ ವಿಸ್ತೀರ್ಣದ ವಿವರಗಳನ್ನು ಒದಗಿಸುವುದು)

(ಈ) ಒತ್ತುವರಿ/ಕಬಳಿಕೆ ತೆರವುಗೊಳಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ; ಯಾವ ಕಾಲಮಿತಿ ಒಳಗೆ ಒತ್ತುವರಿಗಳನ್ನು ಸಂಪೂರ್ಣವಾಗಿ ತೆರವುಗೊಳಿಸಲಾಗುವುದು ;

(ಉ) ಕೆರೆ ಜಮೀನುಗಳ ಎಷ್ಟು ಒತ್ತುವರಿದಾರರು/ಭೂ ಕಬಳಿಕೆದಾರರ ವಿರುದ್ಧ ಸರ್ಕಾರ ಕ್ರಮ ಕೈಗೊಂಡಿದೆ ? (ವಿವರಗಳನ್ನು ಒದಗಿಸುವುದು)

## ಕರಾವಳಿ ನಿಯಂತ್ರಣ ನಿರಾಕ್ಷೇಪಣಾ ಪತ್ರ

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೪೦೦ (೧೩೭೫) ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಉಡುಪಿ ಜಿಲ್ಲೆಯಲ್ಲಿ ಪ್ರಾದೇಶಿಕರು ಪರಿಸರ ಇಲಾಖೆಯಲ್ಲಿ (ಕರಾವಳಿ ನಿಯಂತ್ರಣ ವಲಯ) ಕಾರ್ಯನಿರ್ವಹಿಸುತ್ತಿದ್ದಾರೆಯೇ ;

(ಆ) ಇಲ್ಲದಿದ್ದಲ್ಲಿ, ಎಷ್ಟು ತಿಂಗಳಿನಿಂದ ಸದರಿ ಹುದ್ದೆ ಖಾಲಿ ಇರುತ್ತದೆ ;

(ಇ) ಸದರಿ ಹುದ್ದೆಯು ಖಾಲಿ ಇರುವುದು ಸರ್ಕಾರದ ಗಮನದಲ್ಲಿದೆಯೇ ; ಇದ್ದಲ್ಲಿ ಸರ್ಕಾರ ಯಾವ ಕ್ರಮ ಕೈಗೊಂಡಿದೆ ;

(ಈ) ಕರಾವಳಿ ನಿಯಂತ್ರಣ ವಲಯ ನಿರಾಕ್ಷೇಪಣಾ ಪತ್ರ ಕೋರಿ ಸಲ್ಲಿಸುವ ಅರ್ಜಿಗಳು ವಿಳಂಬವಾಗಿ ವಿಲೇವಾರಿ ಯಾಗುತ್ತಿರುವುದರಿಂದ ಸದರಿ ಸೇವೆಯನ್ನು ಸಕಾಲ ವ್ಯಾಪ್ತಿಗೆ ತರಲು ಸರ್ಕಾರಕ್ಕಿರುವ ತೊಡಕುಗಳೇನು ; ಈ ಬಗ್ಗೆ ಸರ್ಕಾರ ಯಾವ ಕ್ರಮಕೈಗೊಳ್ಳಲಿದೆ ?

## ಕುಂದಾಪುರ ಮಿನಿ ವಿಧಾನಸೌಧಕ್ಕೆ ಕಛೇರಿ ಸ್ಥಳಾಂತರಿಸುವ ಬಗ್ಗೆ

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೪೦೧ (೧೫೨೮) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಉಡುಪಿ ಜಿಲ್ಲೆಯ ಕುಂದಾಪುರ ತಾಲ್ಲೂಕಿನಲ್ಲಿ ನಿರ್ಮಿಸಲಾಗಿರುವ ಮಿನಿ ವಿಧಾನಸೌಧದ ಅಂದಾಜು ಮೊತ್ತವೆಷ್ಟು ; ಸರ್ಕಾರದಿಂದ ಬಿಡುಗಡೆಯಾದ ಮೊತ್ತವೆಷ್ಟು ;

(ಆ) ತಾಲ್ಲೂಕು ಕಛೇರಿ ಸೇರಿ ಇತರೆ ಕಛೇರಿಗಳು ಉದ್ಘಾಟನೆಗೊಂಡ ಮಿನಿ ವಿಧಾನಸೌಧಕ್ಕೆ ಸ್ಥಳಾಂತರಗೊಳ್ಳದೇ ಕಛೇರಿ ಪ್ರಾರಂಭಿಸದೇ ಇರುವುದು ನಿಜವೇ ; ಇಲ್ಲವಾದಲ್ಲಿ, ಯಾವ ಕಾರಣದಿಂದ ಕಛೇರಿಗಳು ಸ್ಥಳಾಂತರಗೊಂಡಿರುವುದಿಲ್ಲ ; ಯಾವಾಗ ಪ್ರಾರಂಭಿಸಲಾಗುವುದು ;

(ಇ) ಮಿನಿ ವಿಧಾನಸೌಧದ ಕಟ್ಟಡಕ್ಕೆ ವಿದ್ಯುತ್ ಸಂಪರ್ಕ ಇಲ್ಲಿಯವರೆಗೆ ನೀಡದಿರುವುದು ನಿಜವೇ; ಯಾವ ಕಾರಣದಿಂದ ವಿದ್ಯುತ್ ಸಂಪರ್ಕ ನೀಡಲಾಗಿಲ್ಲ ; ಯಾವಾಗ ವಿದ್ಯುತ್ ಸಂಪರ್ಕ ನೀಡಲಾಗುವುದು ;

(ಈ) ಮಿನಿ ವಿಧಾನಸೌಧವನ್ನು ವ್ಯವಸ್ಥಿತಗೊಳಿಸುವ ಬಗ್ಗೆ ಹಾಗೂ ಕಛೇರಿಗಳನ್ನು ಪ್ರಾರಂಭಿಸಿ ಸಾರ್ವಜನಿಕ ಉಪಯೋಗಕ್ಕೆ ದೊರಕುವಂತೆ ಮಾಡಲು ಸರ್ಕಾರ ಯಾವ ಕ್ರಮಕೈಗೊಳ್ಳಲಿದೆ ? (ಸಂಪೂರ್ಣ ವಿವರ ನೀಡುವುದು)

## ಕುಡಿಯುವ ನೀರಿನ ಬಿಲ್ಲಿನ ಪಾವತಿ ಬಗ್ಗೆ

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-**

೧೪೦೨ (೧೭೦೭) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ೨೦೧೪ರ ಬೇಸಿಗೆ ಅವಧಿಯಲ್ಲಿ ಉಡುಪಿ ಜಿಲ್ಲೆಯ ಗ್ರಾಮ ಪಂಚಾಯತಿಗಳು ಟ್ಯಾಂಕರ್ ಮೂಲಕ ತುರ್ತು ಕುಡಿಯುವ ನೀರು ಸರಬರಾಜು ಮಾಡಿದ ಬಿಲ್ಲನ್ನು ಸಂಪೂರ್ಣವಾಗಿ ಪಾವತಿ ಮಾಡದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಉಡುಪಿ ಜಿಲ್ಲೆಗೆ ಸರ್ಕಾರದಿಂದ ತುರ್ತು ಕುಡಿಯುವ ನೀರಿನ ವ್ಯವಸ್ಥೆಗೆ ಬಿಡುಗಡೆಯಾದ ಮೊತ್ತ ಎಷ್ಟು ; (ಸರ್ಕಾರದಿಂದ ಬಿಡುಗಡೆಯಾದ ದಿನಾಂಕ ಸಹಿತ ತಾಲ್ಲೂಕುವಾರು ವಿವರ ನೀಡುವುದು)

(ಇ) ೨೦೧೪ರ ಬೇಸಿಗೆ ಅವಧಿಯಲ್ಲಿ ಟ್ಯಾಂಕರ್ ಮೂಲಕ ತುರ್ತು ಕುಡಿಯುವ ನೀರು ಸರಬರಾಜು ಮಾಡಿದ ಸಂಬಂಧ ಗ್ರಾಮ ಪಂಚಾಯತಿಗಳು ತಹಶೀಲ್ದಾರರ ಕಛೇರಿಗೆ ಸಲ್ಲಿಸಿರುವ ಬಿಲ್ಲಿನ ಮೊತ್ತ ಮತ್ತು ಪಾವತಿ ಮಾಡಿದ ಮೊತ್ತದ ಸಂಪೂರ್ಣ ವಿವರ ಗ್ರಾಮ ಪಂಚಾಯತ್‌ವಾರು ನೀಡುವುದು ;

(ಈ) ಗ್ರಾಮ ಪಂಚಾಯತಿಗಳಿಗೆ ಬಾಕಿ ಮೊತ್ತವನ್ನು ಪಾವತಿಸಲು ಇರುವ ತೊಡಕುಗಳೇನು ; ಈ ಬಗ್ಗೆ ಸರ್ಕಾರ ಯಾವ ಕ್ರಮ ಕೈಗೊಳ್ಳಲಿದೆ ;

(ಉ) ತುರ್ತು ಕುಡಿಯುವ ನೀರಿನ ವ್ಯವಸ್ಥೆಯನ್ನು ಸಂಪೂರ್ಣವಾಗಿ ಗ್ರಾಮ ಪಂಚಾಯತಿಗಳು ಅಥವಾ ತಾಲ್ಲೂಕು ಪಂಚಾಯತಿ ಮೂಲಕ ಅನುಷ್ಠಾನಗೊಳಿಸಲು ಇರುವ ತೊಡಕುಗಳೇನು ; ಈ ಬಗ್ಗೆ ಸರ್ಕಾರ ಯಾವ ಕ್ರಮ ಕೈಗೊಳ್ಳಲಿದೆ ?

## ಸಣ್ಣ ನೀರಾವರಿ ಇಲಾಖೆಯ ಕಾರ್ಯಕ್ರಮಗಳು

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-**

೧೪೦೩ (೧೩೭೬) ಮಾನ್ಯ ಸಣ್ಣ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಸಣ್ಣ ನೀರಾವರಿ ಇಲಾಖೆಯ ಮೂಲಕ ಅನುಷ್ಠಾನಗೊಳ್ಳುತ್ತಿರುವ ಕಾರ್ಯಕ್ರಮಗಳಾವುವು ;

—

(ಆ) ಸದರಿ ಕಾರ್ಯಕ್ರಮಗಳು ಸಮರ್ಪಕವಾಗಿ ಅನುಷ್ಠಾನಗೊಳ್ಳುತ್ತಿವೆಯೇ ;

(ಇ) ಸದರಿ ಕಾರ್ಯಕ್ರಮಗಳಿಗೆ ಬಿಡುಗಡೆಯಾದ ಅನುದಾನ ಎಷ್ಟು; ಖರ್ಚಾದ ಅನುದಾನ ಎಷ್ಟು ? (ಜಿಲ್ಲಾವಾರು ವಿವರ ನೀಡುವುದು)

## ಸೌರಶಕ್ತಿ ಬೇಲಿ ನಿರ್ಮಿಸಿಕೊಳ್ಳಲು ಸಹಾಯಧನ

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ**
**(ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-**

೧೪೦೪ (೧೭೭೯) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದಲ್ಲಿ ರೈತರು ತಮ್ಮ ಬೆಳೆಗಳನ್ನು ವನ್ಯ ಜೀವಿಗಳ ದಾಳಿಯಿಂದ ರಕ್ಷಿಸಿಕೊಳ್ಳಲು ಸೌರಶಕ್ತಿ ಬೇಲಿ ನಿರ್ಮಿಸಿಕೊಳ್ಳಲು ಸರ್ಕಾರವು ಸಹಾಯಧನ ವಿತರಿಸುತ್ತಿರುವುದು ನಿಜವೇ ;

(ಆ) ಹಾಗಿದ್ದಲ್ಲಿ ರಾಜ್ಯದಲ್ಲಿ ೨೦೧೪-೧೫ನೇ ಸಾಲಿನಲ್ಲಿ ಒಟ್ಟು ಎಷ್ಟು ಜನ ರೈತರು ಈ ಯೋಜನೆಯ ಸದುಪಯೋಗ ಪಡೆದುಕೊಂಡಿರುತ್ತಾರೆ ; ಸಹಾಯಧನ ಪಡೆದುಕೊಂಡಿರುವ ರೈತರ ಸಂಖ್ಯೆ ಎಷ್ಟು ಹಾಗೂ ಸಹಾಯಧನ ಮೊತ್ತ ಎಷ್ಟು ;

(ಇ) ಬೆಳಗಾವಿ ಜಿಲ್ಲೆಯಲ್ಲಿ ೨೦೧೪-೧೫ನೇ ಸಾಲಿನಲ್ಲಿ ಒಟ್ಟು ಎಷ್ಟು ಜನ ರೈತರು ಈ ಯೋಜನೆಯ ಸದುಪಯೋಗ ಪಡೆದುಕೊಂಡಿರುತ್ತಾರೆ ; ಹಾಗೂ ಈಗಾಗಲೇ ಸಹಾಯಧನ ಪಡೆದಿರುವ ಸಂಖ್ಯೆ ಎಷ್ಟು ; ಸಹಾಯಧನ ಪಡೆದಿರುವ ಮೊತ್ತ ಎಷ್ಟು ;

(ಈ) ಇನ್ನೂ ಜಿಲ್ಲೆಯಲ್ಲಿ ನೀಡಬೇಕಾಗಿರುವ ಬಾಕಿ ಸಹಾಯ ಧನ ಎಷ್ಟು ; ಬಾಕಿ ಇರುವ ಸಹಾಯಧನವನ್ನು ಯಾವ ಕಾಲಮಿತಿಯಲ್ಲಿ ರೈತರಿಗೆ ಪಾವತಿಸಲಾಗುವುದು ? (ವಿವರ ನೀಡುವುದು)

## ಶ್ರೀ ಬಸವೇಶ್ವರ ಏತ ನೀರಾವರಿ ಯೋಜನೆ ಅನುಷ್ಠಾನ

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ**
**(ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-**

೧೪೦೫ (೧೫೯೩) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಬೆಳಗಾವಿ ಜಿಲ್ಲೆಯ ಅಥಣಿ ತಾಲ್ಲೂಕಿನ ಹಿಪ್ಪರಗಿ ಹಿನ್ನಿರಿನಿಂದ ಶ್ರೀ ಬಸವೇಶ್ವರ ಏತ ನೀರಾವರಿ ಯೋಜನೆಯುನ್ನು ಅನುಷ್ಠಾನಗೊಳಿಸಲು ಬಜೆಟ್‌ನಲ್ಲಿ ಪ್ರಸ್ತಾಪಿಸಲಾಗಿದೆಯೇ ;

(ಆ) ಹಾಗಿದ್ದಲ್ಲಿ, ಈ ಯೋಜನೆಯಿಂದ ಯಾವ ಯಾವ ಗ್ರಾಮಗಳು ಮತ್ತು ಎಷ್ಟು ಹೆಕ್ಟೇರ್ ಭೂಮಿಯು ನೀರಾವರಿಗೆ ಒಳಪಡುತ್ತದೆ ;

(ಇ) ಈ ಯೋಜನೆಯ ಅಂದಾಜು ಮೊತ್ತವೆಷ್ಟು ; ೨೦೧೪-೧೫ನೇ ಸಾಲಿನಲ್ಲಿ ಯೋಜನೆಗೆ ಕಾಯ್ದಿರಿಸಿದ ಅನುದಾನ ಎಷ್ಟು ; ಅದರಲ್ಲಿ ಖರ್ಚು ಮಾಡಿದ ಅನುದಾನ ಎಷ್ಟು ; ಒಟ್ಟಾರೆ ಯೋಜನೆಯ ಆರ್ಥಿಕ ಮತ್ತು ಭೌತಿಕ ಪ್ರಗತಿ ಏನು ; (ವಿವರ ಒದಗಿಸುವುದು)

(ಈ) ಕಾಮಗಾರಿಯನ್ನು ಯಾವ ಕಾಲಮಿತಿಯಲ್ಲಿ ಪೂರ್ಣ ಗೊಳಿಸಲಾಗುವುದು ?

## ವನ್ಯ ಜೀವಿಗಳ ಸಂಘರ್ಷ

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-**

೧೪೦೬ (೧೫೫೪) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದಲ್ಲಿ ವನ್ಯಜೀವಿ ಸಂಘರ್ಷದಿಂದಾಗಿ ವ್ಯಕ್ತಿಗಳು ಮತ್ತು ಸಾರ್ವಜನಿಕರ ಎಮ್ಮೆ, ದನಗಳು ಮೃತಪಟ್ಟಲ್ಲಿ ಅವುಗಳ ಮಾಲೀಕರಿಗೆ ಪರಿಹಾರ ಧನವನ್ನು ಹೆಚ್ಚಿಸಿರುವುದು ನಿಜವೇ ;

(ಆ) ಹಾಗಿದ್ದಲ್ಲಿ, ಯಾವ ಅನುಪಾತದಲ್ಲಿ ಪರಿಹಾರ ಧನವನ್ನು ಹೆಚ್ಚಿಸಲಾಗಿದೆ ;

(ಇ) ೨೦೧೪-೧೫ನೇ ಸಾಲಿನಲ್ಲಿ ವನ್ಯಜೀವಿಗಳ ಸಂಘರ್ಷದಿಂದ ಎಷ್ಟು ಜಾನುವಾರುಗಳು ಮೃತಪಟ್ಟಿವೆ ಹಾಗೂ ಎಷ್ಟು ಜನರು ಮರಣಪಟ್ಟಿದ್ದಾರೆ ; ಅವರಿಗೆ ವಿತರಿಸಿದ ಪರಿಹಾರ ಎಷ್ಟು ; (ವಿವರ ನೀಡುವುದು)

(ಈ) ರಾಜ್ಯದಲ್ಲಿ ಇಂತಹ ಪ್ರಕರಣಗಳಲ್ಲಿ ಪರಿಹಾರಧನ ವಿತರಿಸಲು ಬಾಕಿ ಇದ್ದರೆ ಅದಕ್ಕೆ ಕಾರಣಗಳೇನು ; ಬಾಕಿ ಇರುವ ಪ್ರಕರಣಗಳನ್ನು ಯಾವ ಕಾಲಮಿತಿಯಲ್ಲಿ ವಿತರಿಸುವಿರಿ ?

## ಕೃಷ್ಣಾ ಮತ್ತು ಮಲಪ್ರಭಾ ಯೋಜನಾ ವ್ಯಾಪ್ತಿಯಲ್ಲಿ ಫಲವತ್ತಾದ ಭೂಮಿ ಸವಳು–ಜವಳಾಗಿರುವ ಕುರಿತು

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ**
**(ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೪೦೭ (೧೫೯೨) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಕೃಷ್ಣಾ ಮತ್ತು ಮಲಪ್ರಭಾ ಯೋಜನಾ ವ್ಯಾಪ್ತಿಯಲ್ಲಿ ಬರುವ ಅಚ್ಚುಕಟ್ಟು ಪ್ರದೇಶದಲ್ಲಿ ಫಲವತ್ತಾದ ಭೂಮಿಯು ಸವಳು– ಜವಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಒಟ್ಟು ಎಷ್ಟು ಹೆಕ್ಟೇರ್ ಭೂಮಿಯು ಸವಳು–ಜವಳಾಗಿರುತ್ತದೆ ; ೨೦೧೪–೧೫ನೇ ಸಾಲಿನಲ್ಲಿ ಎಷ್ಟು ಹೆಕ್ಟೇರ್ ಸವಳು ಬಾಧಿತ ಪ್ರದೇಶದ ಪುನರುತ್ಥಾನ ಮಾಡಲಾಗಿದೆ ;

(ಇ) ಸವಳು–ಜವಳು ಬಾಧಿತ ಪ್ರದೇಶಗಳನ್ನು ಪುನರುತ್ಥಾನ ಮಾಡಲು ೨೦೧೪–೧೫ರ ಸಾಲಿನಲ್ಲಿ ಕಾಯ್ದಿರಿಸಿದ ಅನುದಾನವೆಷ್ಟು ; ಇಲ್ಲಿಯವರೆಗೆ ಖರ್ಚು ಮಾಡಲಾಗಿರುವ ಹಣ ಎಷ್ಟು ;

(ಈ) ಒದಗಿಸಲಾದ ಅನುದಾನದಲ್ಲಿ ಖರ್ಚಾಗದೆ ಇರುವ ಮೊತ್ತ ಎಷ್ಟು ; ಇದಕ್ಕೆ ಕಾರಣಗಳೇನು ; ಬಾಕಿ ಉಳಿದ ಅನುದಾನವನ್ನು ಯಾವ ಕಾಲಮಿತಿಯಲ್ಲಿ ಖರ್ಚು ಮಾಡುವಿರಿ ;

(ಉ) ಕೆಲವೊಂದು ಕಡೆ ತೆರೆದ ಬಸಿಗಾಲುವೆ ಬದಲಾಗಿ ಅಂತರ ಬಸಿಗಾಲುವೆಗಳನ್ನು ನಿರ್ಮಿಸುವ ವಿಚಾರ ಸರ್ಕಾರದ ಮುಂದಿದೆಯೇ ?

## ಖಾಸಗಿ ಭೂಮಾಲೀಕರಿಗೆ ಜಮೀನುಗಳಲ್ಲಿ ನೆಡಲು ಸಸಿಗಳನ್ನು ವಿತರಿಸುವುದು

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ**
**(ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-**

೧೪೦೮ (೧೭೦೮) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದಲ್ಲಿ ಖಾಸಗಿ ಭೂಮಾಲೀಕರು ತಮ್ಮ ಜಮೀನುಗಳಲ್ಲಿ ನೆಡಲು ಸಸಿಗಳನ್ನು ವಿತರಿಸಿರುವುದು ನಿಜವೇ ;

(ಆ) ಹಾಗಿದ್ದಲ್ಲಿ ಕಳೆದ ಸಾಲಿನಲ್ಲಿ ಒಟ್ಟು ಎಷ್ಟು ಸಸಿಗಳನ್ನು ವಿತರಿಸಲಾಗಿದೆ ; ಎಷ್ಟು ಜನ ರೈತರಿಗೆ ವಿತರಿಸಲಾಗಿದೆ ;

(ಇ) ಸಸಿಗಳನ್ನು ತಯಾರಿಸಲು ಸರ್ಕಾರದಿಂದ ಒಟ್ಟು ಎಷ್ಟು ವೆಚ್ಚ ಮಾಡಲಾಗಿದೆ ; ಬೆಳಗಾವಿ ಜಿಲ್ಲೆಯಲ್ಲಿ ಎಷ್ಟು ಜನ ರೈತರಿಗೆ ಸಸಿಗಳನ್ನು ವಿತರಿಸಲಾಗಿದೆ ; ವಿತರಿಸಲಾದ ರೈತರ ಪೈಕಿ ಎಷ್ಟು ಜನ ರೈತರು ಸಸಿಗಳನ್ನು ಬೆಳಸಿರುತ್ತಾರೆ ;

(ಈ) ರೈತರು ಸಸಿಗಳನ್ನು ನೆಟ್ಟ ಮೇಲೆ ಅವುಗಳನ್ನು ಬೆಳೆಸಲು ಸರ್ಕಾರದಿಂದ ಪ್ರೋತ್ಸಾಹ ಧನ ವಿತರಿಸಿದೆಯೇ ? (ವಿವರಣೆ ನೀಡುವುದು)

## ಹಾವೇರಿ ಜಿಲ್ಲೆಯ ಕೃಷ್ಣಾ ಅಭಾಯಾರಣ್ಯ ಬಗ್ಗೆ

**ಶ್ರೀ ಸೋಮಣ್ಣ ಮ. ಬೇವಿನಮರದ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೪೨೯ (೧೬೮೨) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಹಾವೇರಿ ಜಿಲ್ಲೆಯಲ್ಲಿ ಇರುವ ಕೃಷ್ಣ ಅಭಾಯಾರಣ್ಯ (ಜಿಂಕೆ) ಎಷ್ಟು ವಿಸ್ತೀರ್ಣ ಹೊಂದಿದೆ ;

(ಆ) ಇಲ್ಲಿರುವ ಜಿಲ್ಲೆಗಳ ಸಂಖ್ಯೆ ಎಷ್ಟು ; ಇವುಗಳಿಗೆ ವಾಸಿಸಲು ಯೋಗ್ಯವಾದ ವ್ಯವಸ್ಥೆ ಮಾಡಲಾಗಿದೆಯೇ ;

(ಇ) ಆಗಿದ್ದರೆ, ಜಿಂಕೆಗಳ ಹಾವಳಿಯಿಂದ ರೈತರ ಬೆಳೆ ಹಾಳಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದರೆ, ಇದನ್ನು ತಪ್ಪಿಸಲು ಯಾವ ಕ್ರಮವನ್ನು ತೆಗೆದುಕೊಳ್ಳಲಾಗುವುದು ?

## ಸಣ್ಣ ನೀರಾವರಿ ಯೋಜನೆಯಡಿಯಲ್ಲಿನ ಹಾವೇರಿ ಜಿಲ್ಲೆಯ ಕೆರೆಗಳು

**ಶ್ರೀ ಸೋಮಣ್ಣ ಮ. ಬೇವಿನಮರದ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೪೧೦ (೧೬೯೬) ಮಾನ್ಯ ಸಣ್ಣ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಹಾವೇರಿ ಜಿಲ್ಲೆಯಲ್ಲಿ ಸಣ್ಣ ನೀರಾವರಿ ಯೋಜನೆಯಡಿಯಲ್ಲಿ ಬರುವ ಕೆರೆಗಳ ಸಂಖ್ಯೆ ಎಷ್ಟು ; (ತಾಲ್ಲೂಕುವಾರು ಮಾಹಿತಿ ನೀಡುವುದು)

(ಆ) ಸದರಿ ಕೆರೆಗಳಲ್ಲಿ ಕಳೆದ ಮೂರು ವರ್ಷಗಳಲ್ಲಿ ಎಷ್ಟು ಕೆರೆಗಳನ್ನು ಅಭಿವೃದ್ಧಿ ಪಡಿಸಲಾಗಿದೆ ; ಅಭಿವೃದ್ಧಿಗಾಗಿ ಖರ್ಚು ಮಾಡಿರುವ ಮೊತ್ತ ಎಷ್ಟು ;

(ಇ) ಸದರಿ ಕೆರೆಗಳಿಂದ ಎಷ್ಟು ಎಕರೆ ಭೂಮಿಗೆ ನೀರಾವರಿ ಸೌಲಭ್ಯ ಕಲ್ಪಿಸಲಾಗಿದೆ ; (ತಾಲ್ಲೂಕುವಾರು ವಿವರ ನೀಡುವುದು)

(ಈ) ಸದರಿ ಕೆರೆಗಳನ್ನು ಹೂಳೆತ್ತಲು ಮತ್ತು ಅಭಿವೃದ್ಧಿಪಡಿಸಲು ಕಳೆದ ೨ ವರ್ಷಗಳಲ್ಲಿ ಖರ್ಚು ಮಾಡಿರುವ ಹಣವೆಷ್ಟು ?

## ಟಿ.ಬಿ. ಬೋರ್ಡ್ ವಶದಲ್ಲಿರುವ ಭೂಮಿ

**ಶ್ರೀ ಮೃತ್ಯುಂಜಯ ಜಿನಗಾ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-**

೧೪೧೧ (೧೭೫೩) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ತುಂಗಭದ್ರಾ ಮಂಡಳಿ (ಟಿ.ಬಿ. ಬೋರ್ಡ್) ವ್ಯಾಪ್ತಿಯಲ್ಲಿರುವ ನಿಶಾನಿ ಕ್ಯಾಂಪ್, ವಂಕಾ ಕ್ಯಾಂಪ್, ಪಿ.ಎಲ್.ಸಿ. ಕ್ಯಾಂಪ್, ಈ.ವಿ. ಕ್ಯಾಂಪ್, ಡ್ರೆಸ್ ಕ್ಯಾಂಪ್ ಮತ್ತು ಹಳೆಯ ಅಮರಾವತಿ ಕಾಲೋನಿ ಪ್ರದೇಶ ಭೂಮಿ ಟಿ.ಬಿ. ಬೋರ್ಡ್‌ಗೆ ಸಂಬಂಧಿಸಿದ್ದೆ ;

(ಆ) ಈ ಭೂ ಪ್ರದೇಶದ ವ್ಯಾಪ್ತಿಯ ಕ್ಯಾಂಪ್ ಮತ್ತು ಕಾಲೋನಿಯಲ್ಲಿ ವಾಸಿಸುವ ಜನರಿಗೆ ಎಲ್ಲಾ ಮೂಲಭೂತ ಸೌಲಭ್ಯಗಳನ್ನು ಒದಗಿಸಲಾಗಿದೆಯೇ ; ಒದಗಿಸಿದ್ದಲ್ಲಿ ಅದರ ವಿವರ ನೀಡುವುದು ;

(ಇ) ಈ ಪ್ರದೇಶದಲ್ಲಿರುವ ಭೂಮಿಯ ಸಮಗ್ರ ಅಭಿವೃದ್ಧಿಗಾಗಿ ಟಿ.ಬಿ. ಬೋರ್ಡ್ ವಶದಲ್ಲಿರುವ ಭೂಮಿಯನ್ನು ಕರ್ನಾಟಕ ರಾಜ್ಯ ಸರ್ಕಾರಕ್ಕೆ ಹಸ್ತಾಂತರಿಸಲಾಗುವುದೇ ;

(ಈ) ಈಗಾಗಲೇ ಟಿ.ಬಿ. ಬೋರ್ಡ್ ವಶದಲ್ಲಿದ್ದ ಎಷ್ಟು ಭೂಮಿಯನ್ನು ರಾಜ್ಯ ಸರ್ಕಾರಕ್ಕೆ ಹಸ್ತಾಂತರಿಸಲಾಗಿದೆ ;

(ಉ) ಉಳಿದಂತ ಭೂಮಿಯನ್ನು ರಾಜ್ಯ ಸರ್ಕಾರಕ್ಕೆ ಹಸ್ತಾಂತರಿಸಲು ಶೀಘ್ರದಲ್ಲಿ ಕ್ರಮ ಕೈಗೊಳ್ಳಲಾಗುವುದೇ ?

## ನೆಮ್ಮದಿ ಕೇಂದ್ರಗಳ ಬಗ್ಗೆ

**ಶ್ರೀ ಸೋಮಣ್ಣ ಮ. ಬೇವಿನಮರದ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೪೧೨ (೧೬೯೭) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ನೆಮ್ಮದಿ ಕೇಂದ್ರಗಳು ಸಮರ್ಪಕವಾಗಿ ಸೇವೆ ಸಲ್ಲಿಸದೆ ಗ್ರಾಮೀಣ ಜನಸಾಮಾನ್ಯರಿಗೆ ಹಾಗೂ ರೈತಾಪಿ ಜನರಿಗೆ ತೀವ್ರ ಅನಾನುಕೂಲವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಬಂದಿದ್ದರೆ, ಪ್ರತಿಯೊಂದು ಹೋಬಳಿ ಕೇಂದ್ರದಲ್ಲಿಯೂ ಕೂಡ ನಾಡ ಕಛೇರಿಗಳನ್ನು ಪ್ರಾರಂಭಿಸಿ ನೆಮ್ಮದಿ ಕೇಂದ್ರಗಳನ್ನು ಅಲ್ಲಿ ಪ್ರಾರಂಭಿಸಲಾಗುವುದೆ ;

(ಇ) ಹಾವೇರಿ ಜಿಲ್ಲೆಯಲ್ಲಿ ಈಗ ಇರುವ ನೆಮ್ಮದಿ ಕೇಂದ್ರಗಳ ಸಂಖ್ಯೆ ಎಷ್ಟು ; ಅವು ಎಲ್ಲೆಲ್ಲಿ ಇವೆ ; ಇದರ ನಿರ್ವಹಣೆಯನ್ನು ಯಾರಿಗೆ ವಹಿಸಲಾಗಿದೆ ;

(ಈ) ಇನ್ನೂ ಮುಂದೆ ನೆಮ್ಮದಿ ಕೇಂದ್ರಗಳನ್ನು ಹೆಚ್ಚು ಮಾಡಿ ಅವುಗಳು ನೀಡುವ ಗಣಕೀಕೃತ ದಾಖಲೆಗಳಿಂದ ಜನಸಾಮಾನ್ಯರಿಗೆ ಅನುಕೂಲ ಕಲ್ಪಿಸಿಕೊಡಲಾಗುವುದೇ ; ಹಾವೇರಿ ಜಿಲ್ಲೆಯಲ್ಲಿ ಹೊಸದಾಗಿ ನೆಮ್ಮದಿ ಕೇಂದ್ರಗಳನ್ನು ಎಲ್ಲೆಲ್ಲಿ ತೆರೆಯಲಾಗುವುದು ? (ಮಾಹಿತಿ ಒದಗಿಸುವುದು)

## ಮೀನುಗಾರಿಕೆ ಲಾಭ ನಷ್ಟದ ಬಗ್ಗೆ

**ಶ್ರೀ ಸೋಮಣ್ಣ ಮ. ಬೇವಿನಮರದ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೪೧೩ (೧೬೦೧) ಮಾನ್ಯ ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ ಮೀನುಗಾರಿಕೆ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದ ಮೀನುಗಾರಿಕೆ ಇಲಾಖೆಯಲ್ಲಿ ಲಾಭ ಮತ್ತು ನಷ್ಟದಲ್ಲಿ ನಡೆಯುತ್ತಿರುವ ಸಂಸ್ಥೆಗಳಾವುವು ;

(ಆ) ಒಳನಾಡಿನ ಮೀನುಗಾರಿಕೆಗೆ ತಗುಲಿದ ವೆಚ್ಚ ಎಷ್ಟು ; ಮತ್ತು ಆದಾಯ ಎಷ್ಟು ;

(ಇ) ಹಾವೇರಿ ಮತ್ತು ಧಾರವಾಡ ಜಿಲ್ಲೆಗಳ ಕೆರೆ ಅಣೆಕಟ್ಟುಗಳಲ್ಲಿ ಸಾಕಲಾದ ಮೀನಿನ ಮರಿಗಳ ಸಂಖ್ಯೆ ಎಷ್ಟು ; ಅದಕ್ಕೆ ತಗಲುವ ವೆಚ್ಚ ಎಷ್ಟು ; ಮತ್ತು ಅದರಿಂದ ಬಂದ ಆದಾಯ ಎಷ್ಟು ?

## ಸರ್ಕಾರಿ ಐ.ಟಿ.ಐ. ಕಾಲೇಜುಗಳ ಬಗ್ಗೆ

**ಶ್ರೀ ಅಲ್ಲಮಪ್ರಭು ಪಾಟೀಲ್(ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-**

೧೪೧೪ (೧೬೩೮) ಮಾನ್ಯ ಕಾರ್ಮಿಕ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಯಲ್ಲಿರುವ ಐ.ಟಿ.ಐ. ಕಾಲೇಜುಗಳ ಸಂಖ್ಯೆ ಎಷ್ಟು ; (ತಾಲ್ಲೂಕುವಾರು ವಿವರ ನೀಡುವುದು)

(ಆ) ಈ ಕಾಲೇಜುಗಳಿಗೆ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸಲಾಗಿದೆಯೇ ;

(ಇ) ಈ ಮೂಲಭೂತ ಸೌಲಭ್ಯಕ್ಕಾಗಿ ಸರ್ಕಾರ ಕಳೆದ ೩ ವರ್ಷಗಳಿಂದ ಬಿಡುಗಡೆ ಮಾಡಿರುವ ಅನುದಾನ ಎಷ್ಟು ; ಬಾಕಿ ಉಳಿದಿರುವ ಅನುದಾನ ಎಷ್ಟು ?

## ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಯ ಅರಣ್ಯ ಪ್ರದೇಶ

**ಶ್ರೀ ಅಲ್ಲಮಪ್ರಭು ಪಾಟೀಲ್(ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-**

೧೪೧೫ (೧೭೧೩) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಯಲ್ಲಿರುವ ಅರಣ್ಯ ಪ್ರದೇಶ ಎಷ್ಟು ;

(ಆ) ಈ ಅರಣ್ಯ ಪ್ರದೇಶ ಒತ್ತುವರಿ ಆಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಈ ಅರಣ್ಯ ಪ್ರದೇಶದ ಸುರಕ್ಷತೆಗಾಗಿ ಸರ್ಕಾರ ಕ್ರಮ ಕೈಗೊಂಡಿರುವ ಕ್ರಮಗಳು ಯಾವುದು ?

## ವರಾಹಿ ಯೋಜನಾ ಪ್ರದೇಶದಲ್ಲಿ ಬಳಸಿದ ಕಲ್ಲುಗಳ ಕುರಿತು

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-**

೧೪೧೬ (೧೬೯೪) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಕರ್ನಾಟಕ ನೀರಾವರಿ ನಿಗಮದ ವರಾಹಿ ಯೋಜನಾ ಪ್ರದೇಶದಲ್ಲಿ ಎಡದಂಡೆ ಮತ್ತು ಬಲದಂಡೆಯ ಕಾಲುವೆಗಳ ನಿರ್ಮಾಣ ಹಂತದಲ್ಲಿ ಗುತ್ತಿಗೆದಾರರು ಬಳಸಿದ ಕಲ್ಲುಗಳ ಪ್ರಮಾಣವೆಷ್ಟು; ಮತ್ತು ಅವರಿಂದ ವಸೂಲು ಮಾಡಿದ ಅಥವಾ ಅವರ ಖಾತೆಗೆ ಜಮಾ ಮಾಡಿದ ಒಟ್ಟು ಮೊತ್ತವೆಷ್ಟು ;

(ಆ) ವರಾಹಿ ಯೋಜನಾ ಪ್ರದೇಶದ ಬಲದಂಡೆ ಮತ್ತು ಎಡದಂಡೆ ಕಾಲುವೆಗಳ ಯಾವ ಯಾವ ಕಿ.ಮೀ.ಗಳಲ್ಲಿ ಕಲ್ಲುಗಳನ್ನು ಏಲಂ ಮುಖಾಂತರ ಮಾರಾಟ ಮಾಡಲಾಗಿದೆ ; ಮಾರಾಟ ಮಾಡಿದ ಕಲ್ಲುಗಳ ಪ್ರಮಾಣ ಮತ್ತು ಮೌಲ್ಯಗಳೆಷ್ಟು ; ಅದನ್ನು ಖರೀದಿಸಿದವರ ಹೆಸರು ಮತ್ತು ವಿಳಾಸವೇನು ;

(ಇ) ವರಾಹಿ ಯೋಜನಾ ಪ್ರದೇಶದ ಕಲ್ಲುಗಳ ಹಗರಣದ ಬಗ್ಗೆ ದೃಶ್ಯ ಮಾಧ್ಯಮದಲ್ಲಿ ವಿಸ್ತೃತ ವರದಿಯಾದರೂ ಸಹ ಈ ತನಕ ಸರ್ಕಾರ ಕ್ರಮ ಕೈಗೊಳ್ಳದಿರಲು ಕಾರಣವೇನು ; ಇನ್ನಾದರೂ ಕ್ರಮ ಕೈಗೊಳ್ಳಲಾಗುವುದೇ ?

## ಭೂ ನ್ಯಾಯ ಮಂಡಳಿ ಸದಸ್ಯರಿಗೆ ಗೌರವಧನ ಹಾಗೂ ಪ್ರಯಾಣ ಭತ್ಯೆ ನೀಡುವ ಕುರಿತು

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-**

೧೪೧೭ (೧೬೯೧) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದಲ್ಲಿ ೨೦೦೦ನೇ ಇಸವಿಯಿಂದ ಭೂ ನ್ಯಾಯ ಮಂಡಳಿಯ ಸದಸ್ಯರಾಗಿ ಕಾರ್ಯನಿರ್ವಹಿಸಿದವರಿಗೆ ನೀಡಲು ಬಾಕಿ ಇರುವ ಗೌರವಧನ ಮತ್ತು ಪ್ರಯಾಣ ಭತ್ಯೆಯ ಮೊತ್ತ ಎಷ್ಟು ; (ತಾಲ್ಲೂಕುವಾರು ವಿವರ ನೀಡುವುದು)

(ಆ) ಉಡುಪಿ ಜಿಲ್ಲೆಯಲ್ಲಿ ೨೦೦೦ನೇ ಇಸವಿಯಿಂದ ಭೂ ನ್ಯಾಯ ಮಂಡಳಿಯ ಸದಸ್ಯರಾಗಿ ಕಾರ್ಯನಿರ್ವಹಿಸಿದವರಿಗೆ ನೀಡಲು ಬಾಕಿ ಇರುವ ಗೌರವಧನ ಮತ್ತು ಪ್ರಯಾಣ ಭತ್ಯೆಯ ಮೊತ್ತವೆಷ್ಟು ; (ತಾಲ್ಲೂಕುವಾರು, ವರ್ಷವಾರು, ಸದಸ್ಯರವಾರು ವಿವರ ನೀಡುವುದು)

(ಇ) ಭೂ ನ್ಯಾಯ ಮಂಡಳಿಯ ಸದಸ್ಯರಾಗಿ ಕಾರ್ಯನಿರ್ವಹಿಸಿದವರಿಗೆ ನೀಡಲು ಬಾಕಿ ಇರುವ ಗೌರವಧನ ಮತ್ತು ಪ್ರಯಾಣ ಭತ್ಯೆಯನ್ನು ಪಾವತಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ ; ಇಲ್ಲವಾದಲ್ಲಿ ಕಾರಣವೇನು ?

## ರಾಜ್ಯದ ತಾಲ್ಲೂಕು ಕಛೇರಿಗಳಲ್ಲಿ ಸಿ.ಸಿ., ಟಿ.ವಿ. ಅಳವಡಿಸುವ ಕುರಿತು

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೪೧೮ (೧೬೬೩) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಸಾರ್ವಜನಿಕರಿಂದ ಹಿಂದಿನಿಂದಲೂ ಸತತ ಟೀಕೆಗೆ ಗುರಿಯಾಗುತ್ತಿರುವ ತಾಲ್ಲೂಕು ಕಛೇರಿಗಳಲ್ಲಿ ಕ್ಷಿಪ್ರ, ಪಾರದರ್ಶಕ ಹಾಗೂ ಪರಿಣಾಮಕಾರಿ ಸೇವೆಯನ್ನು ನೀಡಲು ಸಿ.ಸಿ., ಟಿ.ವಿ. ಅಳವಡಿಸಲಾಗುವುದೇ ಇಲ್ಲವಾದಲ್ಲಿ ಕಾರಣವೇನು ;

(ಆ) ರಾಜ್ಯದಲ್ಲಿ ತಾಲ್ಲೂಕು ಕಛೇರಿಗಳಿಗೆ ಸಿ.ಸಿ., ಟಿ.ವಿ. ಅಳವಡಿಸುವುದರಿಂದಾಗುವ ಅನುಕೂಲತೆಗಳು ಮತ್ತು ಅನಾನುಕೂಲತೆಗಳೇನು ?

## ವರಾಹಿ ಯೋಜನಾ ಪ್ರದೇಶದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅನುದಾನ ದುರುಪಯೋಗವಾದ ಕುರಿತು

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೪೧೯ (೧೬೬೨) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕರ್ನಾಟಕ ನೀರಾವರಿ ನಿಗಮದ ವರಾಹಿ ಯೋಜನಾ ಪ್ರದೇಶದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಕುಟುಂಬಗಳ ಹೆಸರಿನಲ್ಲಿ ಅವರುಗಳಿಲ್ಲದ ಪ್ರದೇಶಗಳಲ್ಲಿ ರಸ್ತೆಗಳ ಡಾಂಬರೀಕರಣಕ್ಕೆ ದಿನಾಂಕ: ೧೨-೧೨-೨೦೧೪ರಂದು, ಟೆಂಡರು ಕರೆದು, ಆ ವರ್ಗಕ್ಕೆ

ಮೀಸಲಿಟ್ಟ ಅನುದಾನದ ದುರುಪಯೋಗ ಪಡಿಸಿಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಈ ಬಗ್ಗೆ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು ;

(ಆ) ಅನುದಾನದ ದುರುಪಯೋಗ ಮಾಡಿದ ವರಾಹಿ ನೀರಾವರಿ ನಿಗಮದ ಅಭಿಯಂತರರು, ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ಮತ್ತು ಸಂಬಂಧಿಕರ ಮೇಲೆ ಕ್ರಿಮಿನಲ್ ಪ್ರಕರಣ ದಾಖಲಿಸಲಾಗುವುದೇ ; ಇಲ್ಲವಾದಲ್ಲಿ ಕಾರಣವೇನು ?

## ಅರ್ಜಿ ನಮೂನೆ ೭,೭ಎ, ೫೦,೫೩ರಲ್ಲಿ ಸಲ್ಲಿಸಿದವರ ಕುರಿತು

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೪೨೦ (೧೬೯೫) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಭೂ ಸುಧಾರಣಾ ಕಾಯಿದೆಯಡಿ ಅರ್ಜಿ ನಮೂನೆ ೭ರಡಿಯಲ್ಲಿ ಸಲ್ಲಿಸಲಾದ ಒಟ್ಟು ಅರ್ಜಿಗಳ ಸಂಖ್ಯೆ ಎಷ್ಟು ; ಆ ಪೈಕಿ ಇತ್ಯರ್ಥ ಪಡಿಸಲಾದ ಪ್ರಕರಣಗಳ ಸಂಖ್ಯೆ ಎಷ್ಟು ; ಇತ್ಯರ್ಥ ಪಡಿಸಲು ಬಾಕಿ ಇರುವ ಪ್ರಕರಣಗಳ ಸಂಖ್ಯೆ ಎಷ್ಟು ;

(ಆ) ಇತ್ಯರ್ಥಗೊಂಡು ಉಚ್ಚ ನ್ಯಾಯಾಲಯಕ್ಕೆ ಮೇಲ್ಮನವಿಗೆ ಹೋಗಿ ಮರಳಿ ಬಂದ ಪ್ರಕರಣಗಳ ಸಂಖ್ಯೆ ಎಷ್ಟು ; ಮತ್ತು ಇವುಗಳಲ್ಲಿ ಇತ್ಯರ್ಥಗೊಂಡ ಪ್ರಕರಣಗಳೆಷ್ಟು ; (ತಾಲ್ಲೂಕುವಾರು ವಿವರ ನೀಡುವುದು)

(ಇ) ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಭೂ ಸುಧಾರಣಾ ಕಾಯಿದೆಯಡಿಯಲ್ಲಿ ಅರ್ಜಿ ನಮೂನೆ ೭ಎ ರಡಿಯಲ್ಲಿ ಬಂದ ಅರ್ಜಿಗಳ ಸಂಖ್ಯೆ ಎಷ್ಟು ; ಇತ್ಯರ್ಥ ಪಡಿಸಲಾದ ಪ್ರಕರಣಗಳ ಸಂಖ್ಯೆ ಎಷ್ಟು ; ಇತ್ಯರ್ಥ ಪಡಿಸಲು ಬಾಕಿ ಇರುವ ಪ್ರಕರಣಗಳ ಸಂಖ್ಯೆ ಎಷ್ಟು ; (ತಾಲ್ಲೂಕುವಾರು ವಿವರ ನೀಡುವುದು)

(ಈ) ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಅರ್ಜಿ ನಮೂನೆ ೫೦ ಮತ್ತು ೫೩ರಡಿಯಲ್ಲಿ ಬಂದ ಅರ್ಜಿಗಳ ಸಂಖ್ಯೆ ಎಷ್ಟು ; ಆ ಪೈಕಿ ಇತ್ಯರ್ಥ ಪಡಿಸಲಾದ ಪ್ರಕರಣಗಳ ಸಂಖ್ಯೆ ಮತ್ತು ಇತ್ಯರ್ಥ ಪಡಿಸಲು ಬಾಕಿ ಇರುವ ಪ್ರಕರಣಗಳ ಸಂಖ್ಯೆ ಎಷ್ಟು ? (ತಾಲ್ಲೂಕುವಾರು ವಿವರ ನೀಡುವುದು)

## ಅರಣ್ಯ ಪ್ರದೇಶದಲ್ಲಿ ಅಕೇಶಿಯಾ ಮತ್ತು ನೀಲಗಿರಿ ಗಿಡಗಳನ್ನು ನೆಡುವ ಬಗ್ಗೆ

**ಶ್ರೀ ರಾಮಚಂದ್ರಗೌಡ (ಪದವೀಧರರ ಕ್ಷೇತ್ರ) :–**

೧೪೨೧ (೧೬೯೮) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಳೆದ ಐದು ವರ್ಷಗಳಿಂದ ರಾಜ್ಯದ ಅರಣ್ಯ ಪ್ರದೇಶಗಳಲ್ಲಿ ಸರ್ಕಾರದಿಂದ ಅಕೇಶಿಯಾ ಮತ್ತು ನೀಲಗಿರಿ ಗಿಡಗಳನ್ನು ನೆಡಲಾಗಿದೆಯೇ ; ನೆಡಲಾಗಿದ್ದಲ್ಲಿ ಎಲ್ಲೆಲ್ಲಿ ನೆಡಲಾಗಿದೆ ; (ವಿವರ ನೀಡುವುದು)

(ಆ) ಅಕೇಶಿಯಾ ನೀಲಗಿರಿಯನ್ನು ನೆಡಲು ಪ್ರಮುಖ ಕಾರಣಗಳೇನು ; ಈ ಗಿಡಗಳನ್ನು ಬೆಳೆಸುವುದರಿಂದ ಕಾಡಿನಲ್ಲಿ ಇತರ ಮರಗಳಿಗೆ ಹಾಗೂ ಪ್ರಾಣಿ ಪಕ್ಷಿಗಳಿಗೆ ಆಗುವ ತೊಂದರೆಗಳೇನು ಮತ್ತು ಪ್ರಯೋಜನಗಳೇನು ?

## ಕ್ರೀಡಾಪಟುವಿಗೆ ಅನುಕೂಲ ಕಲ್ಪಿಸುವುದು

**ಶ್ರೀ ರಾಮಚಂದ್ರಗೌಡ (ಪದವೀಧರರ ಕ್ಷೇತ್ರ) :-**

೧೪೨೨ (೧೭೦೧) ಮಾನ್ಯ ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ ಮೀನುಗಾರಿಕೆ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ೧೦ ವರ್ಷಗಳ ಕಾಲ ಕರ್ನಾಟಕದ ಪುಟ್ಬಾಲ್‌ನ ೧೦ ರಾಷ್ಟ್ರೀಯ ಹಾಗೂ ೬ ಅಂತರಾಷ್ಟ್ರೀಯ ಚಾಂಪಿಯನ್‌ಷಿಪ್‌ಗಳಲ್ಲಿ ಭಾಗವಹಿಸಿದ್ದ ಆಟಗಾರರಾರು ; ಪ್ರಸ್ತುತ ಅವರು ತಮ್ಮ ಬಲಗಾಲನ್ನು ಕಳೆದುಕೊಂಡು ಶೋಚನೀಯ ಸ್ಥಿತಿಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಬಂದಿದ್ದಲ್ಲಿ, ಈ ಸ್ಥಿತಿಯಲ್ಲಿರುವ ಇವರಿಗೆ ಗೌರವಯುತ ಜೀವನ ಸಾಗಿಸಲು ಸರ್ಕಾರ ಯಾವ ರೀತಿ ಸಹಾಯ ಧನ ಮತ್ತು ಅನುಕೂಲ ಕಲ್ಪಿಸಿದೆ ; ಕಲ್ಪಿಸಿಲ್ಲವಾದಲ್ಲಿ ಇವರಿಗೆ ಸಹಾಯ ಮಾಡಲು ಮುಂದಾಗುವುದೇ ;

(ಇ) ಯಾವ ಕಾಲಮಿತಿಯೊಳಗೆ ಯಾವ ರೀತಿಯ ಸಹಾಯ ಕಲ್ಪಿಸಲು ಸರ್ಕಾರ ಉದ್ದೇಶಿಸಿದೆ ?

## ದಿನಗೂಲಿ ನೌಕರರ ವೇತನ ಕುರಿತು

**ಶ್ರೀ ರಾಮಚಂದ್ರಗೌಡ (ಪದವೀಧರರ ಕ್ಷೇತ್ರ) :–**

೧೪೨೩ (೧೬೯೯) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬ್ರಹ್ಮಗಿರಿ, ಪುಷ್ಪಗಿರಿ, ತಲಕಾವೇರಿ ವನ್ಯ ಜೀವಿಧಾಮಗಳಲ್ಲಿ ಕೆಲಸ ಮಾಡುತ್ತಿರುವ ದಿನಗೂಲಿ ನೌಕರರ ಸಂಖ್ಯೆ ಎಷ್ಟು ; ಇವರುಗಳಿಗೆ ಯಾವ ರೀತಿಯಲ್ಲಿ ಎಷ್ಟು ವೇತನ ನೀಡಲಾಗುತ್ತಿದೆ ; (ವಿವರ ನೀಡುವುದು)

(ಆ) ಸದರಿ ನೌಕರರಿಗೆ ಕಳೆದ ಆರು ತಿಂಗಳಿಂದಲೂ ಸಂಬಳ ನೀಡದಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಗುತ್ತಿಗೆದಾರರ ಮೂಲಕ ಇವರುಗಳಿಗೆ ಸಂಬಳ ನೀಡುತ್ತಿರುವುದು ನಿಜವೇ ; ದಿನಗೂಲಿ ನೌಕರರಿಗೆ ಬ್ಯಾಂಕ್ ಖಾತೆ ಮೂಲಕ ಸಂಬಳವನ್ನು ಜಮೆ ಮಾಡುವ ವ್ಯವಸ್ಥೆ ಮಾಡಲಾಗಿದೆಯೇ ; ಇಲ್ಲವಾದಲ್ಲಿ ಆ ರೀತಿಯ ವ್ಯವಸ್ಥೆಯನ್ನು ಯಾವಾಗಿನಿಂದ ಜಾರಿಗೆ ತರಲಾಗುವುದು ; ಇದಕ್ಕೆ ತಗಲುವ ಕಾಲಮಿತಿ ಏನು ?

## ನಾಲ್ಕು ಕೊಂಬಿನ ಜಿಂಕೆಯ ವಿಶೇಷತೆ

**ಶ್ರೀ ರಾಮಚಂದ್ರಗೌಡ (ಪದವೀಧರರ ಕ್ಷೇತ್ರ) :–**

೧೪೨೪ (೧೭೦೦) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕೊಂಡು ಕುರಿ ಎಂದು ಸ್ಥಳೀಯವಾಗಿ ಕರೆಯಲ್ಪಡುವ ನಾಲ್ಕು ಕೊಂಬಿನ ಜಿಂಕೆಯ ವಿಶೇಷತೆ ಏನು ; ಕಳೆದ ಐದು ವರ್ಷದ ಹಿಂದೆ ರಾಜ್ಯದಲ್ಲಿ ಇದ್ದ ಇವುಗಳ ಸಂಖ್ಯೆ ಎಷ್ಟಿದೆ ; ಈಗ

ಎಷ್ಟಿದೆ ; ಇವುಗಳ ಸಂರಕ್ಷಣೆಗೆ ಯಾವ ರೀತಿಯ ವ್ಯವಸ್ಥೆ ಕಲ್ಪಿಸಲಾಗಿದೆ ; ಕೈಗೊಂಡಿರುವ ಕ್ರಮಗಳೇನು ;

(ಆ) ದಾವಣಗೆರೆಯ ಜಗಳೂರಿನಲ್ಲಿ ರಂಗಯ್ಯನದುರ್ಗದಲ್ಲಿ ಜಿಂಕೆಧಾಮ ಇರುವುದು ನಿಜವೇ ; ಇವುಗಳ ಬೇಟೆ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ ಇದುವರೆಗೂ ಎಷ್ಟು ಪ್ರಕಣಗಳು ದಾಖಲಾಗಿದೆ ; ಇವುಗಳ ಬೇಟೆಯನ್ನು ತಡೆಯಲು ಯಾವ ರೀತಿ ಕ್ರಮಕೈಗೊಳ್ಳಲಾಗಿದೆ ?

## ಶ್ರೀಗಂಧದ ಮರಗಳ ಬಗ್ಗೆ

**ಶ್ರೀ ರಾಮಚಂದ್ರಗೌಡ (ಪದವೀಧರರ ಕ್ಷೇತ್ರ) :–**

೧೪೨೫ (೧೭೦೨) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಳೆದ ಐದು ವರ್ಷಗಳಿಂದ ಸರ್ಕಾರದ ಅರಣ್ಯದ ಪ್ರದೇಶಗಳಲ್ಲಿ ಎಷ್ಟು ಶ್ರೀಗಂಧದ ಗಿಡಗಳನ್ನು ನೆಡಲಾಗಿದೆ ; ರೈತರಿಗೆ ಪ್ರೋತ್ಸಾಹ ನೀಡಿ ಎಷ್ಟು ಗಿಡಗಳನ್ನು ನೆಡಿಸಲಾಗಿದೆ ;

(ಆ) ಕಳೆದ ಐದು ವರ್ಷಗಳಲ್ಲಿ ಎಷ್ಟು ಶ್ರೀಗಂಧದ ಮರಗಳ ಕಳ್ಳತನದ ಪ್ರಕರಣಗಳು ಸರ್ಕಾರದ ಅರಣ್ಯ ಪ್ರದೇಶಗಳಲ್ಲಿ ನಡೆದಿವೆ ;

(ಇ) ಕಳ್ಳತನದಿಂದ ಇವುಗಳನ್ನು ರಕ್ಷಿಸಲು ಮೊಬೈಲ್ ಚಿಪ್ ಮಾದರಿಯ ವಸ್ತುವನ್ನು ಗಿಡದಲ್ಲಿ ಅಳವಡಿಸುವ ತಂತ್ರಜ್ಞಾನವೇನಾದರೂ ಇದೆಯೇ ;

(ಈ) ಇದ್ದಲ್ಲಿ ಈ ರೀತಿಯ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳುವಂತೆ, ಶ್ರೀಗಂಧವನ್ನು ಬೆಳೆಯುವ ರೈತರಿಗೆ ಪ್ರೋತ್ಸಾಹ ನೀಡಲು ಸರ್ಕಾರ ಮುಂದಾಗುವುದೆ ?

## ರಾಜ್ಯದಲ್ಲಿ ಜಮೀನು ಸರ್ವೆ ವಿಳಂಬ

**ಶ್ರೀ ಎಂ. ಶ್ರೀನಿವಾಸ್ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೪೨೬ (೧೭೦೩) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ರೈತರು ತಮ್ಮ ವ್ಯವಸಾಯ ಜಮೀನು ಸರ್ವೆಗಾಗಿ ಕೋರಿಕೆ ಸಲ್ಲಿಸಿ ಹಲವಾರು ವರ್ಷಗಳಿಂದ ಕಾಯುತ್ತಿರುವ ಅಂಶವನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿದೆಯೇ ; ಹಾಗಿದ್ದಲ್ಲಿ, ಪ್ರಸ್ತುತ ಇರುವ ಕೋರಿಕೆಗಳ ಸಂಖ್ಯೆ ಎಷ್ಟು ; (ಜಿಲ್ಲಾವಾರು ಮಾಹಿತಿ ಒದಗಿಸುವುದು)

(ಆ) ಶೀಘ್ರ ಸರ್ವೆ ಕಾರ್ಯ ಕೈಗೊಂಡು ರೈತರ ಸಮಸ್ಯೆ ನಿವಾರಿಸುವ ನಿಟ್ಟಿನಲ್ಲಿ ಸರ್ಕಾರವು ಯಾವ ಕ್ರಮಗಳನ್ನು ಕೈಗೊಂಡಿದೆ ? (ಮಾಹಿತಿ ಒದಗಿಸುವುದು)

## ರಾಜ್ಯದ ಜಲಾಶಯಗಳಲ್ಲಿ ನೀರಿನ ಹರಿವು ಕುಂಟಿತಗೊಂಡಿರುವ ಬಗ್ಗೆ

**ಶ್ರೀ ಎಂ. ಶ್ರೀನಿವಾಸ್ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೪೨೭ (೧೭೦೪) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿರುವ ಜಲಾಶಯಗಳು ಯಾವುವು ; ಅವುಗಳು ನಿರ್ಮಾಣಗೊಂಡಿದ್ದು ಯಾವಾಗ ; ಯಾವ ಉದ್ದೇಶದಿಂದ ಈ ಜಲಾಶಯಗಳನ್ನು ನಿರ್ಮಿಸಲಾಯಿತು ; (ಮಾಹಿತಿ ಒದಗಿಸುವುದು)

(ಆ) ನಿರ್ಮಾಣ ಕಾಲದಲ್ಲಿ ಮತ್ತು ಪ್ರಸ್ತುತ ಈ ಜಲಾಶಯಗಳಲ್ಲಿ ಇರುವ ನೀರಿನ ಒಳಹರಿವು ಮತ್ತು ಹೊರಹರಿವಿನ ಪ್ರಮಾಣ ಎಷ್ಟು ; (ಜಲಾಶಯವಾರು ಮಾಹಿತಿ ಒದಗಿಸುವುದು)

(ಇ) ಹಲವಾರು ಜಲಾಶಯಗಳಲ್ಲಿ ನೀರಿನ ಹರಿವು ಗಣನೀಯವಾಗಿ ಕುಸಿದಿರುವುದು ಮತ್ತು ಜಲಾಶಯಗಳು ಅಪಾಯದ ಅಂಚಿಗೆ ಬಂದಿರುವುದು ನಿಜವೇ ; ಹಾಗಿದ್ದಲ್ಲಿ, ಪ್ರತ್ಯೇಕವಾದ ಮಾಹಿತಿ ಒದಗಿಸುವುದು ;

(ಈ) ಜಲಾಶಯಗಳನ್ನು ಸುಸ್ಥಿತಿಯಲ್ಲಿಡುವ ನಿಟ್ಟಿನಲ್ಲಿ ಸರ್ಕಾರವು ಕೈಗೊಂಡ ಕ್ರಮಗಳೇನು ? (ವಿವರ ಒದಗಿಸುವುದು)

## ಅಸಂಘಟಿತ ಕಾರ್ಮಿಕರಿಗೆ ಸಾಮಾಜಿಕ ಭದ್ರತಾ ಯೋಜನೆ ಮತ್ತು ಡಿಜಿಟಲ್ ವಾಚನಾಲಯ

**ಶ್ರೀ ಅಶ್ವತ್ ನಾರಾಯಣ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೪೨೮ (೧೭೦೬) ಮಾನ್ಯ ಕಾರ್ಮಿಕ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಅಸಂಘಟಿತ ಕಾರ್ಮಿಕರಿಗೆ ಸಾಮಾಜಿಕ ಭದ್ರತಾ ಯೋಜನೆ ಯಾವಾಗ ಪ್ರಾರಂಭವಾಯಿತು ; ಮತ್ತು ಯಾವ ಯಾವ ಜಿಲ್ಲೆಗಳಲ್ಲಿ ಪ್ರಾರಂಭವಾಗಿದೆ ; ಜಿಲ್ಲಾ ಕೇಂದ್ರ ಅಥವಾ ತಾಲ್ಲೂಕುಗಳಲ್ಲಿ ಪ್ರಾರಂಭಿಸಲಾಗಿದೆಯೇ ; ೨೦೧೫ರವರೆವಿಗೂ ತೆರೆದಿರುವ ಸಾಮಾಜಿಕ ಭದ್ರತಾ ಯೋಜನೆಗಳು ಎಷ್ಟು ;

(ಆ) ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಗಳಲ್ಲಿ ತರಬೇತಿಗೆ ಅನುಕೂಲವಾಗಲು ಡಿಜಿಟಲ್ ವಾಚನಾಲಯವು ಸ್ಥಾಪಿಸಲಾಗಿರುವುದೇ ; ಸ್ಥಾಪಿಸಿದ್ದರೆ ಯಾವಾಗ ಸ್ಥಾಪಿಸಲಾಯಿತು ;

(ಇ) ೨೦೧೩-೨೦೧೪ ಹಾಗೂ ೨೦೧೪-೧೫ರಲ್ಲಿ ಎಷ್ಟು ಕಡೆ ಡಿಜಿಟಲ್ ವಾಚನಾಲಯಗಳನ್ನು ತೆರೆಯಲಾಗಿದೆ ; ಅದಕ್ಕಾಗಿ ಬಿಡುಗಡೆ ಮಾಡಿದ ಹಣವೆಷ್ಟು ; ಯಾವಾಗ ಬಿಡುಗಡೆ ಮಾಡಲಾಯಿತು ;

(ಈ) ರಾಜ್ಯದಲ್ಲಿ ಹೊಸದಾಗಿ ಎಷ್ಟು ಇ.ಎಸ್.ಐ., ಆಸ್ಪತ್ರೆಗಳನ್ನು ತೆರೆಯಲಾಗಿದೆ ; ಎಲ್ಲೆಲ್ಲಿ ತೆರೆಯಲಾಗಿದೆ ? (ಜಿಲ್ಲಾವಾರು ವಿವರ ನೀಡುವುದು)

## ೨೦೧೪-೧೫ನೇ ಯುವ ಸಬಲೀಕರಣ ಕಾರ್ಯಕ್ರಮ ಮತ್ತು ಗರಡಿ ಮನೆ

**ಶ್ರೀ ಅಶ್ವತ್ ನಾರಾಯಣ (ವಿಧಾನಸಭೆಯಿಂದ ಚುನಾಯಿತರಾದವರು) :-**

೧೪೨೯ (೧೭೦೫) ಮಾನ್ಯ ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ ಮೀನುಗಾರಿಕೆ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯ ಯುವ ನೀತಿ ಅನುಷ್ಠಾನದ ಅಂಗವಾಗಿ ಯುವ ಸಬಲೀಕರಣ ಕಾರ್ಯಕ್ರಮ ರೂಪಿಸಲಾಗಿರುವುದೇ ; ರೂಪಿಸಿದ್ದಲ್ಲಿ ಇದಕ್ಕೆ ೨೦೧೪-೧೫ನೇ ಸಾಲಿನಲ್ಲಿ ಬಿಡುಗಡೆ ಮಾಡಿದ ಹಣವೆಷ್ಟು; ಇದಕ್ಕಾಗಿ ಯುವ ಶಕ್ತಿ ಕೇಂದ್ರಗಳನ್ನು ತೆರೆಯಲಾಗಿದೆಯೇ ; ಹಾಗಿದ್ದಲ್ಲಿ, ಎಷ್ಟು ಕೇಂದ್ರಗಳನ್ನು ತೆರೆಯಲಾಗಿದೆ ; (ಜಿಲ್ಲಾವಾರು ಮಾಹಿತಿ ನೀಡುವುದು)

(ಆ) ದೇಶಿ ಕ್ರೀಡೆಗಳನ್ನು ಪ್ರೋತ್ಸಾಹಿಸಲು ಇಲಾಖೆಯಿಂದ ಹಮ್ಮಿಕೊಂಡಿರುವ ಕ್ರೀಡೆಗಳು ಯಾವುವು ; ಎಷ್ಟು ಕಡೆ ಕ್ರೀಡೋತ್ಸವವನ್ನು ಆಚರಿಸಲಾಗಿದೆ ; ಇದಕ್ಕಾಗಿ ಬಿಡುಗಡೆ ಮಾಡಿದ ಹಣವೆಷ್ಟು ;

(ಇ) ಹಳೇ ಗರಡಿಮನೆಗಳ ಪುನರುಜ್ಜೀವನಕ್ಕಾಗಿ ನೀಡಿರುವ ಹಣವೆಷ್ಟು ; ಯಾವ ಯಾವ ಗರಡಿ ಮನೆಗಳಿಗೆ ನೀಡಲಾಗಿದೆ ; (ಜಿಲ್ಲಾವಾರು ವಿವರ ನೀಡುವುದು)

(ಈ) ಹೊಸ ಗರಡಿಮನೆ ನಿರ್ಮಾಣಕ್ಕೆ ಅನುದಾನ ನೀಡಲಾಗಿದೆಯೇ ; ನೀಡಿದ್ದರೆ, ಜಿಲ್ಲಾವಾರು ವಿವರ ನೀಡುವುದು ?

## "ಪಡಸಾಲೆ" ಯೋಜನೆಯನ್ನು ಜಾರಿಗೊಳಿಸಿರುವ ಮತ್ತು ಪಹಣಿಯಲ್ಲಿರುವ ದೋಷಗಳನ್ನು ಸರಿಪಡಿಸಿರುವ ಬಗ್ಗೆ

**ಶ್ರೀ ಅಶ್ವತ್ ನಾರಾಯಣ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೪೩೦ (೧೭೮೩) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ತಾಲ್ಲೂಕು ಕಛೇರಿಯಲ್ಲಿ ನೀಡುವ ಎಲ್ಲಾ ಸೇವೆಗಳನ್ನು ಒಂದೇ ಸೂರಿನಡಿಯಲ್ಲಿ ಸಾರ್ವಜನಿಕರಿಗೆ ಒದಗಿಸಲು ಪಡಸಾಲೆ ಯೋಜನೆಯನ್ನು ಜಾರಿಗೆ ತರಲಾಗಿದೆಯೇ ; ಜಾರಿಗೊಳಿಸಿದರೆ ಯಾವ ಯಾವ ತಾಲ್ಲೂಕುಗಳಲ್ಲಿ ಜಾರಿಗೊಳಿಸಲಾಗಿದೆ ;

(ಆ) ರೈತರು ತಮ್ಮ ಪಹಣಿಯಲ್ಲಿರುವ ದೋಷಗಳನ್ನು ಸರಿಪಡಿಸಿಕೊಳ್ಳಲು ಹೋಬಳಿ ಮತ್ತು ಗ್ರಾಮ ಮಟ್ಟದಲ್ಲಿ ಕಂದಾಯ ಅದಾಲತ್‌ಗಳನ್ನು

ಏರ್ಪಡಿಸುವ ಆಂದೋಲನವನ್ನು ಪ್ರಾರಂಭಿಸಲಾಗಿದೆಯೇ ; ಯಾವ ಯಾವ ತಾಲ್ಲೂಕುಗಳಲ್ಲಿ ಸಂಪೂರ್ಣವಾಗಿ ಏರ್ಪಡಿಸಲಾಗಿದೆ ? (ವಿವರ ನೀಡುವುದು)

## ಮಂಡ್ಯ ಮತ್ತು ರಾಮನಗರ ಜಿಲ್ಲೆಗಳಲ್ಲಿನ ಕೆರೆಗಳ ಅಭಿವೃದ್ಧಿಯ ಬಗ್ಗೆ

**ಶ್ರೀ ಅಶ್ವತ್ ನಾರಾಯಣ (ವಿಧಾನಸಭೆಯಿಂದ ಚುನಾಯಿತರಾದವರು)** :–

೧೪೩೧ (೧೭೮೪) ಮಾನ್ಯ ಸಣ್ಣ ನೀರಾವರಿ ಸಚಿವರು ಈ ವಿಷಯವನ್ನು ದಯವಿಟ್ಟು ತಿಳಿಸುವರೆ :–

ಸಣ್ಣ ನೀರಾವರಿ ಯೋಜನೆಯಲ್ಲಿ ಮಂಡ್ಯ ಮತ್ತು ರಾಮನಗರ ಜಿಲ್ಲೆಗಳಲ್ಲಿ ಯಾವ ಯಾವ ಕೆರೆಗಳನ್ನು ಅಭಿವೃದ್ಧಿಪಡಿಸಲು ಯೋಜನೆ ರೂಪಿಸಲಾಗಿತ್ತು ; ಇದಕ್ಕಾಗಿ ಬಿಡುಗಡೆ ಮಾಡಿರುವ ಹಣವೆಷ್ಟು ? (ಜಿಲ್ಲಾವಾರು, ತಾಲ್ಲೂಕುವಾರು ಹಾಗೂ ಕೆರೆವಾರು ವಿವರ ನೀಡುವುದು)

## ಕೆರೆ ತುಂಬಿಸುವ ಯೋಜನೆಯಲ್ಲಿ ಮಂಡ್ಯ ಜಿಲ್ಲೆಯ ನಾಗಮಂಗಲ ತಾಲ್ಲೂಕಿನ ಕೆರೆಗಳಿಗೆ ನೀರು ತುಂಬಿಸಿರುವ ಬಗ್ಗೆ

**ಶ್ರೀ ಅಶ್ವತ್ ನಾರಾಯಣ (ವಿಧಾನಸಭೆಯಿಂದ ಚುನಾಯಿತರಾದವರು)**:–

೧೪೩೨ (೧೭೮೫) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕೆರೆ ತುಂಬಿಸುವ ಯೋಜನೆಯಡಿಯಲ್ಲಿ ಮಂಡ್ಯ ಜಿಲ್ಲೆ, ನಾಗಮಂಗಲ ತಾಲ್ಲೂಕಿನಲ್ಲಿ ಈ ಬಾರಿ ನೀರು ತುಂಬಿಸಿರುವ

ಕೆರೆಗಳು ಯಾವುವು ; ದೇವಲಾಪುರ ಹೋಬಳಿಯ ಮೈಲಾರ ಪಟ್ಟಣ ಗ್ರಾಮಗಳ ವ್ಯಾಪ್ತಿಯ ಎಷ್ಟು ಕೆರೆಗಳಿಗೆ ನೀರು ಹರಿಸಲಾಗಿದೆ ; ಕೆರೆಗಳಿಗೆ ನೀರು ಪೂರೈಸದಿದ್ದರೆ ವೈಜ್ಞಾನಿಕ ಕಾರಣವೇನು ;

(ಆ) ನಾಗಮಂಗಲ ತಾಲ್ಲೂಕು ದೇವಲಾಪುರ ಹೋಬಳಿ ಮಾಟನಕೊಪ್ಪಲು ಗ್ರಾಮದಿಂದ ನರಗಲು ಗ್ರಾಮಕ್ಕೆ ಸಂಪರ್ಕ ಕಲ್ಪಿಸುವ ಸೇತುವೆ ಕಾಮಗಾರಿಗೆ ಮಂಜೂರಾತಿ ನೀಡಿದ್ದರೂ ಸಹ ಇದುವರೆವಿಗೂ ಕಾಮಗಾರಿಗೆ ಟೆಂಡರ್ ಕರೆದಿರುವುದಿಲ್ಲ ; ಇದಕ್ಕೆ ಕಾರಣವೇನು ;

(ಇ) ೨೦೧೩-೧೪ ಹಾಗೂ ೨೦೧೪-೧೫ರಲ್ಲಿ ಹೇಮಾವತಿ ಕಾವೇರಿ ನೀರಾವರಿ ನಿಗಮಕ್ಕೆ ಅಭಿವೃದ್ಧಿಗಾಗಿ ಬಿಡುಗಡೆ ಮಾಡಿದ ಹಣವೆಷ್ಟು ; ಯಾವ ಯಾವ ನಾಲಾ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ ; ಇದರಲ್ಲಿ ಹಾಲಿ ಕೆಲಸ ಪ್ರಾರಂಭಗೊಂಡಿರುವ ನಾಲಾ ಅಭಿವೃದ್ಧಿ ಕಾಮಗಾರಿಗಳು ಯಾವುವು ;

(ಈ) ಕೆ.ಆರ್.ಎಸ್. ಡ್ಯಾಂ ಬಳಿ ಇರುವ ಬೃಂದಾವನವನ್ನು ಅಂತರ ರಾಷ್ಟ್ರೀಯ ಪ್ರವಾಸೋದ್ಯಮ ತಾಣವನ್ನಾಗಿಸುವ ಯೋಜನೆ ಸರ್ಕಾರದ ಮುಂದಿರುವುದೇ ; ಇದ್ದಲ್ಲಿ ೨೦೧೪-೧೫ರಲ್ಲಿ ಇದಕ್ಕಾಗಿ ಬಿಡುಗಡೆ ಮಾಡಿದ ಹಣವೆಷ್ಟು ?

## ಮೈಸೂರು ಜಿಲ್ಲೆ, ಹೆಚ್.ಡಿ.ಕೋಟೆ ವನ್ಯಧಾಮ

**ಶ್ರೀ ಅಶ್ವತ್ ನಾರಾಯಣ (ವಿಧಾನಸಭೆಯಿಂದ ಚುನಾಯಿತರಾದವರು)**:–

೧೪೩೩ (೧೬೮೩) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಮೈಸೂರು ಜಿಲ್ಲೆ, ಹೆಚ್.ಡಿ. ಕೋಟೆ ತಾಲ್ಲೂಕು, ಸರಗೂರು ಹೋಬಳಿ, ನುಗು ವನ್ಯಧಾಮ ವ್ಯಾಪ್ತಿಗೆ ಬರುವ ಹೊಸಬೀರ್ವಾಳು ಗ್ರಾಮದ ರೈತ ಸಿದ್ದರಾಜು ಬಿನ್ ನಿಂಗಯ್ಯ ಸರ್ವೆ ನಂ:೬೧ ರಲ್ಲಿ ಬೆಳೆದಿದ್ದ ಟಮೋಟೋ ಬೆಳೆ ಹಿಂಡು ಆನೆಗಳ ದಾಳಿಗೆ ಸಿಲುಕಿ ಅಪಾರವಾದ ನಷ್ಟ ಅನುಭವಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಆ ರೈತನಿಗೆ ಉಂಟಾಗಿರುವ ನಷ್ಟವನ್ನು ಭರಿಸಲಾಗಿದೆಯೇ ; ಇಲ್ಲವಾದಲ್ಲಿ, ಯಾವಾಗ ನಷ್ಟವನ್ನು ಭರಿಸಲಾಗುತ್ತದೆ ; ಆಗಿರುವ ನಷ್ಟಕ್ಕೆ ನೀಡಲಾಗುವ ಪರಿಹಾರ ಮೊತ್ತ ಎಷ್ಟು ;

(ಆ) ಕಾಡು ಪ್ರಾಣಿಗಳಿಂದ ರೈತರ ಬೆಳೆ ನಾಶವಾದರೆ ರೈತನಿಗೆ ಪರಿಹಾರ ನೀಡಲಾಗುವುದೇ ; ಅಥವಾ ನಷ್ಟವನ್ನು ಭರಿಸಲಾಗುವುದೇ ;

(ಇ) ಪರಿಹಾರದ ಬದಲು ಬೆಳೆಗೆ ನಷ್ಟವನ್ನು ಭರಿಸುವಂತೆ ಕಾನೂನು ತಿದ್ದುಪಡಿ ಮಾಡಿದರೆ ರೈತನ ಅನ್ಯಾಯಕ್ಕೆ ನ್ಯಾಯ ಒದಗಿಸಿದಂತಾಗುವುದಿಲ್ಲವೆ ?

## ಕೃಷಿ ವೃತ್ತಿಯನ್ನು ಅನುಷ್ಠಾನಗೊಳಿಸುವ ಬಗ್ಗೆ.

**ಡಾ॥ ಮತ್ತಿಕಟ್ಟೆ ವೀರಣ್ಣ (ವಿಧಾನಸಭೆಯಿಂದ ಚುನಾಯಿತರಾದವರು) :-**

೧೪೩೪ (೧೭೧೦) ಮಾನ್ಯ ಕಾರ್ಮಿಕ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಅಭಿವೃದ್ಧಿ ವಂಚಿತ ಉತ್ತರ ಕರ್ನಾಟಕದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಗಳನ್ನು ಪ್ರಾರಂಭಿಸಲಾಗುವುದೇ ;

(ಆ) ಹಾಗಿದ್ದಲ್ಲಿ, ಉತ್ತರ ಕರ್ನಾಟಕದ ಯಾವ ಯಾವ ಸ್ಥಳಗಳಲ್ಲಿ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಗಳನ್ನು ಸ್ಥಾಪಿಸಲಾಗುವುದು ;

(ಇ) ಹುಬ್ಬಳ್ಳಿ-ಧಾರವಾಡದಲ್ಲಿ ಬಹು ಕೌಶಲ್ಯ ಅಭಿವೃದ್ಧಿ ಕೇಂದ್ರವನ್ನು ಸ್ಥಾಪಿಸಲಾಗುವುದೇ ;

(ಈ) ಸರ್ಕಾರಿ ಕೈಗಾರಿಕೆ ತರಬೇತಿ ಸಂಸ್ಥೆಗಳಲ್ಲಿ ಕೃಷಿ ವೃತ್ತಿಯನ್ನು ಅನುಷ್ಠಾನಗೊಳಿಸಲಾಗುವುದೇ ?

## ಅಂತರ್ಜಲ ಮಟ್ಟ ಸುಧಾರಿಸಲು ಕೆರೆಗಳ ಜೋಡಣೆ

**ಡಾ॥ ಮತ್ತಿಕಟ್ಟೆ ವೀರಣ್ಣ (ವಿಧಾನಸಭೆಯಿಂದ ಚುನಾಯಿತರಾದವರು) :-**

೧೪೩೫ (೧೭೧೫) ಮಾನ್ಯ ಸಣ್ಣ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದಲ್ಲಿ ಅಂತರ್ಜಲ ಕುಸಿಯುವಿಕೆಯಿಂದ ರೈತರು ತೀವ್ರ ಸಂಕಷ್ಟಗಳನ್ನು ಎದುರಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಹಾಗಿದ್ದಲ್ಲಿ, ಅಂತರ್ಜಲ ಮಟ್ಟವನ್ನು ಸುಧಾರಿಸಲು ಸರ್ಕಾರವು ಕೈಗೊಳ್ಳುತ್ತಿರುವ ಕ್ರಮಗಳೇನು ;

(ಇ) ಕೆರೆಗಳ ಸಂರಕ್ಷಣೆ ಹಾಗೂ ಜೋಡಣೆಗಾಗಿ ಯೋಜನೆಗಳನ್ನು ರೂಪಿಸಲಾಗುವುದೇ ?

## ಯುವಕರಿಗೆ ವೃತ್ತಿಪರ ಕೋರ್ಸ್‌ಗಳಲ್ಲಿ ತರಬೇತಿ

**ಡಾ॥ ಮತ್ತಿಕಟ್ಟೆ ವೀರಣ್ಣ (ವಿಧಾನಸಭೆಯಿಂದ ಚುನಾಯಿತರಾದವರು)** :–

೧೪೩೬ (೧೭೧೮) ಮಾನ್ಯ ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ ಮೀನುಗಾರಿಕೆ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿನ ಎಷ್ಟು ಯುವಕರಿಗೆ ಪ್ರಸ್ತುತ ವರ್ಷದಲ್ಲಿ ಜೀವನ ಕೌಶಲ್ಯ, ವೃತ್ತಿ ಕೌಶಲ್ಯ ವೃತ್ತಿಪರ ಕೋರ್ಸ್‌ಗಳಲ್ಲಿ ತರಬೇತಿ ನೀಡಲಾಗಿದೆ ;

(ಆ) ಶಾಲಾ ಮತ್ತು ಪರಿಸರ ಅಭಿವೃದ್ಧಿಯಲ್ಲಿ ತಮ್ಮನ್ನು ತೊಡಗಿಸಿಕೊಂಡಿರುವ ಯುವಕರಿಗೆ ಸೂಕ್ತ ಪ್ರೋತ್ಸಾಹ ನೀಡಲಾಗುತ್ತಿದೆಯೇ ;

(ಇ) ಧಾರವಾಡದಲ್ಲಿ ಆಧುನಿಕ ಸಿಂಥೆಟಿಕ್ ಟ್ರ್ಯಾಕ್ ನಿರ್ಮಿಸಲಾಗುವುದೆ ; ಹಾಗಿದ್ದಲ್ಲಿ, ಯಾವಾಗ ನಿರ್ಮಿಸಲಾಗುವುದು ?

## ಉತ್ತರ ಕರ್ನಾಟಕದಲ್ಲಿನ ನೇಕಾರರ ಸಂಕಷ್ಟ

**ಡಾ : ಮತ್ತಿಕಟ್ಟಿ ವೀರಣ್ಣ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೪೩೭ (೧೭೧೭) ಮಾನ್ಯ ಜವಳಿ ಹಾಗೂ ಬಂದರು ಮತ್ತು ಒಳನಾಡು ಜಲ ಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಅಭಿವೃದ್ಧಿವಂಚಿತ ಉತ್ತರ ಕರ್ನಾಟಕದಲ್ಲಿನ ನೇಕಾರರು ಆರ್ಥಿಕವಾಗಿ ತೀವ್ರ ಸಂಕಷ್ಟದಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಬಂದಿದ್ದಲ್ಲಿ, ಈ ಬಗ್ಗೆ ಸರ್ಕಾರವು ಕೈಗೊಳ್ಳುತ್ತಿರುವ ಕ್ರಮಗಳೇನು ;

(ಇ) ವಸತಿರಹಿತ ನೇಕಾರರು ಮತ್ತು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ನೇಕಾರರಿಗೆ ಯಾವ ಯಾವ ಸೌಲಭ್ಯವನ್ನು ಪುನಶ್ಚೇತನಗೊಳಿಸಲು ಯಾವ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ ?

## ಹಕ್ಕು ಪತ್ರ ವಿತರಣೆ

**ಶ್ರೀ ಇ. ಕೃಷ್ಣಪ್ಪ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೪೩೮ (೧೭೧೨) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದ್ಯಾಂತ ಸರ್ಕಾರಿ ಜಮೀನಿನಲ್ಲಿ ಹಲವಾರು ವರ್ಷಗಳಿಂದ ಮನೆ ನಿರ್ಮಿಸಿಕೊಂಡು ವಾಸಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಹಾಗಿದ್ದರೆ, ಎಷ್ಟು ಮಂದಿ ಸರ್ಕಾರಿ ಜಮೀನಿನಲ್ಲೆ ಎಷ್ಟು ವರ್ಷಗಳಿಂದ ವಾಸಿಸುತ್ತಿದ್ದಾರೆ ;

(ಇ) ಹಲವಾರು ವರ್ಷಗಳಿಂದ ಸರ್ಕಾರಿ ಜಮೀನಿನಲ್ಲೆ ಮನೆ ನಿರ್ಮಿಸಿ ವಾಸ ಮಾಡುತ್ತಿರುವವರಿಗೆ ಹಕ್ಕು ಪತ್ರ ನೀಡುವ ಬಗ್ಗೆ ಸರ್ಕಾರವು ಯಾವ ಕ್ರಮ ಕೈಗೊಂಡಿದೆ ;

(ಈ) ಯಾವಾಗ ಹಕ್ಕು ಪತ್ರ ನೀಡಲಾಗುವುದು ;

(ಉ) ಸರ್ಕಾರಿ ಜಮೀನಿನಲ್ಲೆ ಮನೆ ನಿರ್ಮಿಸಿಕೊಂಡಿರುವವರಿಗೆ ಯಾವ ಮೂಲಭೂತ ಸೌಕರ್ಯಗಳನ್ನು ಒದಗಿಸಲಾಗಿದೆ ? (ವಿವರಣೆ ನೀಡುವುದು)

## ಬೆಳಗಾವಿಯಲ್ಲಿ ಜವಳಿ ಪಾರ್ಕ್ ಪ್ರಾರಂಭ

**ಶ್ರೀ ಮಹಾಂತೇಶ ಶಿವಾನಂದ ಕೌಜಲಗಿ (ಪದವೀಧರರ ಕ್ಷೇತ್ರ) :-**

೧೪೩೯ (೧೭೨೨) ಮಾನ್ಯ ಜವಳಿ ಹಾಗೂ ಬಂದರು ಮತ್ತು ಒಳನಾಡು ಜಲ ಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಬೆಳಗಾವಿಯಲ್ಲಿ ಜವಳಿ ಪಾರ್ಕ್ ಪ್ರಾರಂಭಿಸಲು ಎಲ್ಲ ಮೂಲಭೂತ ಸೌಕರ್ಯ ಇರುವುದರಿಂದ ಜವಳಿ ಪಾರ್ಕ್ ಪ್ರಾರಂಭಿಸಲು ಕ್ರಮ ಕೈಗೊಳ್ಳಲಾಗುವುದೇ ;

(ಆ) ಬೆಳಗಾವಿ ಜಿಲ್ಲೆಯಲ್ಲಿ ಯಾವ-ಯಾವ ಸ್ಥಳಗಳಲ್ಲಿ ಜವಳಿ ಪಾರ್ಕ್ ಪ್ರಾರಂಭಿಸಲು ಉದ್ದೇಶಿಸಲಾಗಿದೆ ;

(ಇ) ಬೈಲಹೊಂಗಲ ತಾಲ್ಲೂಕಿನ ವಕ್ಕುಂದ ಗ್ರಾಮದಲ್ಲಿ ಹೆಚ್ಚಾಗಿ ನೇಕಾರರು ಇದ್ದು, ಇಲ್ಲಿ ಚಿಕ್ಕ ಪ್ರಮಾಣದ ಜವಳಿ ಪಾರ್ಕ್ ಪ್ರಾರಂಭಿಸುವಲ್ಲಿ ಪರಿಶೀಲಿಸಲಾಗುವುದೇ ?

**ಚಚಡಿ–ಮುರಗೋಡ ಏತ ನೀರಾವರಿ ಕೆಲಸ ಪ್ರಾರಂಭಿಸುವ ಬಗ್ಗೆ.**

**ಶ್ರೀ ಮಹಾಂತೇಶ ಶಿವಾನಂದ ಕೌಜಲಗಿ (ಪದವೀಧರರ ಕ್ಷೇತ್ರ) :–**

೧೪೪೦ (೧೭೨೫) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಚಚಡಿ–ಮುರಗೋಡ ಏತ ನೀರಾವರಿ ಯೋಜನೆಯ ಕಾಮಗಾರಿ ಯಾವ ಹಂತದಲ್ಲಿ ಇದೆ ;

(ಆ) ಈ ಕಾಮಗಾರಿಗೆ ಎಷ್ಟು ಮೊತ್ತಕ್ಕೆ ಆಡಳಿತಾತ್ಮಕ ಮಂಜೂರಾತಿ ದೊರೆತಿದೆ ಹಾಗೂ ಎಂದು ನೀಡಲಾಯಿತು ;

(ಇ) ತಾಂತ್ರಿಕ ಮಂಜೂರಾತಿ ನೀಡಲಾಗಿದ್ದು ಯಾವಾಗ ;

(ಈ) ಈ ಕೆಲಸಕ್ಕೆ ಟೆಂಡರ್ ಕರೆಯಲಾಗಿದೆಯೇ ; ಎಷ್ಟು ಮೊತ್ತಕ್ಕೆ ಕರೆಯಲಾಗಿದೆ ; (ವಿವರ ನೀಡುವುದು)

(ಉ) ಈ ಯೋಜನೆ ಕೈಗೊಳ್ಳುವುದರಿಂದ ಯಾವ ಯಾವ ಗ್ರಾಮಗಳ ಎಷ್ಟೆಷ್ಟು ಎಕರೆ ಜಮೀನು ನೀರಾವರಿ ಆಗುವುದು ; (ವಿವರ ನೀಡುವುದು)

(ಊ) ಈ ಕಾಮಗಾರಿ ಇನ್ನೂ ಎಷ್ಟು ದಿವಸಗಳೊಳಗಾಗಿ ಪ್ರಾರಂಭಿಸಲಾಗುವುದು ;

(ಋ) ಇದಕ್ಕೇನಾದರೂ ಹಣಕಾಸಿನ ತೊಂದರೆ ಇದೆಯೇ ; ಹಾಗಿದ್ದಲ್ಲಿ, ವಿಳಂಬವಾಗಲು ಕಾರಣವೇನು ;

(ಎ) ಮುರಗೋಡು ಏತ ನೀರಾವರಿ ಯೋಜನೆಯ ಕಾಲುವೆಯಿಂದ ಮುರಗೋಡು ಗ್ರಾಮದ ಕುಡಿಯುವ ನೀರಿನ ಸಮಸ್ಯೆಯನ್ನು ಬಗೆಹರಿಸಲು ಹೆಗ್ಗೇರಿ ಕೆರೆಗೆ ನೀರು ಹರಿಸಲು ಕ್ರಮ ಕೈಗೊಳ್ಳಲಾಗಿದೆಯೇ ?

## ಶಿವಯೋಗಿ ಮಂದಿರದಲ್ಲಿ ಹೊನಲು ಬೆಳಕು ಯೋಜನೆ, ಲಾಲ್‌ಬಾಗ್ ಮಾದರಿ ಗಾರ್ಡನ್ ಹಾಗೂ ಗಾಜಿನ ಮನೆ ನಿರ್ಮಿಸುವುದು

**ಶ್ರೀ ಮಹಾಂತೇಶ ಶಿವಾನಂದ ಕೌಜಲಗಿ (ಪದವೀಧರರ ಕ್ಷೇತ್ರ) :-**

೧೪೪೧ (೧೭೨೪) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಬಾಗಲಕೋಟೆ ಜಿಲ್ಲೆಯ ಶಿವಯೋಗಿ ಮಂದಿರದಲ್ಲಿ ಹೊನಲು-ಬೆಳಕು ಯೋಜನೆ ಹಾಗೂ ಲಾಲ್‌ಬಾಗ್ ಮಾದರಿಯಲ್ಲಿ ಗಾರ್ಡನ್ ಮತ್ತು ಗಾಜಿನ ಮನೆ ನಿರ್ಮಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ ; ಹಾಗೂ ಈ ಬಗ್ಗೆ ಜನಪ್ರತಿನಿಧಿಗಳಿಂದ ಮನವಿಗಳು ಬಂದಿವೆಯೇ ;

(ಆ) ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಬೆಂಗಳೂರು ಇವರಿಗೆ ಆದೇಶ ಮಾಡಲಾಗಿದೆಯೇ ; ಆದೇಶ ಮಾಡಿದ್ದಲ್ಲಿ, ಇವರ ಆದೇಶದ ಪ್ರಕಾರ ಮುಖ್ಯ ಇಂಜಿನಿಯರ್ ನೀರಾವರಿ ಇಲಾಖೆ (ಉತ್ತರ), ಧಾರವಾಡ ಇವರು

ಅದರ ನೀಲಿ ನಕ್ಷೆಯನ್ನು ಖಾಸಗಿ ಏಜೆನ್ಸಿಯವರ ಮೂಲಕ ತಯಾರಿಸಲು ಹಾಗೂ ಅವರ ಸಂಭಾವನೆಯನ್ನು ನಿರ್ಧರಿಸಲು ನಿಗಮಕ್ಕೆ ಒಪ್ಪಿಗೆ ಪತ್ರ ಬರೆದ ಸಂಗತಿ ನಿಜವೇ ; ನಿಜವಿದ್ದಲ್ಲಿ, ಈ ಯೋಜನೆಯನ್ನು ಯಾವ ಕಾಲಮಿತಿಯೊಳಗೆ ಕೈಗೊಳ್ಳಲಾಗುವುದು ;

(ಇ) ಈ ಯೋಜನೆಗೆ ಬೇಕಾದ ಸರ್ಕಾರಿ ಸ್ಥಳವು ಲಭ್ಯವಿದ್ದು ಅಥವಾ ಒಂದು ವೇಳೆ ಸ್ಥಳ ಬೇಕಾಗಿದ್ದಲ್ಲಿ, ಶಿವಯೋಗಿ ಮಂದಿರದ ಟ್ರಸ್ಟಿನವರು ಉಚಿತವಾಗಿ ಅಗತ್ಯ ಸ್ಥಳ ನೀಡಲು ಸಿದ್ಧರಿರುವುದರಿಂದ, ಈ ಯೋಜನೆಯನ್ನು ಕೈಗೆತ್ತಿಕೊಳ್ಳಲು ಸರ್ಕಾರ ಸಿದ್ಧವಿದೆಯೇ ?

## ಹಿರೇಕೊಪ್ಪ ನೀರಾವರಿ ಕೆರೆಗೆ ಹಿರೇಬೂದನೂರು ಕೆರೆಯಿಂದ ನೀರು ತುಂಬಿಸುವುದು

**ಶ್ರೀ ಮಹಾಂತೇಶ ಶಿವಾನಂದ ಕೌಜಲಗಿ (ಪದವೀಧರರ ಕ್ಷೇತ್ರ) :-**

೧೪೪೨ (೧೭೨೩) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಬೆಳಗಾವಿ ಜಿಲ್ಲೆ ಸವದತ್ತಿ ತಾಲ್ಲೂಕಿನ ಹಿರೇಬೂದನೂರು ಕೆರೆಗೆ ಮಾರ್ಕಂಡೇಯ ಹಾಗೂ ಬಳ್ಳಾರಿ ನಾಲಾದಿಂದ ನೀರು ತುಂಬಿಸಲಾಗುತ್ತಿರುವ ಸಂಗತಿ ನಿಜವೇ ;

(ಆ) ಹಿರೇಬೂದನೂರು ಕೆರೆಯಿಂದ ಹಿರೇಕೊಪ್ಪ ಕೆರೆಗೆ ನೀರು ತುಂಬಿಸಲು ಕ್ರಮ ಕೈಗೊಳ್ಳಲಾಗುವುದೇ ;

(ಇ) ಹಿರೇಕೊಪ್ಪ ಗ್ರಾಮದ ಕೆರೆಗೆ ನೀರು ತುಂಬಿಸುವುದರಿಂದ ಬರಗಾಲ ಕೈತುತ್ತಾಗುವ ಮರಕುಂಬಿ, ಹಿರೇಕೊಪ್ಪ, ಚಿಕ್ಕೊಪ್ಪ ಗ್ರಾಮದ ಜಮೀನುಗಳಿಗೆ ನೀರಾವರಿ ಸೌಲಭ್ಯ ಒದಗಿಸಲು ಅನುಕೂಲವಾಗುವುದೇ ;

(ಈ) ಕೂಡಲೇ ಸರ್ವೆ ಕೆಲಸ, ನೀರಿನ ಲಭ್ಯತೆ ಎಲ್ಲವನ್ನು ತಿಳಿಯಲು ಪ್ರಾಜೆಕ್ಟ್ ರಿಪೋರ್ಟ್ ಹಾಗೂ ಸರ್ವೆ ಕೆಲಸ ಕೈಗೊಳ್ಳಲು ಮುಖ್ಯ ಇಂಜಿನೀಯರ್, ನೀರಾವರಿ ಇಲಾಖೆ, ಬೆಳಗಾವಿ ಇವರಿಗೆ ಆದೇಶ ಮಾಡಲಾಗುವುದೇ ?

## ಬೆಳಗಾವಿಯಲ್ಲಿ ಅಂತರರಾಷ್ಟ್ರೀಯ ಕ್ರೀಡಾಂಗಣ ಸ್ಥಾಪನೆ

**ಶ್ರೀ ಮಹಾಂತೇಶ ಶಿವಾನಂದ ಕೌಜಲಗಿ (ಪದವೀಧರರ ಕ್ಷೇತ್ರ) :-**

೧೪೪೩ (೧೭೨೧) ಮಾನ್ಯ ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ ಮೀನುಗಾರಿಕೆ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಬೆಳಗಾವಿಯಲ್ಲಿರುವ ಅತೀ ಚಿಕ್ಕ ಕ್ರೀಡಾಂಗಣದಿಂದ ಕ್ರೀಡಾ ಪಟುಗಳಿಗೆ ತೊಂದರೆ ಆಗುತ್ತಿರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಬೆಳಗಾವಿಯಲ್ಲಿ ಆಧುನಿಕ ಎಲ್ಲಾ ಸೌಲಭ್ಯಗಳನ್ನು ಹೊಂದಿದ ಕ್ರೀಡಾಂಗಣ ಕಟ್ಟಲು ಕ್ರಮ ಕೈಗೊಳ್ಳಲಾಗುವುದೇ ;

(ಇ) ಕ್ರೀಡಾಂಗಣ ಕಟ್ಟಲು ಕೇಂದ್ರ ಸರ್ಕಾರದವರು ಆರ್ಥಿಕ ಸಹಾಯ ಮಾಡುತ್ತಿದ್ದರೂ ರಾಜ್ಯ ಸರ್ಕಾರ ಪ್ರಸ್ತಾವನೆಯನ್ನು ಕಳುಹಿಸಲು ಯಾವ ಕ್ರಮ ಕೈಗೊಂಡಿದೆ ;

(ಈ) ಹಾಗಿದ್ದಲ್ಲಿ, ಕ್ರೀಡಾಂಗಣ ಕಟ್ಟಲು ಯಾವ ಕ್ರಮ ಕೈಗೊಳ್ಳಲಾಗುವುದು ; ಈಗಿರುವ ಕ್ರೀಡಾಂಗಣ ಎಷ್ಟು ಎಕರೆ ಇರುವುದು ; ಎಲ್ಲ ಸೌಲಭ್ಯ ಬೇಕಾಗುವ ಕ್ರೀಡಾಂಗಣಕ್ಕೆ ಎಷ್ಟು ಎಕರೆ ಬೇಕಾಗುವುದು ;

(ಉ) ಈಗಿರುವ ಕ್ರೀಡಾಂಗಣದ ಮಾಲೀಕರು ಯಾರು ; ಯಾವ ಷರತ್ತಿನ ಮೇಲೆ ಈ ಕ್ರೀಡಾಂಗಣ ಮಾಲೀಕರಿಂದ ತೆಗೆದುಕೊಳ್ಳಲಾಗಿದೆ ;

(ಊ) ಷರತ್ತಿನ ಅವಧಿ ಮುಗಿಯುತ್ತಿರುವ ಸಂಗತಿ ನಿಜವೇ ; ಹಾಗಿದ್ದಲ್ಲಿ, ಷರತ್ತಿನ ಅವಧಿ ಮುಗಿಯುವುದರೊಳಗಾಗಿ ಬೇರೆ ಕ್ರೀಡಾಂಗಣ ನಿರ್ಮಾಣ ಮಾಡಲು ಕ್ರಮ ಕೈಗೊಳ್ಳಲಾಗುವುದೇ ?

## ರಾಜ್ಯದಲ್ಲಿರುವ ಜವಳಿ ಪಾರ್ಕ್‌ಗಳ ಬಗ್ಗೆ.

**ಶ್ರೀ ಎಂ.ಡಿ.ಲಕ್ಷ್ಮೀನಾರಾಯಣ(ಅಣ್ಣಯ್ಯ) (ನಾಮನಿರ್ದೇಶನ ಹೊಂದಿದವರು) :-**

೧೪೪೪ (೧೭೨೭) ಮಾನ್ಯ ಜವಳಿ ಹಾಗೂ ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಜವಳಿ ಇಲಾಖೆಯಿಂದ ರಾಜ್ಯದಲ್ಲಿ ಒಟ್ಟು ಎಷ್ಟು ಜವಳಿ ಪಾರ್ಕ್‌ಗಳನ್ನು ನಿರ್ಮಿಸಲಾಗಿದೆ. ಅವು ಯಾವುವು ಹಾಗೂ ಎಲ್ಲೆಲ್ಲಿ ನಿರ್ಮಿಸಲಾಗಿದೆ ;

(ಆ) ಜವಳಿ ಪಾರ್ಕ್ ನಿರ್ಮಿಸಲಿರುವ ಸರ್ಕಾರದ ಮಾನದಂಡಗಳೇನು ;

(ಇ) ಜವಳಿ ಪಾರ್ಕ್‌ಗಳಲ್ಲಿ ಆ ಭಾಗದ ಸಣ್ಣಪುಟ್ಟ ಬಡ ನೇಕಾರರಿಗೆ ಯಾವ ರೀತಿ ಅನುಕೂಲ ಮಾಡಿಕೊಡಲಾಗಿದೆ ;

(ಈ) ಕ್ಲಸ್ಟರ್ ಗುಂಪುಗಳ ಮೂಲಕ ಗ್ರಾಮೀಣ ಪ್ರದೇಶದಲ್ಲಿರುವ ಬಡ ಕೂಲಿ ಕಾರ್ಮಿಕ ನೇಕಾರರಿಗೆ ಅನುಕೂಲ ಮಾಡಲು ಯಾವುದಾದರೂ ನಿರ್ದಿಷ್ಟವಾದ ಯೋಜನೆ ಮೂಲಕ ಸಹಾಯ ಮಾಡಲು ಸರ್ಕಾರ ಚಿಂತಿಸಿದೆಯೇ ;

(ಉ) ಆ ರೀತಿ ರಾಜ್ಯದಲ್ಲಿ ಯಾವ ಜಿಲ್ಲೆಯಲ್ಲಿ ಗುರುತಿಸಲಾಗಿದೆ ?

## ಕೈಮಗ್ಗ ರೇಷ್ಮೆ ನೇಕಾರರಿಗೆ ರೇಷ್ಮೆ ಒದಗಿಸುವ ಕುರಿತು.

**ಶ್ರೀ ಎಂ.ಡಿ.ಲಕ್ಷ್ಮೀನಾರಾಯಣ(ಅಣ್ಣಯ್ಯ) (ನಾಮನಿರ್ದೇಶನ ಹೊಂದಿದವರು) :-**

೧೪೪೫ (೧೭೨೮) ಮಾನ್ಯ ಜವಳಿ ಹಾಗೂ ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದಲ್ಲಿ ಹಲವಾರು ವರ್ಷಗಳಿಂದ ಕೈಮಗ್ಗ ರೇಷ್ಮೆ ನೇಕಾರರಿಗೆ ಸ್ಥಳೀಯ ರೇಷ್ಮೆ ಕೊರತೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ರೇಷ್ಮೆ ಕೊರತೆ ಇರುವುದನ್ನು ಗಮನಿಸಿ ಬಡ ನೇಕಾರರಿಗೆ ರೇಷ್ಮೆ ಒದಗಿಸಲು ಜವಳಿ ಇಲಾಖೆ ತೆಗೆದುಕೊಂಡಿರುವ ಕ್ರಮಗಳೇನು ;

(ಇ) ಹೊರ ರಾಜ್ಯದಿಂದ ಆಮದಾಗಿ ಬರುತ್ತಿರುವ ರೇಷ್ಮೆಗೆ ಸರ್ಕಾರದ ಸಹಾಯಧನ ನೀಡಲು ಹಿಂದೇಟು ಹಾಕಲು ಕಾರಣವೇನು ;

(ಈ) ಬಡ ನೇಕಾರರಿಗೆ ಸಹಾಯ ಮಾಡದೇ ಉದ್ಯಮಿಗಳಿಗೆ ಹೆಚ್ಚು ಒತ್ತು ಕೊಡುತ್ತಿರುವುದು ನಿಜವೇ ?

## ಕೂಲಿ ಕಾರ್ಮಿಕ ಬಡ ನೇಕಾರರಿಗೆ ವಸತಿ ನೀಡುವ ಬಗ್ಗೆ.

**ಶ್ರೀ ಎಂ.ಡಿ.ಲಕ್ಷ್ಮೀನಾರಾಯಣ(ಅಣ್ಣಯ್ಯ) (ನಾಮನಿರ್ದೇಶನ ಹೊಂದಿದವರು) :-**

೧೪೪೬ (೧೭೨೯) ಮಾನ್ಯ ಕಾರ್ಮಿಕ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಕಾರ್ಮಿಕ ಇಲಾಖೆಯಲ್ಲಿ ಕೂಲಿ ಮಾಡುವ ಗುಡಿ ಕೈಗಾರಿಕೆ ಹಾಗೂ ಇನ್ನಿತರೆ ಕಸುಬು ಮಾಡುವ ವೃತ್ತಿಗಳನ್ನು ಗುರುತಿಸಲಾಗಿದೆಯೇ ; (ವಿವರ ನೀಡುವುದು)

(ಆ) ರಾಜ್ಯದಲ್ಲಿರುವ ಬಡ ಕೂಲಿ ಕಾರ್ಮಿಕ ನೇಕಾರರನ್ನು ಹಾಗೂ ಈ ವೃತ್ತಿಯನ್ನು ಸೇರಿಸಲಾಗಿದೆಯೇ ;

(ಇ) ಹಾಗಿದ್ದಲ್ಲಿ ಬಡ ನೇಕಾರರಿಗೆ ರಾಜೀವ್‌ಗಾಂಧಿ ವಸತಿ ನಿಗಮ ಮೂಲಕ ವಿಶೇಷ ವಸತಿ ಯೋಜನೆ ರೂಪಿಸಲಾಗಿದೆಯೇ ;

(ಈ) ಈ ವರ್ಗದ ಬಡವರಿಗೆ ವಸತಿ ನೀಡಲು ಇರುವ ಮಾನದಂಡವೇನು ; (ವಿವರ ನೀಡುವುದು)

(ಉ) ಬಡ ನೇಕಾರರು, ಕೂಲಿ ನೇಕಾರರು ಈ ವಸತಿ ಉಪಯೋಗ ಪಡೆಯಬಹುದೆ ?

## ತುಮಕೂರು ಜಿಲ್ಲೆ ಹೇಮಾವತಿ ಕಾಮಗಾರಿಗಳ ಬಗ್ಗೆ.

**ಶ್ರೀ ಎಂ.ಡಿ.ಲಕ್ಷ್ಮೀನಾರಾಯಣ(ಅಣ್ಣಯ್ಯ) (ನಾಮನಿರ್ದೇಶನ ಹೊಂದಿದವರು) :–**

೧೪೪೭ (೧೭೩೦) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಳೆದ ೨ ವರ್ಷಗಳಲ್ಲಿ ಕಾಡಾ ಯೋಜನೆಯಲ್ಲಿ ತುಮಕೂರು ಜಿಲ್ಲೆಯಲ್ಲಿ ತೆಗೆದುಕೊಂಡ ಕಾಮಗಾರಿಗಳ ಸಂಖ್ಯೆ ಎಷ್ಟು ; (ತಾಲ್ಲೂಕುವಾರು ವಿವರ ನೀಡುವುದು)

(ಆ) ತುರುವೇಕೆರೆ ತಾಲ್ಲೂಕಿನಲ್ಲಿ ಕೈಗೊಂಡಿರುವ ಕಾಮಗಾರಿಗಳ ಸಂಖ್ಯೆ ಎಷ್ಟು ; (ಕಾಮಗಾರಿವಾರು ವಿವರ ಒದಗಿಸುವುದು)

(ಇ) ಈಗಾಗಲೇ ಮುಕ್ತಾಯಗೊಂಡಿರುವ ಕಾಮಗಾರಿಗಳ ಸಂಖ್ಯೆ ಎಷ್ಟು ; ಯಾವುವು ?

(ಈ) ಕಾರಣಾಂತರದಿಂದ ಕಾಮಗಾರಿ ಪ್ರಾರಂಭ ಆಗದೆ ಬದಲಾವಣೆ ಮಾಡಿರುವ ಕಾಮಗಾರಿಗಳಾವುವು ?

## ಶ್ರೀಗಂಧ ಬೆಳೆಗಾರರ ಕುರಿತು.

**ಶ್ರೀ ವೈ.ಎ. ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ) :–**

೧೪೪೮ (೧೭೩೨) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕರ್ನಾಟಕ ರಾಜ್ಯದಲ್ಲಿರುವ ಶ್ರೀಗಂಧ ಬೆಳೆಗಾರರ ಸಂಖ್ಯೆ ಎಷ್ಟು ;

(ಆ) ಶ್ರೀಗಂಧ ಬೆಳೆಯುವವರಿಗೆ ಸರ್ಕಾರ ಕೊಡುವ ಸವಲತ್ತುಗಳೇನು ;

(ಇ) ಈ ಶ್ರೀಗಂಧವನ್ನು ಮುಕ್ತ ಮಾರುಕಟ್ಟೆಯಲ್ಲಿ ಮಾರಾಟ ಮಾಡಲು ಅವಕಾಶ ಇದೆಯೇ ;

(ಈ) ಈಗಿನ ಮಾರುಕಟ್ಟೆ ದರದಲ್ಲಿ ಕರ್ನಾಟಕ ರಾಜ್ಯದಲ್ಲಿ ಬೆಳೆದು ನಿಂತಿರುವ ಶ್ರೀಗಂಧದ ಮರ ಮೌಲ್ಯ ಎಷ್ಟು ; ಹಾಗೂ ರಾಜ್ಯದ ಯಾವ ಯಾವ ಪ್ರದೇಶಗಳಲ್ಲಿ ಶ್ರೀಗಂಧದ ಮರಗಳನ್ನು ಬೆಳೆಯಲಾಗುತ್ತಿದೆ ?

## ಬಯಲುಸೀಮೆ ಜಿಲ್ಲೆಗಳ ಮೀನುಗಾರಿಕೆ ಕುರಿತು.

**ಶ್ರೀ ವೈ.ಎ. ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ) :–**

೧೪೪೯ (೧೭೩೬) ಮಾನ್ಯ ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ ಮೀನುಗಾರಿಕೆ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬಯಲುಸೀಮೆ ಜಿಲ್ಲೆಗಳಲ್ಲಿ ಮಿನುಗಾರಿಕೆಯನ್ನು ಪ್ರೋತ್ಸಾಹಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ;

(ಆ) ಈ ಭಾಗದ ಮೀನುಗಾರರಿಗೆ ಸರ್ಕಾರ ನೀಡಿರುವ ಸವಲತ್ತುಗಳೇನು ;

(ಇ) ಯಾವ ಯಾವ ಜಾತಿಯ ಮೀನುಗಳನ್ನು ಬಯಲುಸೀಮೆ ಜಿಲ್ಲೆಗಳಲ್ಲಿ ಸಾಕಲಾಗುತ್ತಿದೆ ;

(ಈ) ಈ ಭಾಗದಲ್ಲಿ ಮೀನುಗಾರಿಕೆಯಿಂದ ಸರ್ಕಾರಕ್ಕೆ ಬರುವ ಆದಾಯವೆಷ್ಟು ;

(ಉ) ಈ ಭಾಗದ ಮೀನುಗಾರಿಕೆಗೆ ಸರ್ಕಾರ ವ್ಯಯಿಸುವ ವೆಚ್ಚ ಎಷ್ಟು ?

## ಕಂದಾಯ ಗ್ರಾಮಗಳ ಕುರಿತು.

**ಶ್ರೀ ವೈ.ಎ. ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ) :-**

೧೪೫೦ (೧೭೩೫) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಕರ್ನಾಟಕ ರಾಜ್ಯದಲ್ಲಿರುವ ಕಂದಾಯ ಗ್ರಾಮಗಳಲ್ಲದ ಬೇಚರಾಕ್ ಗ್ರಾಮಗಳ ಸಂಖ್ಯೆ ಎಷ್ಟು ;

(ಆ) ಈ ಗ್ರಾಮಗಳನ್ನು ಕಂದಾಯ ಗ್ರಾಮಗಳಾಗಿ ಪರಿವರ್ತಿಸಲು ಇರುವ ತೊಂದರೆಗಳೇನು ?

## ಐ.ಟಿ.ಐ ಕಾಲೇಜುಗಳಿಗೆ ಮೂಲಭೂತ ಸೌಕರ್ಯ ಒದಗಿಸುವ ಬಗ್ಗೆ.

**ಶ್ರೀ ವೈ.ಎ. ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ) :-**

೧೪೫೧ (೧೭೩೪) ಮಾನ್ಯ ಕಾರ್ಮಿಕ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಕರ್ನಾಟಕ ರಾಜ್ಯದಲ್ಲಿರುವ ಹೊಸದಾಗಿ ಪ್ರಾರಂಭಿಸಲಾಗಿರುವ ೧೦೦ ಐ.ಟಿ.ಐ ಕಾಲೇಜುಗಳ ಮೂಲಭೂತ ಸೌಕರ್ಯಗಳಿಗಾಗಿ ಸರ್ಕಾರ ಮೀಸಲಿಟ್ಟಿರುವ ಹಣವೆಷ್ಟು ; (ಐ.ಟಿ.ಐ ವಾರು ವಿವರ ನೀಡುವುದು)

(ಆ) ಸದರಿ ಐ.ಟಿ.ಐ ಕಾಲೇಜುಗಳಿಗೆ ಅಗತ್ಯಕ್ಕೆ ತಕ್ಕಂತೆ ಸಿಬ್ಬಂದಿಗಳನ್ನು ನೇಮಿಸಲಾಗಿದೆಯೇ ;

(ಇ) ಕಾಲೇಜುಗಳಿಗೆ ಪೀಠೋಪಕರಣ ಸೇರಿದಂತೆ ಅವಶ್ಯಕತೆ ಇರುವ ಯಂತ್ರಗಳು/ಸಲಕರಣೆಗಳನ್ನು ಪೂರೈಸಲಾಗಿದೆಯೇ ;

(ಈ) ಇಲ್ಲದಿದ್ದಲ್ಲಿ, ಯಾವ ಕಾಲಮಿತಿಯೊಳಗೆ ಸೌಕರ್ಯ ಕಲ್ಪಿಸಲಾಗುವುದು ?

## ಕರಾವಳಿ ಜಿಲ್ಲೆಗಳಲ್ಲಿರುವ ಒಟ್ಟು ಕಿಂಡಿ ಅಣೆಕಟ್ಟುಗಳು

**ಶ್ರೀ ಐವನ್ ಡಿ'ಸೋಜಾ (ನಾಮನಿರ್ದೇಶನ ಹೊಂದಿದವರು) :-**

೧೪೫೨ (೧೭೩೮) ಮಾನ್ಯ ಸಣ್ಣ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಕರಾವಳಿ ಜಿಲ್ಲೆಗಳಲ್ಲಿರುವ ಒಟ್ಟು ಕಿಂಡಿ ಆಣೆಕಟ್ಟುಗಳ ಸಂಖ್ಯೆ ಎಷ್ಟು ; ಪ್ರಸ್ತುತ ಇರುವ ಕಿಂಡಿ ಆಣೆಕಟ್ಟುಗಳಲ್ಲಿ ನೀರನ್ನು ಶೇಖರಿಸಿ ಉಪಯೋಗಿಸಲಾಗುತ್ತಿದೆಯೇ ;

(ಆ) ಪ್ರಸ್ತುತ ಇರುವ ಕಿಂಡಿ ಆಣೆಕಟ್ಟುಗಳ ಮುಖಾಂತರ, ಕರಾವಳಿ ಜಿಲ್ಲೆಯ ರೈತರಿಗೆ ನೀರಿನ ಸೌಲಭ್ಯ ದೊರಕುತ್ತಿದೆಯೇ ;

(ಇ) ಬೇಸಾಯಕ್ಕೆ ಮತ್ತು ಕುಡಿಯುವ ನೀರಿನ ಸಮಸ್ಯೆಯನ್ನು ಪರಿಹಾರ ಮಾಡಲು ಕಿಂಡಿ ಆಣೆಕಟ್ಟುಗಳನ್ನು ಹೆಚ್ಚುವರಿಯಾಗಿ ನಿರ್ಮಾಣ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೇ ; (ವಿವರ ನೀಡುವುದು)

(ಈ) ಕರಾವಳಿ ಜಿಲ್ಲೆಯಲ್ಲಿರುವ ಕಿಂಡಿ ಆಣೆಕಟ್ಟು ನಿರ್ವಹಣೆಗೆ ಬಿಡುಗಡೆ ಮಾಡಿದ ಅನುದಾನ ಎಷ್ಟು ;

(ಉ) ಅನುದಾನ ಕಡಿಮೆ ಬಿಡುಗಡೆಗೊಳಿಸಿರುವುದರಿಂದ ಕಿಂಡಿ ಆಣೆಕಟ್ಟು ನಿರ್ವಹಣೆ ಇಲ್ಲದೆ ನಿಷ್ಪ್ರಯೋಜಕವಾಗಿರುವುದು ಇಲಾಖೆಯ ಗಮನಕ್ಕೆ ಬಂದಿದೆಯೇ ? (ವಿವರ ನೀಡುವುದು)

## ರಾಜ್ಯದಲ್ಲಿ ೯೪'ಸಿ ಭೂ ಮಂಜೂರಾತಿ ಕಾಯ್ದೆಯ ಬಗ್ಗೆ

**ಶ್ರೀ ಐವನ್ ಡಿ'ಸೋಜಾ (ನಾಮನಿರ್ದೇಶನ ಹೊಂದಿದವರು) :-**

೧೪೫೩ (೧೭೪೧) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ೯೪'ಸಿ ಅರ್ಜಿಗಳನ್ನು ಶೀಘ್ರವಾಗಿ ಇತ್ಯರ್ಥಗೊಳಿಸಲು ಪ್ರತ್ಯೇಕವಾದ ನ್ಯಾಯ ಮಂಡಳಿಯನ್ನು ರಚಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ ;

(ಆ) ರಾಜ್ಯದಲ್ಲಿ ೯೪'ಸಿ ಭೂ ಮಂಜೂರಾತಿ ಕಾಯ್ದೆಯಡಿಯಲ್ಲಿ ಸಲ್ಲಿಸಿದ ಒಟ್ಟು ಅರ್ಜಿಗಳ ಸಂಖ್ಯೆ ಎಷ್ಟು ; ಇತ್ಯರ್ಥ ಪಡಿಸಿದ ಅರ್ಜಿಗಳ ಸಂಖ್ಯೆ ಎಷ್ಟು ; (ಜಿಲ್ಲಾವಾರು ವಿವರ ನೀಡುವುದು)

(ಇ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ೯೪'ಸಿ ಅನ್ವಯ ಸ್ವೀಕರಿಸಿದ ಅರ್ಜಿಗಳ ಸಂಖ್ಯೆ ಎಷ್ಟು ; ಇತ್ಯರ್ಥಗೊಳಿಸಿದ ಅರ್ಜಿಗಳ ಸಂಖ್ಯೆ ಎಷ್ಟು ;

(ಈ) ೯೪'ಸಿ ಅರ್ಜಿಗಳ ವಿಚಾರಣೆಗೆ "ಕಂದಾಯ ಅದಾಲತ್" ಮುಖಾಂತರ ಇತ್ಯರ್ಥಗೊಳಿಸಲು ಇಲಾಖೆ ಕ್ರಮ ಕೈಗೊಳ್ಳುವುದೇ?

## ಕಟ್ಟಡ ಕಾರ್ಮಿಕರಿಗೆ ಸ್ಮಾರ್ಟ್ ಕಾರ್ಡ್

**ಶ್ರೀ ಐವನ್ ಡಿ'ಸೋಜಾ (ನಾಮನಿರ್ದೇಶನ ಹೊಂದಿದವರು) :-**

೧೪೫೪ (೧೭೪೦) ಮಾನ್ಯ ಕಾರ್ಮಿಕ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದಲ್ಲಿ ಒಟ್ಟು ನೋಂದಾಯಿತ ಕಟ್ಟಡ ಕಾರ್ಮಿಕರ ಸಂಖ್ಯೆ ಎಷ್ಟು ; ನೋಂದಾಯಿತ ಎಲ್ಲಾ ಕಾರ್ಮಿಕರಿಗೆ ಸ್ಮಾರ್ಟ್ ಕಾರ್ಡ್ ನೀಡಲಾಗಿದೆಯೇ ; ಇಲ್ಲದಿದ್ದಲ್ಲಿ ಯಾವಾಗ ನೀಡಲಾಗುವುದು ;

(ಆ) ರಾಜ್ಯದಲ್ಲಿ ಎಷ್ಟು ಕಟ್ಟಡ ಕಾರ್ಮಿಕರಿಗೆ ಈ ಸವಲತ್ತುಗಳನ್ನು ಒದಗಿಸಲಾಗಿದೆ ; (ಜಿಲ್ಲಾವಾರು ವಿವರ ನೀಡುವುದು)

(ಇ) ಕಟ್ಟಡ ಕಾರ್ಮಿಕರ ವಿಳಾಸ ಸರಿಯಾಗಿ ಇಲ್ಲದೇ ಫಲಾನುಭವಿಗಳಿಗೆ ಸವಲತ್ತುಗಳನ್ನು ನೀಡಲು ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಇದನ್ನು ಸರಿಪಡಿಸಲು ಕೈಗೊಂಡ ಕ್ರಮಗಳೇನು ;

(ಈ) ಅಸಂಘಟಿತ ಕಾರ್ಮಿಕರಾದ ಬಸ್ ಚಾಲಕರು, ರಿಕ್ಷಾ ಚಾಲಕರು ಮತ್ತು ಕೂಲಿ ಕಾರ್ಮಿಕರಿಗೆ ರಾಷ್ಟ್ರೀಯ ಸ್ವಸ್ತ ಭಿಮಾ ಯೋಜನೆ ಅಡಿಯಲ್ಲಿ ಎಷ್ಟು ಮಂದಿಗೆ ಸೌಲಭ್ಯಗಳನ್ನು ಒದಗಿಸಲಾಗಿದೆ ;

(ಉ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ವಿವಿಧ ಯೋಜನೆಗಳ ಅಡಿಯಲ್ಲಿ ನೋಂದಾಯಿತ ರಿಕ್ಷಾ ಚಾಲಕರ, ಬಸ್ ಚಾಲಕರ ಮತ್ತು ಖಾಸಗಿ ಮೋಟರ್ ವಾಹನ ಚಾಲಕರುಗಳ ಸಂಖ್ಯೆ ಎಷ್ಟು ?

## ಮಂಗಳೂರು ಎಮ್ಮೆಕೆರೆಯಲ್ಲಿ ಅಂತರರಾಷ್ಟ್ರೀಯ ಮಟ್ಟದ ಈಜುಕೋಳದ ನಿರ್ಮಾಣ

**ಶ್ರೀ ಐವನ್ ಡಿ'ಸೋಜಾ (ನಾಮನಿರ್ದೇಶನ ಹೊಂದಿದವರು) :-**

೧೪೫೫ (೧೭೩೯) ಮಾನ್ಯ ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ ಮೀನುಗಾರಿಕೆ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಮಂಗಳೂರು ಎಮ್ಮೆಕೆರೆಯಲ್ಲಿ ಅಂತರರಾಷ್ಟ್ರೀಯ ಮಟ್ಟದ ಈಜುಕೊಳದ ನಿರ್ಮಾಣ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ ; ಇದ್ದಲ್ಲಿ ಯಾವ ಹಂತದಲ್ಲಿದೆ ; ಈ ಯೋಜನೆ ವಿಳಂಬಕ್ಕೆ ಕಾರಣಗಳೇನು ;

(ಆ) ರಾಜ್ಯದ ಯಾವ ಯಾವ ಜಿಲ್ಲೆಗಳಲ್ಲಿ ಅಂತರರಾಷ್ಟ್ರೀಯ ಮಟ್ಟದ ಈಜುಕೊಳದ ಸ್ಥಾಪಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆ ; (ವಿವರ ನೀಡುವುದು)

(ಇ) ಪ್ರಸ್ತುತ ಕ್ರೀಡಾ ಇಲಾಖೆಯ ಅಧೀನದಲ್ಲಿರುವ ಈಜುಕೊಳಗಳ ಸಂಖ್ಯೆ ಎಷ್ಟು ;

(ಈ) ಮಂಗಳೂರು ನಗರದಲ್ಲಿ ಕ್ರೀಡಾ ವಿದ್ಯಾರ್ಥಿಗಳಿಗೆ ನಿರ್ಮಾಣಗೊಳ್ಳುವ ಕ್ರೀಡಾ ಹಾಸ್ಟೆಲ್‌ನ ಕಾಮಗಾರಿ ಕುಂಠಿತಗೊಂಡಿದ್ದು, ಇದು ಯಾವಾಗ ಪೂರ್ಣಗೊಳ್ಳುವುದು, ಎಷ್ಟು ಮಕ್ಕಳಿಗೆ ಪ್ರವೇಶ ನೀಡಲು ಸಾಧ್ಯವಾಗುವುದು ?

## ಕೊಪ್ಪಳ ಜಿಲ್ಲೆಯಲ್ಲಿನ ಕೆರೆಗಳಿಗೆ ನೀರು ತುಂಬಿಸುವ ಬಗ್ಗೆ

**ಶ್ರೀ ಆಚಾರ್ ಹಾಲಪ್ಪ ಬಸಪ್ಪ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೪೫೬ (೧೭೪೬) ಮಾನ್ಯ ಸಣ್ಣ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕೊಪ್ಪಳ ಜಿಲ್ಲೆಯಲ್ಲಿರುವ ಒಟ್ಟು ಕೆರೆಗಳ ಸಂಖ್ಯೆ ಎಷ್ಟು ;

(ಆ) ಸದರಿ ಕೆರೆಗಳ ಭರ್ತಿಗಾಗಿ ಸರ್ಕಾರ ರೂಪಿಸಿರುವ ಯೋಜನೆಗಳಾವುವು ;

(ಇ) ಕೆರೆಗಳ ಭರ್ತಿಗಾಗಿ ಸರ್ಕಾರ ಕಾಯ್ದಿರಿಸಿದ ಅನುದಾನ ಎಷ್ಟು;

(ಈ) ಈ ಅನುದಾನದಲ್ಲಿ ೨೦೧೪–೧೫ನೇ ಸಾಲಿನವರೆಗೆ ವಿನಿಯೋಗಿಸಲಾದ ಅನುದಾನದ ಪ್ರಮಾಣ ಎಷ್ಟು ; (ಕಾಮಗಾರಿವಾರು ವಿವರ ನೀಡುವುದು)

(ಉ) ಜಿಲ್ಲೆಯಲ್ಲಿನ ಎಷ್ಟು ಕೆರೆಗಳಿಗೆ ಈ ಅನುದಾನವನ್ನು ವಿನಿಯೋಗಿಸಲಾಗಿದೆ ? (ವಿವರ ನೀಡುವುದು)

## ೨೦೧೪-೨೦೧೫ನೇ ಸಾಲಿನಲ್ಲಿ ಮತ್ಸ್ಯಾಶ್ರಮ ಯೋಜನೆ ಜಾರಿಯ ಬಗ್ಗೆ

**ಶ್ರೀ ಆಚಾರ್ ಹಾಲಪ್ಪ ಬಸಪ್ಪ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-**

೧೪೫೭ (೧೭೪೪) ಮಾನ್ಯ ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ ಮೀನುಗಾರಿಕೆ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ೨೦೧೪-೧೫ನೇ ಸಾಲಿನಲ್ಲಿ ಮೀನುಗಾರಿಕೆ ಇಲಾಖೆಗೆ ನಿಗದಿಪಡಿಸಿದ ಅನುದಾನ ಎಷ್ಟು ;

(ಆ) ನಿಗದಿಪಡಿಸಿದ ಅನುದಾನವನ್ನು ಸದರಿ ವರ್ಷದಲ್ಲಿ ಪೂರ್ಣ ಪ್ರಮಾಣದಲ್ಲಿ ಖರ್ಚು ಮಾಡಲಾಗಿದೆಯೇ ;

(ಇ) ಯಾವ ಯಾವ ಯೋಜನೆಗಳನ್ನು ರೂಪಿಸಿ ಹಣವನ್ನು ಖರ್ಚು ಮಾಡಲಾಗಿದೆ ; (ವಿವರ ನೀಡುವುದು)

(ಈ) ೨೦೧೪-೧೫ನೇ ಸಾಲಿನಲ್ಲಿ ಸರ್ಕಾರ ಮತ್ಸ್ಯಾಶ್ರಮ ಯೋಜನೆಯನ್ನು ಜಾರಿಗೆ ತರಲಾಗಿದೆಯೇ ; ಈ ಯೋಜನೆಯನ್ನು ಜಾರಿಗೆ ತಂದಲ್ಲಿ ಎಷ್ಟು ಜನ ಫಲಾನುಭವಿಗಳಿಗೆ ಮನೆಯನ್ನು ನಿರ್ಮಿಸಿ ಕೊಡಲಾಗಿದೆ ; (ಜಿಲ್ಲಾವಾರು, ಫಲಾನುಭವಿವಾರು ಮಾಹಿತಿ ನೀಡುವುದು)

(ಉ) ಪ್ರಸ್ತುತ ಈ ಯೋಜನೆಗೆ ಆಯವ್ಯಯದಲ್ಲಿ ನಿಗದಿಪಡಿಸಿದ ಅನುದಾನ ಎಷ್ಟು ?

## ರಾಜ್ಯದಲ್ಲಿ ಅಂತರ್ಜಲ ಕುಸಿದಿರುವ ಜಿಲ್ಲೆಗಳಿಗೆ ರೂಪಿಸಿದ ಯೋಜನೆಗಳ ಬಗ್ಗೆ

**ಶ್ರೀ ಆಚಾರ್ ಹಾಲಪ್ಪ ಬಸಪ್ಪ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೪೫೮ (೧೭೪೩) ಮಾನ್ಯ ಸಣ್ಣ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಅಂತರ್ಜಲ ಕುಸಿದಿರುವ ಜಿಲ್ಲೆಗಳಾವುವು ;

(ಆ) ಅಂತರ್ಜಲ ಕುಸಿದಿರುವ ಜಿಲ್ಲೆಗಳಲ್ಲಿ ಅಂತರ್ಜಲ ಸುಧಾರಿಸಲು ಸರ್ಕಾರ ಯಾವ ಯಾವ ಯೋಜನೆಗಳನ್ನು ರೂಪಿಸಿದೆ ;

(ಇ) ರೂಪಿಸಿದ ಯೋಜನೆಗಳು ಪ್ರಸ್ತುತ ಯಾವ ಹಂತದಲ್ಲಿವೆ ; (ಜಿಲ್ಲಾವಾರು ಮಾಹಿತಿ ನೀಡುವುದು)

(ಈ) ಸದರಿ ವರ್ಷದಲ್ಲಿ ಅಂತರ್ಜಲ ಮಟ್ಟ ಹೆಚ್ಚಿಸಲು ಈ ಜಿಲ್ಲೆಗಳಿಗೆ ಸರ್ಕಾರ ನಿಗದಿ ಪಡಿಸಿದ ಅನುದಾನ ಎಷ್ಟು ;

(ಉ) ನಿಗದಿ ಪಡಿಸಿದ ಅನುದಾನವನ್ನು ಪೂರ್ಣ ಪ್ರಮಾಣದಲ್ಲಿ ಬಳಕೆ ಮಾಡಲಾಗಿದೆಯೇ ? (ವಿವರಣೆ ನೀಡುವುದು)

## ಅರಣ್ಯ ಇಲಾಖೆಯಲ್ಲಿ ಉದ್ಯೋಗ ಖಾತ್ರಿ ಯೋಜನೆಯಡಿ ಕೈಗೊಂಡ ಕಾಮಗಾರಿಗಳ ಬಗ್ಗೆ

**ಶ್ರೀ ಆಚಾರ್ ಹಾಲಪ್ಪ ಬಸಪ್ಪ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೪೫೯ (೧೭೪೨) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರ :–

(ಅ) ಕೊಪ್ಪಳ ಜಿಲ್ಲೆಯಲ್ಲಿ ೨೦೧೩–೧೪ನೇ ಸಾಲಿನಿಂದ ಪ್ರಸಕ್ತ ಸಾಲಿನವರೆಗೂ ಅರಣ್ಯ ಇಲಾಖೆಯಲ್ಲಿ ಉದ್ಯೋಗ ಖಾತ್ರಿ ಯೋಜನೆಯಡಿಯಲ್ಲಿ ಕೈಗೊಳ್ಳಲಾದ ಕಾಮಗಾರಿಗಳು ಯಾವುವು; (ತಾಲ್ಲೂಕುವಾರು ವಿವರಗಳನ್ನು ನೀಡುವುದು)

(ಆ) ಪ್ರಸ್ತುತ ಕಾಮಗಾರಿಗಳ ಪ್ರಗತಿ ಯಾವ ಹಂತದಲ್ಲಿದೆ ; (ಕಾಮಗಾರಿವಾರು ವಿವರಗಳನ್ನು ನೀಡುವುದು)

(ಇ) ಸದರಿ ಎಲ್ಲಾ ಕಾಮಗಾರಿಗಳಲ್ಲಿ ೩ನೇ ಪಕ್ಷಕಾರರ ಅಭಿಪ್ರಾಯಗಳನ್ನು ಪಡೆಯಲಾಗಿದೆಯೇ ;

(ಈ) ಇಲ್ಲವಾದಲ್ಲಿ ಅಂತಹ ಕಾಮಗಾರಿಗಳಾವುವು ; ಇದಕ್ಕೆ ಕಾರಣಗಳೇನು ;

(ಉ) ಖೊಟ್ಟಿ ಬಿಲ್ ತಯಾರಿಸಿ ಅನುದಾನ ಸೆಳೆಯಲು ಪ್ರಯತ್ನಿಸಿರುವ ಘಟನೆಗಳೇನಾದರೂ ಬೆಳಕಿಗೆ ಬಂದಿವೆಯೇ ? (ಇದ್ದಲ್ಲಿ ವಿವರಗಳನ್ನು ನೀಡುವುದು)

## ಕೊಪ್ಪಳ ಜಿಲ್ಲೆಯ ಏತ ನೀರಾವರಿ ಸದ್ಯದ ಪ್ರಗತಿಯ ಬಗ್ಗೆ

**ಶ್ರೀ ಆಚಾರ್ ಹಾಲಪ್ಪ ಬಸಪ್ಪ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೪೬೦ (೧೭೪೫) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕೊಪ್ಪಳ ಏತ ನೀರಾವರಿ ಯೋಜನೆಯ ಕಾಮಗಾರಿ ಪ್ರಗತಿ ಯಾವ ಹಂತದಲ್ಲಿದೆ ;

(ಆ) ೩ನೇ ಹಂತದ ಕಾಮಗಾರಿ ಪ್ರಾರಂಭಕ್ಕೆ ವಿಳಂಬವಾಗುತ್ತಿರುವುದೇಕೆ;

(ಇ) ಕೊಪ್ಪಳ ಏತ ನೀರಾವರಿ ಯೋಜನೆಗಾಗಿ ಸರ್ಕಾರ ಮೀಸಲಿರಿಸಿದ ಅನುದಾನದ ಪ್ರಮಾಣ ಎಷ್ಟು ;

(ಈ) ಇದುವರೆವಿಗೂ ಕೊಪ್ಪಳ ಏತ ನೀರಾವರಿ ಯೋಜನೆಗೆ ವಿನಿಯೋಗಿಸಲಾದ ಅನುದಾನದ ಪ್ರಮಾಣ ಎಷ್ಟು ;

(ಉ) ಹೆಚ್ಚುವರಿಯಾಗಿ ಅನುದಾನವನ್ನು ಮೀಸಲಿರಿಸುವ ವಿಚಾರ ಸರ್ಕಾರದ ಮಟ್ಟದಲ್ಲಿದೆಯೇ ;

(ಊ) ಸದ್ಯದ ಕಾಮಗಾರಿಯನ್ನು ಅವಲೋಕಿಸಿದರೆ ಕಾಮಗಾರಿಯನ್ನು ಯಾವಾಗ ಲೋಕಾರ್ಪಣೆ ಮಾಡಲಾಗುವುದು ?

## ಗಾರ್ಮೆಂಟ್ಸ್‌ಗೆ ಹೋಗುವ ಮಹಿಳೆಯರಿಗೆ ಮೂಲಭೂತ ಸೌಲಭ್ಯ ನೀಡುವ ಬಗ್ಗೆ

**ಶ್ರೀ ಬಿ. ರಾಮಕೃಷ್ಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೪೬೧ (೧೭೪೭) ಮಾನ್ಯ ಕಾರ್ಮಿಕ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಗಾರ್ಮೆಂಟ್ಸ್‌ಗೆ ಹೋಗುವ ಮಹಿಳೆಯರಿಗೆ ಮೂಲಭೂತ ಸೌಲಭ್ಯಗಳನ್ನು ಸರ್ಕಾರ ಮತ್ತು ಕಾರ್ಖಾನೆಗಳು ಒದಗಿಸದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಪ್ರತಿನಿತ್ಯ ಗಾರ್ಮೆಂಟ್ಸ್ ಕೆಲಸಕ್ಕಾಗಿ ತೆರಳುವ ಸಾವಿರಾರು ಮಹಿಳೆಯರಿಗೆ ಸರ್ಕಾರ ಮತ್ತು ಕಾರ್ಖಾನೆಗಳು ನೀಡುತ್ತಿರುವ ಸೌಲಭ್ಯಗಳೇನು ;

(ಇ) ಗಾರ್ಮೆಂಟ್ಸ್ ಕೆಲಸಕ್ಕಾಗಿ ಟೆಂಪೋ, ಆಟೋ, ಟ್ಯಾಕ್ಸಿ, ಗೂಡ್ಸ್ ಆಟೋಗಳಲ್ಲಿ ತೆರಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಈ) ಮಹಿಳಾ ರಕ್ಷಣೆಯಡಿ ಗಾರ್ಮೆಂಟ್ಸ್‌ನಲ್ಲಿ ದುಡಿಯುವ ಮಹಿಳೆಯರಿಗೆ ವಿವಿಧ ಸೌಲಭ್ಯಗಳು ಮತ್ತು ಉಚಿತ ಬಸ್ ಸೇವೆ ಒದಗಿಸಲು ಸರ್ಕಾರ ಉದ್ದೇಶಿಸಿದೆಯೇ ;

(ಉ) ಹಾಗಿದಿದ್ದಲ್ಲಿ, ವಿವಿಧ ಸೌಲಭ್ಯಗಳು ಮತ್ತು ಉಚಿತ ಬಸ್ ಸೇವೆಯನ್ನು ಯಾವ ಕಾಲಮಿತಿಯೊಳಗೆ ಒದಗಿಸಲಾಗುವುದು? (ಮಾಹಿತಿ ನೀಡುವುದು)

## ಏತ ನೀರಾವರಿ ಯೋಜನೆಗಳ ಬಗ್ಗೆ ಮಾಹಿತಿ

**ಶ್ರೀ ಬಿ. ರಾಮಕೃಷ್ಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೪೬೨ (೧೭೪೮) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಎಷ್ಟು ಏತ ನೀರಾವರಿ ಯೋಜನೆಗಳಿವೆ (ಜಿಲ್ಲಾವಾರು ಮಾಹಿತಿ ನೀಡುವುದು) ಈ ಯೋಜನೆಗಳಲ್ಲಿ ಚಾಲ್ತಿಯಲ್ಲಿರುವ ಹಾಗೂ ನಿಷ್ಕ್ರಿಯ ಹೊಂದಿರುವ ಯೋಜನೆಗಳೆಷ್ಟು ; ಸದರಿ ಯೋಜನೆಗಳು ನಿಷ್ಕ್ರಿಯ ಹೊಂದಲು ಕಾರಣಗಳ ಸಹಿತ ವರದಿ ನೀಡುವುದು ;

(ಆ) ಮಂಡ್ಯ ಜಿಲ್ಲೆಯಲ್ಲಿ ದುರಸ್ತಿಗೆ ಒಳಪಟ್ಟಿರುವ ಏತ ನೀರಾವರಿಗಳ ಸಂಖ್ಯೆ ಎಷ್ಟು ; ಅವುಗಳನ್ನು ಅಭಿವೃದ್ಧಿ ಪಡಿಸಲು ಸರ್ಕಾರ ಕೈಗೊಂಡ ಕ್ರಮಗಳೇನು ? (ಮಾಹಿತಿ ನೀಡುವುದು)

## ರಾಜ್ಯದ ಅರಣ್ಯ ಪ್ರದೇಶಕ್ಕೆ ಬೆಂಕಿ ಬೀಳುತ್ತಿರುವ ಬಗ್ಗೆ

**ಶ್ರೀ ಬಿ. ರಾಮಕೃಷ್ಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೪೬೩ (೧೭೫೪) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿರುವ ಅರಣ್ಯ ಭೂಮಿ ಎಷ್ಟು (ಜಿಲ್ಲಾವಾರು ಮಾಹಿತಿ ನೀಡುವುದು)

(ಆ) ರಾಜ್ಯದ ಕೆಲವು ಅರಣ್ಯ ಪ್ರದೇಶಗಳಿಗೆ ಬೆಂಕಿ ಬೀಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಹಾಗಿದ್ದಲ್ಲಿ, ಇದುವರೆವಿಗೂ ಯಾವ ಯಾವ ಅರಣ್ಯ ಪ್ರದೇಶಕ್ಕೆ ಬೆಂಕಿ ಬಿದ್ದಿದೆ ;

(ಈ) ಅರಣ್ಯ ಪ್ರದೇಶಗಳಿಗೆ ಬೆಂಕಿ ಬೀಳಲು ಕಾರಣಗಳೇನು ;

(ಉ) ಇದನ್ನು ತಡೆಗಟ್ಟಲು ಸರ್ಕಾರ ಕೈಗೊಂಡ ಕ್ರಮಗಳೇನು ?

## ಮಳವಳ್ಳಿ ಪಟ್ಟಣದ ದೊಡ್ಡ ಕೆರೆಯಲ್ಲಿ ಹೂಳು ತೆಗೆಸುವ ಬಗ್ಗೆ

**ಶ್ರೀ ಬಿ. ರಾಮಕೃಷ್ಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೪೬೪ (೧೭೯೫) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಮಂಡ್ಯ ಜಿಲ್ಲೆ ಮಳವಳ್ಳಿ ದೊಡ್ಡಕೆರೆ ಹಾಗೂ ಮಾರೇಹಳ್ಳಿ ಕೆರೆ ಹೂಳು ಎತ್ತುವುದನ್ನು ಇಲಾಖೆ ಅಧಿಕಾರಿಗಳು ವಿಳಂಬ ಮಾಡುತ್ತಿರುವುದರಿಂದ ರೈತರು ಈ ಬಾರಿ ಬೆಳೆ ಬೆಳೆಯದೆ ಅತಂತ್ರ ಸ್ಥಿತಿಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಬಂದಿದ್ದಲ್ಲಿ ಕೆರೆ ಹೂಳೆತ್ತುವ ಕಾರ್ಯವನ್ನು ಯಾವಾಗ ಪ್ರಾರಂಭಿಸಲಾಗುವುದು ;

(ಇ) ಯಾವ ಕಾಲಮಿತಿಯೊಳಗೆ ಮುಕ್ತಾಯ ಮಾಡಲಾಗುವುದು ; (ಪೂರ್ಣ ಮಾಹಿತಿ ನೀಡುವುದು)

(ಈ) ಇದರಿಂದ ರೈತರಿಗೆ ಈ ಬಾರಿ ಎಷ್ಟು ಪ್ರಮಾಣದ ನಷ್ಟ ಉಂಟಾಗಲಿದೆ ?

## ನಗರಗಳಲ್ಲಿ ಹೆಚ್ಚಿನ ವಾಹನ ದಟ್ಟಣೆಯಿಂದ ಪರಿಸರ ಹಾಳಾಗುತ್ತಿರುವ ಬಗ್ಗೆ

**ಶ್ರೀ ಟಿ.ಎ. ಶರವಣ (ವಿಧಾನಸಭೆಯಿಂದ ಚುನಾಯಿತರಾದವರು) :-**

೧೪೬೫ (೧೭೫೦) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಬೆಂಗಳೂರು ಸೇರಿದಂತೆ ರಾಜ್ಯದ ವಿವಿಧ ನಗರಗಳಲ್ಲಿ ಹೆಚ್ಚಿನ ವಾಹನ ದಟ್ಟಣೆಯಿಂದಾಗಿ ಪರಿಸರ ಹಾಳಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಪರಿಸರ ನೈರ್ಮಲ್ಯದಿಂದಾಗಿ ಜನಸಾಮಾನ್ಯರ ಮೇಲೆ ಗಂಭೀರ ಪರಿಣಾಮ ಬೀರುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಹಾಗಿದ್ದಲ್ಲಿ, ಪರಿಸರ ಸಂರಕ್ಷಣೆಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು ? (ಮಾಹಿತಿ ನೀಡುವುದು)

## ರೈತರಿಗೆ ಅವಶ್ಯಕತೆಯಿರುವ ದಾಖಲೆಗಳನ್ನು ತುರ್ತಾಗಿ ಒದಗಿಸಲು ಕ್ರಮ

**ಶ್ರೀ ಟಿ.ಎ. ಶರವಣ (ವಿಧಾನಸಭೆಯಿಂದ ಚುನಾಯಿತರಾದವರು) :-**

೧೪೬೬ (೧೭೫೧) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದ ಕಂದಾಯ ಇಲಾಖೆಯಲ್ಲಿ ರೈತರಿಗೆ ಅವಶ್ಯಕತೆಯಿರುವ ದಾಖಲೆಗಳನ್ನು ತುರ್ತಾಗಿ ಒದಗಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ; (ಮಾಹಿತಿ ನೀಡುವುದು)

(ಆ) ರೈತರು ಅರ್ಜಿ ಸಲ್ಲಿಸಿದ ಎಷ್ಟು ಸಮಯದಲ್ಲಿ ದಾಖಲೆಗಳನ್ನು ಒದಗಿಸಲಾಗುವುದು ;

(ಇ) ರೈತರಿಗೆ ಅವಶ್ಯವಿರುವ ದಾಖಲೆಗಳನ್ನು ಕೋರಿ ಅರ್ಜಿ ಸಲ್ಲಿಸಿ, ಸರ್ಕಾರ ನಿಗದಿಪಡಿಸಿರುವ ಸಮಯ ಮುಗಿದಿದ್ದರೂ ಸಹ ದಾಖಲೆಗಳನ್ನು ನೀಡದೆ ತೊಂದರೆ ನೀಡುತ್ತಿರುವ ಅಧಿಕಾರಿಗಳ ಮೇಲೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು ?

## ಕ್ರೀಡೆಯನ್ನು ಉತ್ತೇಜಿಸಲು ಕೈಗೊಂಡ ಕ್ರಮ

**ಶ್ರೀ ಟಿ.ಎ. ಶರವಣ (ವಿಧಾನಸಭೆಯಿಂದ ಚುನಾಯಿತರಾದವರು)** :-

೧೪೬೭ (೧೭೯೦) ಮಾನ್ಯ ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ ಮೀನುಗಾರಿಕೆ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದಲ್ಲಿ ಕ್ರೀಡೆಯನ್ನು ಉತ್ತೇಜಿಸಲು ಸರ್ಕಾರವು ಕೈಗೊಂಡಿರುವ ಕ್ರಮಗಳೇನು ; (ಸಂಪೂರ್ಣ ಮಾಹಿತಿ ನೀಡುವುದು)

(ಆ) ಆಯವ್ಯಯದಲ್ಲಿ ಕಳೆದ ೩ ವರ್ಷಗಳಿಂದ ಕ್ರೀಡೆಗಾಗಿ ಮೀಸಲಿಟ್ಟ ಹಣವೆಷ್ಟು ; ಖರ್ಚು ಮಾಡಿರುವ ಹಣವೆಷ್ಟು ; ಬಾಕಿ ಉಳಿದಿರುವ ಹಣವೆಷ್ಟು ; (ಮಾಹಿತಿ ನೀಡುವುದು)

(ಇ) ಯಾವ ಯಾವ ಯೋಜನೆಗಳಿಗೆ ಖರ್ಚು ಮಾಡಲಾಗಿದೆ, ಖರ್ಚು ಮಾಡಲಾದ ಹಣ ಎಷ್ಟು ? (ಯೋಜನಾವಾರು ಮಾಹಿತಿ ನೀಡುವುದು)

## ಸಿದ್ಧ ಉಡುಪು ಕಾರ್ಖಾನೆಗಳಲ್ಲಿ ಮಹಿಳಾ ಕಾರ್ಮಿಕರಿಗೆ ಸೌಲಭ್ಯ

**ಶ್ರೀ ಟಿ.ಎ. ಶರವಣ (ವಿಧಾನಸಭೆಯಿಂದ ಚುನಾಯಿತರಾದವರು) :-**

೧೪೬೮ (೧೭೮೯) ಮಾನ್ಯ ಕಾರ್ಮಿಕ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದ ಬೆಂಗಳೂರಿನಲ್ಲಿರುವ ಸಿದ್ಧ ಉಡುಪು ಕಾರ್ಖಾನೆಗಳ ಸಂಖ್ಯೆ ಎಷ್ಟು ; (ವಿಳಾಸವಾರು ಮಾಹಿತಿ ನೀಡುವುದು)

(ಆ) ಸಿದ್ಧ ಉಡುಪು ಕಾರ್ಖಾನೆಗಳ ಕಾರ್ಮಿಕರಿಗೆ ನಿಯಮಾನುಸಾರ ವೇತನವನ್ನು ನಿಗದಿಗೊಳಿಸಲಾಗಿದೆಯೇ ;

(ಇ) ಹಾಗಿದ್ದಲ್ಲಿ, ನಿಗದಿಗೊಳಿಸಲಾದ ವೇತನ ಎಷ್ಟು ;

(ಈ) ಮಹಿಳಾ ಕಾರ್ಮಿಕರಿಗೆ ಸರಿಯಾದ ಸೌಲಭ್ಯಗಳಿಲ್ಲದೆ ಶೋಷಣೆಗೆ ಒಳಗಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಉ) ಹಾಗಿದ್ದಲ್ಲಿ, ಮಹಿಳಾ ಕಾರ್ಮಿಕರ ಸುರಕ್ಷತೆಗೆ ಸರ್ಕಾರವು ಕೈಗೊಂಡಿರುವ ಕ್ರಮಗಳೇನು ? (ಮಾಹಿತಿ ನೀಡುವುದು)

## ಹೈದರಾಬಾದ್-ಕರ್ನಾಟಕ ಪ್ರದೇಶದ ಅಭ್ಯರ್ಥಿಗಳಿಗೆ "ಅರ್ಹತಾ ಪ್ರಮಾಣ ಪತ್ರ"

**ಶ್ರೀ ಅಮರನಾಥ ಪಾಟೀಲ್ (ಪದವೀಧರರ ಕ್ಷೇತ್ರ) :-**

೧೪೬೯ (೧೭೫೫) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಸಂವಿಧಾನದ ಕಲಂ ೩೭೧(ಜೆ) ಅನ್ವಯ ಹೈದರಾಬಾದ್-ಕರ್ನಾಟಕ ಪ್ರದೇಶದ ಅಭ್ಯರ್ಥಿಗಳಿಗಾಗಿ ಉದ್ಯೋಗ ಮತ್ತು ಶಿಕ್ಷಣಕ್ಕಾಗಿ ಮೀಸಲಾತಿ ಪಡೆಯಲು "ಅರ್ಹತಾ ಪ್ರಮಾಣ ಪತ್ರ"

ಗಳನ್ನು ನೀಡುತ್ತಿರುವುದು ಸರ್ಕಾರದ ಗಮನಕ್ಕೆ ಇದೆಯೇ ; ಇದ್ದಲ್ಲಿ ಉದ್ಯೋಗ ಮತ್ತು ಶಿಕ್ಷಣಕ್ಕಾಗಿ ೨೦೧೩-೨೦೧೪ ಹಾಗೂ ೨೦೧೪-೨೦೧೫ನೇ ಸಾಲಿನಲ್ಲಿ ಸ್ವೀಕೃತವಾದ, ವಿವರಣೆಯಾದ ಮತ್ತು ತಿರಸ್ಕೃತವಾದ ಅರ್ಜಿಗಳ ಸಂಖ್ಯೆ ಎಷ್ಟು ; (ಜಿಲ್ಲಾವಾರು ಮಾಹಿತಿ ನೀಡುವುದು)

(ಆ) ವಿತರಣೆಯಾದ ಪ್ರಮಾಣ ಪತ್ರಗಳು ಅರ್ಜಿ ಸಲ್ಲಿಸಿದ ದಿನದಿಂದ ಎಷ್ಟು ದಿನಗಳೊಳಗಾಗಿ ನೀಡಲಾಗಿದೆ ; (ನಿಖರವಾದ ಮಾಹಿತಿ ನೀಡುವುದು)

(ಇ) ಸ್ವೀಕೃತಗೊಂಡ ಅರ್ಜಿಗಳು ತಿರಸ್ಕೃತಗೊಂಡಿರಲು ಕಾರಣವೇನು; (ಮಾಹಿತಿ ನೀಡುವುದು)

(ಈ) ಅರ್ಜಿದಾರರು ರೂ. ೨,೦೦೦/- ರಿಂದ ರೂ. ೫,೦೦೦/- ವರೆಗೆ ಏಜೆಂಟರ ಮುಖಾಂತರ ನೀಡಿದರೆ ತ್ವರಿತವಾಗಿ ಪ್ರಮಾಣಪತ್ರ ಪಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ ಈ ವ್ಯವಸ್ಥೆಯ ಸುಧಾರಣೆಗೆ ಸರ್ಕಾರ ಯಾವ ರೀತಿಯ ಕ್ರಮ ಕೈಗೊಂಡಿದೆ ;

(ಉ) ಅರ್ಹತಾ ಪ್ರಮಾಣ ಪತ್ರ ಪಡೆಯಲು ಅರ್ಜಿದಾರರು ಸಂಬಂಧಪಟ್ಟ ದಾಖಲೆಗಳನ್ನು ಸಲ್ಲಿಸಿದ್ದಾಗಿಯೂ ಕೂಡಾ ತಿಂಗಳು ಗಟ್ಟಲೆ ವಿಳಂಬ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಈ ಭಾಗದ ಪದವೀಧರರಿಗೆ ಹಾಗೂ ಜನ ಸಾಮಾನ್ಯರಿಗೆ ಯಾವುದೇ ತೊಂದರೆ ಅಥವಾ ಕಿರುಕುಳವಿರದೆ ಸದರಿ ಪ್ರಮಾಣ ಪತ್ರಗಳನ್ನು ಶೀಘ್ರವಾಗಿ ಒದಗಿಸುವ ವ್ಯವಸ್ಥೆಗೆ ಸರ್ಕಾರ ಮುಂದಾಗುವುದೇ ? (ವಿವರ ನೀಡುವುದು)

## ನೀರಾವರಿ ಯೋಜನೆಯಡಿಯಲ್ಲಿ ರೈತರಿಗೆ ೧೦೦ ರಷ್ಟು ಮೌಲ್ಯವನ್ನು ಪಾವತಿಸುವ ಬಗ್ಗೆ

**ಶ್ರೀ ಅಮರನಾಥ ಪಾಟೀಲ್ (ಪದವೀಧರರ ಕ್ಷೇತ್ರ) :-**

೧೪೭೦ (೧೭೫೮) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ನೀರಾವರಿ ಯೋಜನೆಗಳ ಅಡಿಯಲ್ಲಿ ಮುಳುಗಡೆಯಾಗಿ ಸ್ವಾಧೀನಪಡಿಸಿಕೊಂಡ ಕಟ್ಟಡಗಳ ಮೌಲ್ಯದಲ್ಲಿ ಶೇ. ೨೫% ರಷ್ಟು ಸವಕಳಿಯನ್ನು ಕಡಿತಗೊಳಿಸಿ, ಬಾಕಿ ಶೇ. ೭೫% ರಷ್ಟು ಮೊತ್ತ ಪಾವತಿಸಲಾಗಿದೆಯೇ ; (ವಿವರ ನೀಡುವುದು)

(ಆ) ಭೀಮಾ ಏತ ನೀರಾವರಿ ಯೋಜನೆಯ ಪುನರ್ವಸತಿ ಪುನರ್ ನಿರ್ಮಾಣದ ಅಡಿಯಲ್ಲಿ ಸ್ವಾಧೀನಪಡಿಸಿಕೊಂಡ ಕಟ್ಟಡಗಳ ಮೌಲ್ಯದಲ್ಲಿ ಶೇ. ೨೫% ರಷ್ಟು ಸವಕಳಿಯನ್ನು ಕಡಿತಗೊಳಿಸಿ, ಶೇಕಡ ೭೫% ರಷ್ಟು ಮೊತ್ತವನ್ನು ಪಾವತಿಸಲಾಗುತ್ತಿದೆಯೇ ; (ವಿವರ ನೀಡುವುದು)

(ಇ) ಯಾವುದೇ ಸವಕಳಿಗೆ (ಶೇ. ೨೫%) ರಷ್ಟು ಕಡಿತಗೊಳಿಸದೇ ಕಟ್ಟಡಗಳ ಮೌಲ್ಯದಲ್ಲಿ ಶೇ. ೧೦೦% ಕ್ಕೆ ೧೦೦ ರಷ್ಟು ಮೌಲ್ಯವನ್ನು ಪಾವತಿಸಲು ಸರಕಾರದ ಆದೇಶ ಇದ್ದಾಗಲೂ ಕೂಡ ಕಡಿತಗೊಳಿಸಲು ಕಾರಣವೇನು ; (ಮಾಹಿತಿ ನೀಡುವುದು)

(ಈ) ಮುಳುಗಡೆಯಾದ ರೈತರ ಕಟ್ಟಡಗಳಿಗೆ ನ್ಯಾಯಯುತವಾಗಿ ಸಿಗಬೇಕಾದಂತಹ ಶೇ. ೧೦೦% ರಷ್ಟು ಪರಿಹಾರ ಮೊತ್ತವನ್ನು ತ್ವರಿತಗತಿಯಲ್ಲಿ ಪಾವತಿಸಲು ಸರಕಾರ ಮುಂದಾಗುವುದೇ ? (ವಿವರ ನೀಡುವುದು)

# ಸುವರ್ಣ ವಸ್ತ್ರನೀತಿ ಯೋಜನೆಯಡಿಯಲ್ಲಿ ತರಬೇತಿ ಕೇಂದ್ರಗಳು

**ಶ್ರೀ ಅಮರನಾಥ ಪಾಟೀಲ್ (ಪದವೀಧರರ ಕ್ಷೇತ್ರ) :-**

೧೪೭೧ (೧೭೫೭) ಮಾನ್ಯ ಜವಳಿ ಹಾಗೂ ಬಂದರು ಒಳನಾಡು ಜಲಸಾರಿಗೆ ಸಚಿವರು ಈ ಕೆಳಕಂಡ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಸುವರ್ಣ ವಸ್ತ್ರ ನೀತಿ ಯೋಜನೆ ಅಡಿಯಲ್ಲಿ ೨೦೦೮ ರಿಂದ ೨೦೧೩ ರವರೆಗೆ ಎಷ್ಟು ಕೌಶಲ್ಯ ತರಬೇತಿ ಕೇಂದ್ರಗಳು ಪ್ರಾರಂಭವಾಗಿದೆ ; (ಜಿಲ್ಲಾವಾರು ಮಾಹಿತಿ ನೀಡುವುದು)

(ಆ) ಈ ಯೋಜನೆ ಅಡಿಯಲ್ಲಿ ತರಬೇತಿ ನೀಡಲು ವಹಿಸಿದ ಎನ್.ಜಿ.ಓ. ಗಳು ಎಷ್ಟು ಮತ್ತು ಯಾವುವು ; (ಜಿಲ್ಲಾವಾರು ಮಾಹಿತಿ ನೀಡುವುದು)

(ಇ) ಯಾವ ಮಾನದಂಡಗಳ ಆಧಾರದ ಮೇಲೆ ಎನ್.ಜಿ.ಓ. ಗಳಿಗೆ ತರಬೇತಿ ನೀಡಲು ಆದೇಶಿಸಲಾಗಿದೆ ; (ಮಾಹಿತಿ ನೀಡುವುದು)

(ಈ) ಈ ಯೋಜನೆಗೆ ಬಿಡುಗಡೆಯಾದ, ಖರ್ಚಾದ ಹಾಗೂ ಬಾಕಿ ಉಳಿದ ಅನುದಾನ ಎಷ್ಟು ; (ಜಿಲ್ಲಾವಾರು ಮಾಹಿತಿ ನೀಡುವುದು)

(ಉ) ಈ ಯೋಜನೆ ಅಡಿಯಲ್ಲಿ ತರಬೇತಿ ಪಡೆದವರ ಸಂಖ್ಯೆ ಎಷ್ಟು? (ಜಿಲ್ಲಾವಾರು ಮಾಹಿತಿ ನೀಡುವುದು)

## ಹಸಿರೀಕರಣ ಯೋಜನೆಯಡಿ ಬಿಡುಗಡೆಯಾಗಿರುವ ಅನುದಾನ

**ಶ್ರೀ ಅಮರನಾಥ ಪಾಟೀಲ್ (ಪದವೀಧರರ ಕ್ಷೇತ್ರ) :-**

೧೪೭೨ (೧೭೫೬) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಸರ್ಕಾರವು ನಗರ ಹಸಿರೀಕರಣ ಯೋಜನೆ ಅಡಿಯಲ್ಲಿ ಅರಣ್ಯ ಇಲಾಖೆಗೆ ಕಳೆದ ೨೦೧೨-೧೩, ೨೦೧೩-೨೦೧೪ ಮತ್ತು ೨೦೧೪-೨೦೧೫ನೇ ಸಾಲಿಗಾಗಿ ಬಿಡುಗಡೆ ಮಾಡಿದ ಅನುದಾನ ಎಷ್ಟು ; (ಹೈದರಾಬಾದ್-ಕರ್ನಾಟಕ ಜಿಲ್ಲೆ ಹಾಗೂ ಹರಪನಹಳ್ಳಿ ತಾಲ್ಲೂಕಿನ ಮಾಹಿತಿ ನೀಡುವುದು)

(ಆ) ಬಿಡುಗಡೆಗೊಳಿಸಿದ ಅನುದಾನದ ಪೈಕಿ ೨೦೧೨-೨೦೧೩, ೨೦೧೩-೨೦೧೪ ಮತ್ತು ೨೦೧೪-೨೦೧೫ರವರೆಗೆ ಖರ್ಚಾದ ಒಟ್ಟು ಹಣ ಎಷ್ಟು ; (ಹೈದರಾಬಾದ್-ಕರ್ನಾಟಕ ಜಿಲ್ಲೆ ಹಾಗೂ ಹರಪನಹಳ್ಳಿ ತಾಲ್ಲೂಕಿನ ಮಾಹಿತಿ ನೀಡುವುದು)

(ಇ) ನಗರ ಹಸಿರೀಕರಣ ಯೋಜನೆ ಅಡಿಯಲ್ಲಿ ನೆಟ್ಟ ಸಸಿಗಳು ಹಾಗೂ ಬೆಳೆದ ಸಸಿಗಳ ಸಂಖ್ಯೆ ಎಷ್ಟು ? (ವರ್ಷವಾರು ಹೈದರಾಬಾದ್-ಕರ್ನಾಟಕ ಜಿಲ್ಲೆ ಹಾಗೂ ಹರಪನಹಳ್ಳಿ ತಾಲ್ಲೂಕಿನ ಮಾಹಿತಿ ನೀಡುವುದು)

## ಸಕಾಲ ಸೇವೆ ಅಡಿಯಲ್ಲಿ ಅರ್ಜಿಗಳ ವಿಲೇವಾರಿ

**ಶ್ರೀಮತಿ ಮೋಟಮ್ಮ (ವಿಧಾನಸಭೆಯಿಂದ ಚುನಾಯಿತರಾದವರು) :-**

೧೪೭೩ (೧೭೬೨) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಸಕಾಲ ಸೇವೆಗಳ ಅಡಿಯಲ್ಲಿ ೨೦೧೪-೧೫ರ ಸಾಲಿನಲ್ಲಿ ಇಲಾಖಾವಾರು ಬಂದಿರುವ ಅರ್ಜಿಗಳ ಸಂಖ್ಯೆ ಎಷ್ಟು ;

(ಆ) ಕೆಲವು ಜಿಲ್ಲೆಗಳಲ್ಲಿ ಕಂದಾಯ ಇಲಾಖೆಯಲ್ಲಿ ಅರ್ಜಿ ಸ್ವೀಕರಿಸಿ, ಹಲವಾರು ತಿಂಗಳು ವಿಲೇವಾರಿಯಾಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಹಾಗಿದ್ದಲ್ಲಿ, ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಯಾವ ಕ್ರಮ ಕೈಗೊಳ್ಳಲಾಗಿದೆ ;

(ಈ) ಚಿಕ್ಕಮಗಳೂರು ಜಿಲ್ಲೆಯಲ್ಲಿ ಸಕಾಲ ಸೇವೆಗಳ ಅಡಿಯಲ್ಲಿ ಬಂದಿರುವ ಅರ್ಜಿಗಳ ಸಂಖ್ಯೆ ಎಷ್ಟು ; (ಇಲಾಖಾವಾರು, ತಾಲ್ಲೂಕುವಾರು ಮಾಹಿತಿ ನೀಡುವುದು)

(ಉ) ಈ ಅರ್ಜಿಗಳಲ್ಲಿ ವಿಲೇವಾರಿ ಆಗಿರುವ ಸಂಖ್ಯೆ ಎಷ್ಟು ?

## ಡಾ: ಕಸ್ತೂರಿ ರಂಗನ್ ವರದಿಯ ಬಗ್ಗೆ

**ಶ್ರೀಮತಿ ಮೋಟಮ್ಮ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೪೭೪ (೧೭೬೧) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಡಾ: ಕಸ್ತೂರಿ ರಂಗನ್ ವರದಿ ಜಾರಿಯ ಬಗ್ಗೆ ಸರ್ಕಾರದ ನಿಲುವೇನು ;

(ಆ) ೧೦ ಎಕರೆಗಿಂತ ಒಳಪಟ್ಟ ಭೂಮಾಲೀಕರನ್ನು ಗುಳೆಹೆಬ್ಬಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ :

(ಇ) ಹಾಗಿದ್ದಲ್ಲಿ, ಸರ್ಕಾರ ಇದನ್ನು ನಿಯಂತ್ರಿಸಲು ತೆಗೆದುಕೊಂಡ ಕ್ರಮಗಳೇನು ?

## ಸರ್ಕಾರಿ ಭೂಮಿ ಮಂಜೂರು ಮಾಡಿರುವ ಬಗ್ಗೆ

**ಶ್ರೀಮತಿ ಮೋಟಮ್ಮ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೪೭೫ (೧೭೬೦) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಚಿಕ್ಕಮಗಳೂರು ನಗರದಲ್ಲಿ ಕಳೆದ ೧೦ ವರ್ಷಗಳಿಂದ ಯಾವ ಯಾವ ಸಂಸ್ಥೆಗಳಿಗೆ ಎಷ್ಟೆಷ್ಟು ಸರ್ಕಾರಿ ಭೂಮಿಯನ್ನು ಮಂಜೂರು ಮಾಡಲಾಗಿದೆ ; (ಸಂಸ್ಥೆಯ ಹೆಸರು, ವಿಳಾಸ, ಮಂಜೂರು ಮಾಡಿದ ದಿನಾಂಕ ಒದಗಿಸುವುದು)

(ಆ) ಹಾಗಿದ್ದಲ್ಲಿ, ಯಾವ ಉದ್ದೇಶಗಳಿಗೆ ಮಂಜೂರು ಮಾಡಲಾಗಿದೆ; ಅಂತಹ ಉದ್ದೇಶಕ್ಕಾಗಿ ಸದರಿ ಭೂಮಿಯನ್ನು ಬಳಸಲಾಗುತ್ತಿದೆಯೇ ; (ವಿವರ ನೀಡುವುದು)

(ಇ) ಇಲ್ಲದಿದ್ದಲ್ಲಿ, ಅಂತಹ ಸಂಸ್ಥೆಗಳ ಮೇಲೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ ?

## ವಿಜಯಾಪುರ, ಬಾಗಲಕೋಟೆ ಮತ್ತು ಬೆಳಗಾವಿ ಜಿಲ್ಲೆಗಳ ಶಾಲೆಗಳು E.S.I. ಅಡಿ ಕುರಿತು

**ಶ್ರೀ ಅರುಣ ಶಹಾಪುರ (ಶಿಕ್ಷಕರ ಕ್ಷೇತ್ರ) :–**

೧೪೭೬ (೧೭೬೩) ಮಾನ್ಯ ಕಾರ್ಮಿಕ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ವಿಜಯಾಪುರ, ಬಾಗಲಕೋಟೆ ಮತ್ತು ಬೆಳಗಾವಿ ಜಿಲ್ಲೆಗಳ ಯಾವ ಯಾವ ಶಾಲಾ ಕಾಲೇಜುಗಳು E.S.I. ಅಡಿ ನೊಂದಾವಣೆಗೊಂಡು ಸೌಲಭ್ಯ ಪಡೆಯುತ್ತಿವೆ ; (ಹೆಸರು, ಜಿಲ್ಲಾವಾರು ಶಾಲಾ ಕಾಲೇಜುವಾರು ವಿಳಾಸದ ವಿವರ ನೀಡುವುದು)

(ಆ) ಅನುದಾನಿತ, ಅನುದಾನ ರಹಿತ ಶಿಕ್ಷಣ ಸಂಸ್ಥೆಗಳನ್ನು E.S.I. ಸೌಲಭ್ಯಕ್ಕೆ ಒಳಪಡಿಸಿ ಶಿಕ್ಷಕರು ಪ್ರಯೋಜನ ಪಡೆಯುವಂತಾಗಲು ಸರ್ಕಾರ ತೆಗೆದುಕೊಳ್ಳುತ್ತಿರುವ ಕ್ರಮ ಏನು ;

(ಇ) ಕಾರ್ಮಿಕ ಇಲಾಖೆಯ ಅಧಿಸೂಚನೆ ಸಂಖ್ಯೆ (LD 32 LSI-2010) ದಿನಾಂಕ : ೧೬-೦೩-೨೦೧೧ The Employee State Insurance Act 1948 ಇವುಗಳಲ್ಲಿ ಅನುದಾನಿತ/ ಅನುದಾನ ರಹಿತ ಶಿಕ್ಷಣ ಸಂಸ್ಥೆಗಳ ಸಿಬ್ಬಂದಿಗಳ ವೈದ್ಯಕೀಯ ವೆಚ್ಚ ಮರು ಪಾವತಿ ಕುರಿತು ಇರುವ ನಿಯಮಗಳೇನು ?

## ವಿಜಯಾಪುರ, ಬಾಗಲಕೋಟೆ ಮತ್ತು ಬೆಳಗಾವಿ ಜಿಲ್ಲೆಗಳ ಕೆರೆಗೆ ನೀರು ತುಂಬುವ ಯೋಜನೆ ಕುರಿತು

**ಶ್ರೀ ಅರುಣ ಶಹಾಪುರ (ಶಿಕ್ಷಕರ ಕ್ಷೇತ್ರ) :-**

೧೪೭೭ (೧೭೬೬) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಕಳೆದ ೦೨ ವರ್ಷಗಳಲ್ಲಿ ವಿಜಯಾಪುರ,ಬಾಗಲಕೋಟೆ ಮತ್ತು ಬೆಳಗಾವಿ ಜಿಲ್ಲೆಗಳ "ಕೆರೆಗೆ ನೀರು ತುಂಬುವ ಯೋಜನೆ" ಯಡಿಯಲ್ಲಿ ಯಾವ ಯಾವ ಕೆರೆಗಳಿಗೆ ಹಣವನ್ನು ಒದಗಿಸಲಾಗಿದೆ ; ಒದಗಿಸಲಾಗಿರುವ ಮೊತ್ತ ಎಷ್ಟು ;

(ಆ) ಆ ಪೈಕಿ ವಿನಿಯೋಗಿಸಿದ ಹಣ ಎಷ್ಟು;

(ಇ) ಕಾಮಗಾರಿಗಳ ಪ್ರಗತಿ ಯಾವ ಹಂತದಲ್ಲಿದೆ ? (ಕಾಮಗಾರಿವಾರು ಸಂಪೂರ್ಣ ಮಾಹಿತಿ ನೀಡುವುದು)

## ಅಕಾಲಿಕ ಮಳೆಯಿಂದ ಬೆಳೆ ಹಾನಿ

**ಶ್ರೀ ಅರುಣ ಶಹಾಪುರ (ಶಿಕ್ಷಕರ ಕ್ಷೇತ್ರ) :-**

೧೪೭೮ (೧೭೬೪) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ೨೦೧೫ರ ಫೆಬ್ರವರಿ ಮತ್ತು ಮಾರ್ಚ್ ತಿಂಗಳಿನಲ್ಲಿ, ಬಂದಿರುವ ಅಕಾಲಿಕ ಮಳೆಯಿಂದ ವಿಜಯಾಪುರ, ಬಾಗಲಕೋಟೆ, ಬೆಳಗಾವಿ ಜಿಲ್ಲೆಗಳಲ್ಲಿ ಬೆಳೆ ಹಾನಿಯಾಗಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಬಂದಿದ್ದರೆ, ಯಾವ ಯಾವ ಬೆಳೆ ಎಷ್ಟು ಪ್ರಮಾಣದಲ್ಲಿ ಹಾನಿಯಾಗಿದೆ ; (ವಿವರ ನೀಡುವುದು)

(ಇ) ಬೆಳೆ ಹಾನಿಗೆ ಪರಿಹಾರ ನೀಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ?

## ಸೂರ್ಯ ಜ್ಯೋತಿ ಪರಂಜ್ಯೋತಿ ಯೋಜನೆಯ ಕುರಿತು

**ಶ್ರೀ ಅರುಣ ಶಹಾಪುರ (ಶಿಕ್ಷಕರ ಕ್ಷೇತ್ರ) :-**

೧೪೭೯ (೧೭೬೫) ಮಾನ್ಯ ಸಣ್ಣ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಕಳೆದ ಬಜೆಟ್‌ನಲ್ಲಿ ಘೋಷಣೆ ಮಾಡಿರುವಂತೆ "ಸೂರ್ಯ ಜ್ಯೋತಿ ರೈತರ ಬಾಳಿನ ಪರಂಜ್ಯೋತಿ" ಯೋಜನೆಯಡಿ ವಿಜಯಾಪುರ,ಬಾಗಲಕೋಟೆ ಮತ್ತು ಬೆಳಗಾವಿ ಜಿಲ್ಲೆಗಳಲ್ಲಿ ಎಷ್ಟು ರೈತರನ್ನು ಫಲಾನುಭವಿಯನ್ನಾಗಿ ಆಯ್ಕೆ ಮಾಡಲಾಗಿದೆ ; (ಹೆಸರು ವಿಳಾಸ ಸಮೇತ ವಿವರ ನೀಡುವುದು)

(ಆ) ರೈತರ ಆಯ್ಕೆಗೆ ಅನುಸರಿಸಲಾದ ಮಾನದಂಡಗಳೇನು ;

(ಇ) ಪಂಪ್ ಅಳವಡಿಕೆಯ ಕಾರ್ಯ ಯಾವ ಹಂತದಲ್ಲಿದೆ ;

(ಈ) ಯಾವ ಯಾವ ಕಂಪನಿಗಳಿಗೆ ಈ ಕಾರ್ಯ ವಹಿಸಿಕೊಡಲಾಗಿದೆ ? (ವಿವರ ನೀಡುವುದು)

## ರಾಜ್ಯದಲ್ಲಿರುವ ಐ.ಟಿ.ಐ.ಗಳ ಕಾರ್ಯವೈಖರಿ ಕುರಿತು

**ಶ್ರೀ ಗಣೇಶ್ ಕಾರ್ಣಿಕ್ (ಶಿಕ್ಷಕರ ಕ್ಷೇತ್ರ) :-**

೧೪೮೦ (೧೭೬೯) ಮಾನ್ಯ ಕಾರ್ಮಿಕ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದಲ್ಲಿರುವ ಒಟ್ಟು ಸರ್ಕಾರಿ ಸ್ವಾಮ್ಯದ ಹಾಗೂ ಖಾಸಗಿ ಒಡೆತನದಲ್ಲಿರುವ ಐ.ಟಿ.ಐ.ಗಳ ಸಂಖ್ಯೆ ಎಷ್ಟು ; (ಜಿಲ್ಲಾವಾರು ಮಾಹಿತಿ ನೀಡುವುದು)

(ಆ) ಈ ಐ.ಟಿ.ಐ ಸಂಸ್ಥೆಗಳಲ್ಲಿ ತರಬೇತಿ ಕೊಡಲಾಗುವ ವಿಷಯಗಳ ಬಗ್ಗೆ ಪಟ್ಟಿಯನ್ನು ಒದಗಿಸುವುದು ;

(ಇ) ರಾಜ್ಯದಲ್ಲಿ ೨೦೧೩-೧೪ ಮತ್ತು ೨೦೧೪-೧೫ರಲ್ಲಿ ಎಷ್ಟು ಪ್ರವೇಶಾತಿಗಳು ಖಾಲಿ ಉಳಿದಿರುತ್ತವೆ ;

(ಈ) ರಾಜ್ಯದ ಸರ್ಕಾರಿ ಮತ್ತು ಖಾಸಗಿ ಐ.ಟಿ.ಐ. ಸಂಸ್ಥೆಗಳಲ್ಲಿ ಪ್ರತಿವರ್ಷ ಕ್ಯಾಂಪಸ್ ಸೆಲೆಕ್ಷನ್‌ನಲ್ಲಿ ಆಯ್ಕೆಯಾಗುವ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು ?

## ಜಿ.ಟಿ.ಟಿ.ಸಿ ಸಂಸ್ಥೆಯ ನೌಕರರ ನಿವೃತ್ತಿ ವಯಸ್ಸು

**ಶ್ರೀ ಗಣೇಶ್ ಕಾರ್ಣಿಕ್ (ಶಿಕ್ಷಕರ ಕ್ಷೇತ್ರ) :–**

೧೪೮೧ (೧೭೬೮) ಮಾನ್ಯ ಕಾರ್ಮಿಕ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಸರ್ಕಾರಿ ಸ್ವಾಮ್ಯದ ಜಿ.ಟಿ.ಟಿ.ಸಿ ಸಂಸ್ಥೆಯ ನೌಕರರ ನಿವೃತ್ತಿ ವಯಸ್ಸು ೫೮ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಈ ಸಂಸ್ಥೆಯ ನೌಕರರು ಕೂಡಾ ಸರ್ಕಾರಿ ನೌಕರರಾಗಿದ್ದು, ಸರ್ಕಾರಿ ನೌಕರರಿಗಿರುವ ನಿವೃತ್ತಿ ವಯಸ್ಸು ೬೦ ಇವರಿಗೆ ಅನ್ವಯವಾಗದಿರಲು ಕಾರಣವೇನು ;

(ಇ) ಜಿ.ಟಿ.ಟಿ.ಸಿ ನೌಕರರ ನಿವೃತ್ತಿ ವಯೋಮಿತಿ ಏರಿಕೆಗೆ ಸಂಬಂಧಿಸಿದಂತೆ ಕಾನೂನು ಇಲಾಖೆ ಸಹಮತ ವ್ಯಕ್ತಪಡಿಸಿದ್ದರೂ ಈವರೆಗೆ ಯಾವುದೇ ನಿರ್ಣಯ ಕೈಗೊಳ್ಳದಿರಲು ಕಾರಣಗಳೇನು ;

(ಈ) ಈ ಪ್ರಕ್ರಿಯೆ ಅವಧಿಯಲ್ಲಿ ನಿವೃತ್ತಿ ಹೊಂದಿರುವ ಹಾಗೂ ಹೊಂದಲಿರುವ ನೌಕರರ ಬಗ್ಗೆ ಸರ್ಕಾರದ ನಿಲುವೇನು ?

## ಕರಾವಳಿ ಭಾಗದಲ್ಲಿ ಕಡಲ ಕೊರೆತದಿಂದ ಆಗಿರುವ ಹಾನಿ

**ಶ್ರೀ ಗಣೇಶ್ ಕಾರ್ಣಿಕ್ (ಶಿಕ್ಷಕರ ಕ್ಷೇತ್ರ) :–**

೧೪೮೨ (೧೭೭೦) ಮಾನ್ಯ ಜವಳಿ ಹಾಗೂ ಬಂದರು ಮತ್ತು ಒಳನಾಡು ಜಲ ಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಳೆದ ಎರಡು ವರ್ಷಗಳಿಂದ ಕರಾವಳಿ ಭಾಗದಲ್ಲಿ ಕಡಲ ಕೊರೆತದಿಂದ ಅಪಾರ ಹಾನಿಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಕಡಲ ಕೊರೆತದಿಂದ ಆಗಿರುವ ಹಾನಿಗೆ ಕಳೆದ ಎರಡು ವರ್ಷಗಳಿಂದ ಸರ್ಕಾರ ನೀಡಿರುವ ಪರಿಹಾರದ ಮೊತ್ತವೆಷ್ಟು ;

(ಇ) ಈ ಕಡಲ ಕೊರೆತದ ಶಾಶ್ವತ ಪರಿಹಾರಕ್ಕೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು ?

## ರಾಜ್ಯದ ಸಬ್‌ರಿಜಿಸ್ಟ್ರಾರ್ ಕಛೇರಿಗಳಲ್ಲಿನ ವ್ಯವಸ್ಥೆ

**ಶ್ರೀ ಗಣೇಶ್ ಕಾರ್ಣಿಕ್ (ಶಿಕ್ಷಕರ ಕ್ಷೇತ್ರ)** :–

೧೪೮೩ (೧೭೭೧) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದ ಸಬ್‌ರಿಜಿಸ್ಟ್ರಾರ್ ಕಛೇರಿಗಳಲ್ಲಿ ದಲ್ಲಾಳಿಗಳ ದರ್ಬಾರನ್ನು ಕೊನೆಗೊಳಿಸುವ ನಿಟ್ಟಿನಲ್ಲಿ ಸರ್ಕಾರ ಆನ್‌ಲೈನ್ ರಿಜಿಸ್ಟ್ರೇಷನ್ ವ್ಯವಸ್ಥೆಯನ್ನು ಜಾರಿಗೆ ತಂದಿರುವುದಾಗಿ ಹೇಳಿಕೆ ನೀಡಿದ್ದರೂ ಈವರೆಗೂ ಜಾರಿಗೆ ತರದಿರಲು ಕಾರಣಗಳೇನು ;

(ಆ) ಬೆಂಗಳೂರಿನಂತಹ ಪಟ್ಟಣದಲ್ಲಿ ಪ್ರತಿನಿತ್ಯ ಸಾವಿರಾರು ಸಾರ್ವಜನಿಕರು ಅಸ್ತಿ ನೋಂದಾಣಿಗಾಗಿ ವಿಶೇಷವಾಗಿ ನೌಕರರು ಪರದಾಟ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಎಲ್ಲಾ ದಾಖಲೆಗಳನ್ನು ಸಲ್ಲಿಸಿದರೂ ಸಬ್‌ರಿಜಿಸ್ಟ್ರಾರ್ ಕಛೇರಿಗಳಲ್ಲಿ ದುರುದ್ದೇಶದಿಂದ ಸಾರ್ವಜನಿಕರಿಗೆ ಕಿರುಕುಳ ಕೊಡುತ್ತಿರುವುದನ್ನು ನಿವಾರಿಸಲು ಸರ್ಕಾರ ಕೈಗೊಂಡಿರುವ ಕ್ರಮವೇನು ?

## ಸದ್ದಿಲ್ಲದೆ ಸಾಗಿದೆ ಸ್ಥಳಾಂತರ

**ಶ್ರೀ ಘೊಟ್ನೇಕರ ಶ್ರೀಕಾಂತ ಲಕ್ಷ್ಮಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-**

೧೪೮೪ (೧೭೭೩) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ದಾಂಡೇಲಿ ಅಣಶಿ ಹುಲಿ ಸಂರಕ್ಷಿತ ಪ್ರದೇಶದಲ್ಲಿ ೬೪ ಕುಟುಂಬಗಳು ಸದ್ದಿಲ್ಲದೆ ಸ್ಥಳಾಂತರ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಈ ಯೋಜನೆಯ ಅನುಷ್ಠಾನ ಮೂಲಸೌಕರ್ಯಗಳ ಹಾಗೂ ಸ್ಥಳಾಂತರದ ಅವಕಾಶ ಮುಂತಾದವುಗಳ ಸಮರ್ಪಕ ಮಾಹಿತಿಯನ್ನು ಇಲಾಖೆ ಸ್ಥಳೀಯರಿಗೆ ತಿಳಿಸುವ ಕಾರ್ಯ ಮಾಡುತ್ತಿಲ್ಲವೆಂಬ ಆರೋಪ ಕೇಳಿ ಬರುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; (ವಿವರ ನೀಡುವುದು)

(ಆ) ಅರಣ್ಯದ ಸಂಪತ್ತು ಹಾಗೂ ವನ್ಯ ಜೀವಿ ಸಂರಕ್ಷಣೆಯಲ್ಲಿ ಸ್ಥಳೀಯ ಅರಣ್ಯ ವಾಸಿಗಳ ವಿಶೇಷ ಕೊಡುಗೆ ಇರುತ್ತದೆ. ಸ್ವ ಇಚ್ಛೆಯಿಂದ ಸ್ಥಳಾಂತರ ಬಯಸುವ ನಿವಾಸಿಗಳಿಗೆ ಸರಿಯಾದ ಮಾಹಿತಿ ನೀಡಬೇಕು ಮತ್ತು ಆಮಿಷಗಳ ಮೂಲಕ ಒಕ್ಕಲೆಬ್ಬಿಸುವ ಕಾರ್ಯ ಮಾಡಬಾರದೆಂಬ ಬಗ್ಗೆ ಇಲಾಖೆಗೆ ಸರ್ಕಾರ ಸೂಕ್ತ ನಿರ್ದೇಶನ ನೀಡುವುದೇ ? (ವಿವರ ನೀಡುವುದು)

## ಕಸ್ತೂರಿರಂಗನ್ ವರದಿ ವ್ಯಾಪ್ತಿಗೆ ಬರುವ ಗ್ರಾಮಗಳ ಬಗ್ಗೆ

**ಶ್ರೀ ಟಿ. ಜಾನ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೪೮೫ (೧೭೭೫) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕೊಡಗು ಜಿಲ್ಲೆಯಲ್ಲಿ ಎಷ್ಟು ಗ್ರಾಮಗಳು ಕಸ್ತೂರಿರಂಗನ್ ವರದಿ ವ್ಯಾಪ್ತಿಗೆ ಒಳಪಡುತ್ತವೆ ; (ಗ್ರಾಮಗಳ ಹೆಸರುಗಳನ್ನು ನೀಡುವುದು)

(ಆ) ಜಿಲ್ಲೆಯ ಜನತೆಯು ಸದರಿ ವರದಿಯು ಜಾರಿಗೊಳ್ಳುವುದಕ್ಕೆ ವಿರುದ್ಧವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಹಾಗಿದ್ದಲ್ಲಿ, ಸದರಿ ವರದಿ ಜಾರಿಯಾಗದಿರುವುದಕ್ಕೆ ಸರ್ಕಾರ ತೆಗೆದುಕೊಂಡ ಕ್ರಮಗಳೇನು ? (ಮಾಹಿತಿ ನೀಡುವುದು)

## ಉದ್ಯೋಗ ಮತ್ತು ತರಬೇತಿ ಕೇಂದ್ರಗಳಿಗೆ ಆಗುತ್ತಿರುವ ನಷ್ಟದ ಬಗ್ಗೆ

**ಶ್ರೀ ದಯಾನಂದ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೪೮೬ (೧೭೭೮) ಮಾನ್ಯ ಕಾರ್ಮಿಕ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಕಳೆದ ೦೩ ವರ್ಷಗಳಿಂದ ಉದ್ಯೋಗ ಮತ್ತು ತರಬೇತಿ ಕೇಂದ್ರಗಳಲ್ಲಿ ನೋಂದಣಿ ಮಾಡಿಸಿರುವ ಅಭ್ಯರ್ಥಿಗಳ ಸಂಖ್ಯೆ ಎಷ್ಟು ;

(ಆ) ಕಳೆದ ೦೩ ವರ್ಷಗಳಲ್ಲಿ ಈ ರೀತಿ ನೋಂದಣಿ ಮಾಡಿಸಿರುವ ಅಭ್ಯರ್ಥಿಗಳ ಪೈಕಿ ಎಷ್ಟು ಜನರಿಗೆ ಉದ್ಯೋಗವನ್ನು ಕಲ್ಪಿಸಲಾಗಿದೆ ;

(ಇ) ಇತ್ತೀಚಿನ ದಿನಗಳಲ್ಲಿ ಸರ್ಕಾರದ ಎಲ್ಲಾ ಇಲಾಖೆಗಳು ನೇರ ನೇಮಕಾತಿಯ ಮೂಲಕ ಅಭ್ಯರ್ಥಿಗಳನ್ನು ಆಯ್ಕೆ ಮಾಡುತ್ತಿರುವುದರಿಂದ ಉದ್ಯೋಗ ಮತ್ತು ತರಬೇತಿ ಕೇಂದ್ರಗಳು ನಿರ್ಲಕ್ಷಕ್ಕೆ ಒಳಗಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಈ) ಉದ್ಯೋಗ ಮತ್ತು ತರಬೇತಿ ಕೇಂದ್ರಗಳಲ್ಲಿ ನೋಂದಣಿ ಮಾಡಿಸಿ, ವಯೋಮಿತಿ ಮೀರಿದ್ದು ಅವರಿಗೆ ಉದ್ಯೋಗ ದೊರಕದೇ ಇರುವುದು ಸರ್ಕಾರದ ಗಮನಕ್ಕೆ ಬಂದೆಯೇ ;

(ಉ) ಇನ್ನು ಮುಂದೆ ಸರ್ಕಾರದ ಉದ್ಯೋಗಗಳಿಗೆ ಉದ್ಯೋಗ ಮತ್ತು ತರಬೇತಿ ಕೇಂದ್ರಗಳ ಮೂಲಕವೇ ಅಭ್ಯರ್ಥಿಗಳನ್ನು ಆಯ್ಕೆ ಮಾಡಬೇಕೆಂಬ ಬಗ್ಗೆ ಸರ್ಕಾರದ ನಿಲುವೇನು ?

## ರಾಜ್ಯದಲ್ಲಿ ಪ್ಲಾಸ್ಟಿಕ್ ಬಳಕೆಯ ನಿಷೇಧ

**ಶ್ರೀ ದಯಾನಂದ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೪೮೭ (೧೭೭೭) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಯಾವ ಯಾವ ರೀತಿಯ ಪ್ಲಾಸ್ಟಿಕ್ ಬಳಕೆಯನ್ನು ನಿಷೇಧಿಸಲಾಗಿದೆ ;

(ಆ) ರಾಜ್ಯದ ಜನತೆಗೆ ಹಾಗೂ ಜಾನುವಾರು, ಪ್ರಾಣಿ, ಪಕ್ಷಿಗಳಿಗೆ ಪ್ಲಾಸ್ಟಿಕ್ ಬಳಕೆಯಿಂದ ಆಗುತ್ತಿರುವ ತೊಂದರೆಗಳು ಸರ್ಕಾರದ ಗಮನದಲ್ಲಿದೆಯೇ ;

(ಇ) ಹೋಟೆಲ್‌ಗಳಲ್ಲಿ ಯೋಗ್ಯವಲ್ಲದ ಪ್ಲಾಸ್ಟಿಕ್ ಕವರ್‌ಗಳಲ್ಲಿ ಬಿಸಿ ಬಿಸಿ ತಿಂಡಿ ಪದಾರ್ಥಗಳನ್ನು ಪ್ಯಾಕ್ ಮಾಡಿ ಕೊಡುತ್ತಿರುವುದು ಸರ್ಕಾರದ ಗಮನದಲ್ಲಿದೆಯೇ ;

(ಈ) ಈ ರೀತಿಯ ಉದ್ಯಮಗಳು ಹಾಗೂ ಇನ್ನಿತರೆ ದಿನಸಿ ಅಂಗಡಿಗಳ ವಿರುದ್ಧ ಸರ್ಕಾರದ ಕ್ರಮಗಳೇನು ;

(ಉ) ಪರಿಸರಕ್ಕೆ ಮಾರಕವಾಗಿರುವ ಪ್ಲಾಸ್ಟಿಕ್ ಬಳಕೆಯ ಬಗ್ಗೆ ಸಾರ್ವಜನಿಕರಲ್ಲಿ ತಿಳುವಳಿಕೆ ಮೂಡಿಸಲು ಸರ್ಕಾರವು ಹಮ್ಮಿಕೊಂಡಿರುವ ಕ್ರಮಗಳೇನು ;

(ಊ) " ಪ್ಲಾಸ್ಟಿಕ್ ಬಳಕೆಯ ನಿಷೇಧ " ನಿಯಮವನ್ನು ಕಟ್ಟುನಿಟ್ಟಾಗಿ ಜಾರಿಗೆ ತರುವ ಬಗ್ಗೆ ಸರ್ಕಾರದ ನಿಲುವೇನು ?

## ಕಂದಾಯ ಇಲಾಖೆಯಲ್ಲಿನ ಭ್ರಷ್ಟಾಚಾರದ ಬಗ್ಗೆ

**ಶ್ರೀಮತಿ ವಿಮಲಾಗೌಡ (ವಿಧಾನಸಭೆಯಿಂದ ಚುನಾಯಿತರಾದವರು) :-**

೧೪೮೮ (೧೭೭೯) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದಲ್ಲಿನ ತಹಶೀಲ್ದಾರ್ ಕಛೇರಿ ಹಾಗೂ ಉಪನೋಂದಣಾಧಿಕಾರಿ ಕಛೇರಿಗಳಲ್ಲಿ ವ್ಯಾಪಕ ಭ್ರಷ್ಟಾಚಾರ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಹಾಗಿದ್ದಲ್ಲಿ, ಇದುವರೆವಿಗೂ ಯಾವ ಯಾವ ಜಿಲ್ಲಾ/ತಾಲ್ಲೂಕುಗಳಲ್ಲಿ ಇಂತಹ ಪ್ರಕರಣಗಳು ಬೆಳಕಿಗೆ ಬಂದಿವೆ; ಭ್ರಷ್ಟಾಚಾರವೆಸಗಿರುವ ಎಷ್ಟು ಜನರ ವಿರುದ್ಧ ಕ್ರಮ ಕೈಗೊಂಡಿದೆ; ಸದರಿ ಅಧಿಕಾರಿ/ ನೌಕರರು ಯಾರು ; (ವಿವರ ನೀಡುವುದು)

(ಇ) ತಹಶೀಲ್ದಾರ್ ಮತ್ತು ಸಬ್ ರಿಜಿಸ್ಟ್ರಾರ್ ಕಛೇರಿಗಳಲ್ಲಿ ಸಿ.ಸಿ. ಟಿವಿ ಅಳವಡಿಸುವ ಬಗ್ಗೆ ಸರ್ಕಾರ ಆದೇಶ ಹೊರಡಿಸಲಾಗಿದೆಯೇ ;

(ಈ) ಹಾಗಿದ್ದರೆ, ಇದುವರೆವಿಗೂ ಎಷ್ಟು ಕಛೇರಿಗಳಲ್ಲಿ ಸಿ.ಸಿ. ಟಿವಿಯನ್ನು ಅಳವಡಿಸಲಾಗಿದೆ ? (ವಿವರ ನೀಡುವುದು)

## ಸಣ್ಣ ನೀರಾವರಿ ಯೋಜನೆಗಳ ಅನುಷ್ಠಾನದ ಬಗ್ಗೆ

**ಶ್ರೀಮತಿ ವಿಮಲಾಗೌಡ (ವಿಧಾನಸಭೆಯಿಂದ ಚುನಾಯಿತರಾದವರು)** :–

೧೪೪೯ (೧೭೮೦) ಮಾನ್ಯ ಸಣ್ಣ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಳೆದ ೨ ವರ್ಷಗಳಿಂದ ಸಣ್ಣ ನೀರಾವರಿ ಇಲಾಖೆಯಿಂದ ಅನುಷ್ಠಾನ ಮಾಡಿದ ಯೋಜನೆಗಳಾವುವು; ಅವುಗಳಿಗೆ ವೆಚ್ಚ ಮಾಡಿರುವ ಹಣ ಎಷ್ಟು ; (ಯೋಜನೆವಾರು, ಜಿಲ್ಲಾವಾರು ಮಾಹಿತಿ ನೀಡುವುದು) ;

(ಆ) ೨೦೧೨ರಿಂದ ಇಲ್ಲಿಯವರೆಗೆ ಇಲಾಖೆಯಲ್ಲಿ ಕಳಪೆ ಕಾಮಗಾರಿ ಹಾಗೂ ಅವ್ಯವಹಾರ ಎಸಗಿರುವ ಎಷ್ಟು ಪ್ರಕರಣಗಳು ಪತ್ತೆಯಾಗಿದೆ; ಪ್ರತಿಯೊಂದು ಪ್ರಕರಣಗಳ ತನಿಖೆ ಯಾವ ಹಂತದಲ್ಲಿದೆ ; (ಪ್ರಕರಣವಾರು ವಿವರ ಒದಗಿಸುವುದು)

(ಇ) ಇಲಾಖೆಯ ವ್ಯಾಪ್ತಿಗೆ ಬರುವ ಎಷ್ಟು ಕೆರೆಗಳ ಒತ್ತುವರಿಯನ್ನು ತೆರವುಗೊಳಿಸಲು ಸರ್ಕಾರ ಕ್ರಮ ಕೈಗೊಳ್ಳಲಾಗಿದೆ ? (ಜಿಲ್ಲಾವಾರು ಮಾಹಿತಿ ನೀಡುವುದು)

## ಹೊಸ ತಾಲ್ಲೂಕುಗಳ ರಚನೆ ಬಗ್ಗೆ

**ಶ್ರೀಮತಿ ವಿಮಲಾಗೌಡ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೪೯೦ (೧೭೮೨) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಪ್ರಸಕ್ತ ಸಾಲಿನಲ್ಲಿ ರಾಜ್ಯದಲ್ಲಿ ಹೊಸ ತಾಲ್ಲೂಕುಗಳನ್ನು ರಚಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ ;

(ಆ) ಹಾಗಿದ್ದರೆ, ಎಷ್ಟು ಕಾಲಾವಧಿಯಲ್ಲಿ ಈ ಹೊಸ ತಾಲ್ಲೂಕುಗಳ ರಚನೆ ಪೂರ್ಣಗೊಳ್ಳುತ್ತದೆ ;

(ಇ) ಸರ್ಕಾರ ಹೊಸ ತಾಲ್ಲೂಕುಗಳ ರಚನೆಯನ್ನು ರೂಪಿಸಿರುವ ಮಾನದಂಡಗಳೇನು ?

## ಕ್ರೀಡಾಂಗಣಗಳ ನಿರ್ಮಾಣ

**ಶ್ರೀಮತಿ ವಿಮಲಾಗೌಡ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೪೯೧ (೧೭೮೧) ಮಾನ್ಯ ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ ಮೀನುಗಾರಿಕೆ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಳೆದ ಮೂರು ವರ್ಷಗಳಿಂದ ರಾಜ್ಯದ ಯಾವ ಯಾವ ಜಿಲ್ಲೆಗಳಲ್ಲಿ ಕ್ರೀಡಾಂಗಣ ಹಾಗೂ ಒಳ ಕ್ರೀಡಾಂಗಣಗಳನ್ನು ನಿರ್ಮಿಸಲಾಗಿದೆ ;

(ಆ) ಸದರಿ ಕ್ರೀಡಾಂಗಣ ನಿರ್ಮಾಣಕ್ಕಾಗಿ ವೆಚ್ಚ ಮಾಡುತ್ತಿರುವ ಮೊತ್ತವೆಷ್ಟು ;

(ಇ) ಇವುಗಳ ಪೈಕಿ ಎಷ್ಟು ಕ್ರೀಡಾಂಗಣಗಳು ಪೂರ್ಣಗೊಂಡಿವೆ; ಅವುಗಳು ಯಾವುವು; ಪೂರ್ಣಗೊಂಡಿರದ ಕ್ರೀಡಾಂಗಣವನ್ನು ಯಾವ ಕಾಲಮಿತಿಯೊಳಗೆ ಪೂರ್ಣಗೊಳಿಸಲು ಸರ್ಕಾರ ಕ್ರಮ ಕೈಗೊಂಡಿದೆ ?

## ಗದಗ ಜಿಲ್ಲೆಯ ಕಪ್ಪತ್ತಗುಡ್ಡದಲ್ಲಿ ವನ್ಯಜೀವಿಧಾಮ ಸ್ಥಾಪನೆ

**ಶ್ರೀ ಎಸ್. ವ್ಹಿ. ಸಂಕನೂರ (ಪದವೀಧರರ ಕ್ಷೇತ್ರ) :-**

೧೪೯೨ (೧೭೮೬) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಗದಗ ಜಿಲ್ಲೆಯ ಕಪ್ಪತ್ತಗುಡ್ಡದಲ್ಲಿ ವನ್ಯಜೀವಿಧಾಮ ಸ್ಥಾಪನೆ ಮಾಡುವ ಯೋಜನೆ ಯಾವ ಹಂತದಲ್ಲಿದೆ ;

(ಆ) ಈ ವಿಷಯಕ್ಕೆ ಸಂಬಂಧಪಟ್ಟಂತೆ ಅಪರ ಮುಖ್ಯ ಕಾರ್ಯದರ್ಶಿ, ಅ.ಪ.ಜೀ. ಇಲಾಖೆ ಮತ್ತು ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ವನ್ಯಜೀವಿ) ಅವರುಗಳು ಜಂಟಿಯಾಗಿ ಸ್ಥಳ ಪರಿಶೀಲನಾ ಮಾಡಿದ್ದಾರೆಯೇ ;

(ಇ) ಈ ಕುರಿತು ಇತ್ತೀಚೆಗೆ ಜರುಗಿರುವ ರಾಜ್ಯ ವನ್ಯಜೀವಿ ಮಂಡಳಿಯ ಸಭೆಯಲ್ಲಿ ಏನು ನಿರ್ಣಯ ತೆಗೆದುಕೊಳ್ಳಲಾಗಿದೆ ?

## ಹೊಸ ತಾಲ್ಲೂಕುಗಳ ರಚನೆ

**ಶ್ರೀ ಎಸ್. ವ್ಹಿ. ಸಂಕನೂರ (ಪದವೀಧರರ ಕ್ಷೇತ್ರ) :–**

೧೪೯೩ (೧೭೮೭) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಹಿಂದಿನ ಸರ್ಕಾರ ಘೋಷಣೆ ಮಾಡಿದ್ದ ಹೊಸ ತಾಲ್ಲೂಕುಗಳು ಯಾವುವು ; (ಜಿಲ್ಲಾವಾರು ವಿವರ ನೀಡುವುದು)

(ಆ) ೨೦೧೫–೧೬ರ ಆಯವ್ಯಯದಲ್ಲಿ ಹೊಸ ತಾಲ್ಲೂಕುಗಳ ರಚನೆಗೆ ಮೀಸಲಿಟ್ಟ ಹಣವೆಷ್ಟು ?

## ಬಗರ್ ಹುಕ್ಕುಂ ಸಾಗುವಳಿಯಡಿ ಹಕ್ಕುಪತ್ರ ಪಡೆದ ಭೂಹಿಡುವಳಿದಾರರ ಬಗ್ಗೆ.

**ಶ್ರೀ ಮರಿತ್ತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ) :–**

೧೪೯೪ (೧೭೮೮) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಂದಾಯ ಇಲಾಖಾ ಅಧಿಕಾರಿಗಳಿಂದ ಬಗರ್ ಹುಕುಂ ಸಾಗುವಳಿಯಡಿ ಭೂ ಮಂಜೂರಾತಿ ಮಾಡಿ, ಹಕ್ಕು ಪತ್ರ ಪಡೆದಿರುವ ಸ್ವಾಧೀನದಲ್ಲಿರುವ ಭೂ ಹಿಡುವಳಿದಾರರನ್ನು ಅರಣ್ಯ ಇಲಾಖೆಯ ಅಧಿಕಾರಿಗಳು ಒಕ್ಕಲೆಬ್ಬಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

F-6 B/B

(ಆ) ಹಾಗಾದರೆ ಯಾವ ಯಾವ ಜಿಲ್ಲೆಗಳ, ಎಷ್ಟು ವಿಸ್ತೀರ್ಣದ ಭೂಮಿಯನ್ನು ಎಷ್ಟು ಹಿಡುವಳಿದಾರರಿಂದ ಅರಣ್ಯ ಇಲಾಖೆಯ ವಶಕ್ಕೆ ಪಡೆಯಲಾಗಿದೆ ; (ವಿವರ ಒದಗಿಸುವುದು)

(ಇ) ಕಂದಾಯ ಇಲಾಖಾ ಅಧಿಕಾರಿಗಳಿಂದ ಹಕ್ಕು ಪತ್ರ ಪಡೆದ ಹಿಡುವಳಿದಾರರನ್ನು ಒಕ್ಕಲೆಬ್ಬಿಸುವಲ್ಲಿ ಅನುಸರಿಸುತ್ತಿರುವ ಮಾನದಂಡಗಳು/ನಿಯಮಗಳೇನು ;

(ಈ) ಈ ರೀತಿ ಒಕ್ಕಲೆಬ್ಬಿಸುವುದನ್ನು ತಡೆಯಲು ಸರ್ಕಾರ ಕೈಗೊಂಡ ಕ್ರಮಗಳೇನು ?

## ಅರಣ್ಯ ಅಭಿವೃದ್ಧಿಪಡಿಸುವ ಕುರಿತು.

**ಶ್ರೀ ಜಿ.ಎಸ್. ನ್ಯಾಮಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೪೯೫ (೧೭೯೩) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬಾಗಲಕೋಟೆ ಮತ್ತು ವಿಜಯಾಪುರ ಜಿಲ್ಲೆಗಳಲ್ಲಿ ೨೦೧೩ ರಿಂದ ೨೦೧೫ರವರೆಗೆ ಎಷ್ಟು ಸಸಿಗಳನ್ನು ನೆಡಲಾಗಿದೆ ಮತ್ತು ಅರಣ್ಯ ಅಭಿವೃದ್ಧಿಯನ್ನು ಯಾವ ಯಾವ ತಾಲ್ಲೂಕಿನಲ್ಲಿ ಮಾಡಲಾಗಿದೆ ; (ತಾಲ್ಲೂಕುವಾರು ವಿವರಣೆ ನೀಡುವುದು)

(ಆ) ಹಳೆಯ ಮರಗಳನ್ನು ತೆಗೆದು ಹೊಸ ಸಸಿಗಳನ್ನು ಎಷ್ಟು ನೆಡಲಾಗಿದೆ ;

(ಇ) ಹಳೆಯ ಮರಗಳನ್ನು ಕಟಾವು ಮಾಡಿದ ಮರಗಳನ್ನು ಎಷ್ಟು ಹರಾಜು ಮಾಡಲಾಗಿದೆ, ಅದರಿಂದ ಸರ್ಕಾರಕ್ಕೆ ಎಷ್ಟು ಆದಾಯ ಬಂದಿದೆ ?

## ಕೃಷಿ ರೈತರ ಪಂಪ್‌ಸೆಟ್‌ಗಳಿಂದ ಜಮೀನುಗಳಿಗೆ ಪೈಪ್ ಲೈನ್ ಅಳವಡಿಸುವ ಕುರಿತು.

**ಶ್ರೀ ಜಿ.ಎಸ್. ನ್ಯಾಮಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-**

೧೪೯೬ (೧೭೯೨) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರೈತರು ತಮ್ಮ ಜಮೀನುಗಳಿಗೆ ನೀರಾವರಿಗಾಗಿ ನದಿ ಮೂಲದಿಂದ ಪೈಪ್ ಲೈನ್ ಮುಖಾಂತರ ಅನೇಕ ಕಿಲೋಮೀಟರ್‌ವರೆಗೆ ಬೇರೆಯವರ ಜಮೀನುಗಳ ಮೂಲಕ ಲೈನ್ ಹಾಯಿಸಬೇಕಾಗಿರುವುದರಿಂದ ರೈತರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಬಂದಿದ್ದಲ್ಲಿ, ಈ ನಿಟ್ಟಿನಲ್ಲಿ , ಸರ್ಕಾರ ಕೈಗೊಂಡಿರುವ ಪರಿಹಾರೋಪಾಯಗಳೇನು ?

## ಏತ ನೀರಾವರಿ ಬಗ್ಗೆ.

**ಶ್ರೀ ಜಿ.ಎಸ್. ನ್ಯಾಮಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-**

೧೪೯೭ (೧೭೯೪) ಮಾನ್ಯ ಸಣ್ಣ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ೨೦೧೪-೨೦೧೫ರವರೆಗೆ ಬಾಗಲಕೋಟೆ ಮತ್ತು ವಿಜಯಾಪುರ ಜಿಲ್ಲೆಗಳಲ್ಲಿ ಎಷ್ಟು ಏತ ನೀರಾವರಿಗಳನ್ನು ಮಂಜೂರು ಮಾಡಲಾಗಿದೆ ; (ತಾಲ್ಲೂಕುವಾರು ವಿವರ ನೀಡುವುದು)

(ಆ) ಬಾಗಲಕೋಟೆ ಮತ್ತು ವಿಜಯಾಪುರ ಜಿಲ್ಲೆಯಲ್ಲಿ ಎಷ್ಟು ಅರ್ಜಿಗಳನ್ನು ಸ್ವೀಕರಿಸಲಾಗಿದೆ ; ಎಷ್ಟು ಅರ್ಜಿಗಳನ್ನು ಮಂಜೂರು ಮಾಡಲಾಗಿದೆ ; (ವಿವರ ನೀಡುವುದು)

(ಇ) ಆ ಪೈಕಿ ಕೈಗೊಂಡಿರುವ ಕಾಮಗಾರಿಗಳ ಸಂಖ್ಯೆ ಎಷ್ಟು ; ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಏತ ನೀರಾವರಿಗಳ ಸಂಖ್ಯೆ ಎಷ್ಟು ;

(ಈ) ನಿಷ್ಕ್ರಿಯಗೊಂಡಿರುವ ಏತ ನೀರಾವರಿಗಳ ಸಂಖ್ಯೆ ಎಷ್ಟು ; (ವಿವರ ನೀಡುವುದು)

## ಕೌಶಲ್ಯ ತರಬೇತಿ ಕೇಂದ್ರಗಳು.

**ಶ್ರೀ ರಘುನಾಥ್ ರಾವ್ ಮಲ್ಕಾಪೂರೆ (ವಿಧಾನಸಭೆಯಿಂದ ಚುನಾಯಿತರಾದವರು):–**

೧೪೯೮ (೧೬೭೨) ಮಾನ್ಯ ಕಾರ್ಮಿಕ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಹೈದರಾಬಾದ್–ಕರ್ನಾಟಕ ಜಿಲ್ಲೆಗಳಲ್ಲಿರುವ ಸರ್ಕಾರಿ ಕೌಶಲ್ಯ ತರಬೇತಿ ಕೇಂದ್ರಗಳ ಸಂಖ್ಯೆ ಎಷ್ಟು ; ಅವು ಯಾವುವು ;

(ಆ) ಸರ್ಕಾರಿ ಕೌಶಲ್ಯ ತರಬೇತಿ ಕೇಂದ್ರಗಳನ್ನು ಮಂಜೂರು ಮಾಡುವಾಗ ಅನುಸರಿಸುವ ಮಾನದಂಡಗಳೇನು ;

(ಇ) ಹೈದರಾಬಾದ್–ಕರ್ನಾಟಕ ಭಾಗದಲ್ಲಿ ಯಾವ ಯಾವ ಸ್ಥಳಗಳಲ್ಲಿ ಸರ್ಕಾರಿ ಕೌಶಲ್ಯ ತರಬೇತಿ ಕೇಂದ್ರಗಳನ್ನು ಮಂಜೂರು ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ ;

(ಈ) ಶೈಕ್ಷಣಿಕವಾಗಿ ಅತ್ಯಂತ ಹಿಂದುಳಿದ ಗಡಿ ಭಾಗದಲ್ಲಿರುವ ಈ ಜಿಲ್ಲೆಗಳಿಗೆ ಸರ್ಕಾರಿ ಕೌಶಲ್ಯ ತರಬೇತಿ ಕೇಂದ್ರಗಳನ್ನು ಮಂಜೂರು ಮಾಡುವ ಪ್ರಸ್ತಾವನೆ ಯಾವ ಹಂತದಲ್ಲಿದೆ ? (ವಿವರ ನೀಡುವುದು)

## ನಿರ್ಮಿತಿ ಕೇಂದ್ರದ ಕಾಮಗಾರಿಗಳ ಮಾಹಿತಿಯ ಬಗ್ಗೆ.

**ಶ್ರೀ ರಘುನಾಥ್ ರಾವ್ ಮಲ್ಕಾಪೂರೆ (ವಿಧಾನಸಭೆಯಿಂದ ಚುನಾಯಿತರಾದವರು):-**

೧೪೪೯ (೧೬೭೩) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದಲ್ಲಿ ನಿರ್ಮಿತಿ ಕೇಂದ್ರ ಸ್ಥಾಪನೆಗೊಂಡಿದ್ದು ಯಾವಾಗ ; (ಕೇಂದ್ರ ಕಛೇರಿಯ ವಿಳಾಸದ ಮಾಹಿತಿ ನೀಡುವುದು)

(ಆ) ೨೦೧೧ ರಿಂದ ೨೦೧೪-೨೦೧೫ನೇ ಸಾಲಿನವರೆಗೆ ನಿರ್ಮಿತಿ ಕೇಂದ್ರದಿಂದ ಬೆಂಗಳೂರು ಗ್ರಾಮಾಂತರ ಜಿಲ್ಲೆ ಮತ್ತು ಬೀದರ್ ಜಿಲ್ಲೆಗಳಿಗೆ ಒಟ್ಟು ಒದಗಿಸಲಾಗಿರುವ ಅನುದಾನ ಎಷ್ಟು ; (ಯೋಜನಾವಾರು, ವರ್ಷಾವಾರು ಮಾಹಿತಿ ನೀಡುವುದು)

(ಇ) ನಿರ್ಮಿತಿ ಕೇಂದ್ರಕ್ಕೆ ವಿವಿಧ ಲೆಕ್ಕ ಶೀರ್ಷಿಕೆಯಡಿಯಲ್ಲಿ ಒದಗಿಸಲಾದ ಅನುದಾನ ಎಷ್ಟು ; (ಕೈಗೊಂಡ ಕಾಮಗಾರಿಗಳ ವಿವರ ಬಿಲ್ಲಿನ ಮೊತ್ತ ಮತ್ತು ಬಾಕಿ ಉಳಿದಿರುವ ಮೊತ್ತದ ಮಾಹಿತಿ ಒದಗಿಸುವುದು)

(ಈ) ಪೂರ್ಣಗೊಂಡಿರುವ ಕಾಮಗಾರಿಗಳ ಸಂಖ್ಯೆ ಎಷ್ಟು ; ನಿರ್ಮಿತಿ ಕೇಂದ್ರದಿಂದ ಮತ್ತು ಇತರೆ ಗುತ್ತಿಗೆದಾರರಿಂದ ನಿರ್ಮಿಸಲಾಗಿರುವ ಕಾಮಗಾರಿಗಳ ಸಂಖ್ಯೆ ಎಷ್ಟು ಆ ಕಾಮಗಾರಿಗಳಿಗೆ ತಗುಲಿದ ವೆಚ್ಚ ಎಷ್ಟು ; (ಪೂರ್ಣಗೊಂಡಿರುವ ಕಾಮಗಾರಿಯ ವರ್ಷವಾರು, ತಾಲ್ಲೂಕುವಾರು ಮಾಹಿತಿ ನೀಡುವುದು)

(ಉ) ಗುತ್ತಿಗೆದಾರರಿಗೆ ಪಾವತಿಸಿರುವ ಬಿಲ್ಲಿನ ಮೊತ್ತ ಎಷ್ಟು ; ನೀಡಬೇಕಾಗಿರುವ ಬಾಕಿ ಮೊತ್ತ ಎಷ್ಟು ; ನಿರ್ಮಿತಿ ಕೇಂದ್ರದಿಂದ ಗುತ್ತಿಗೆದಾರರಿಗೆ ಒಂದೊಂದು ಕಾಮಗಾರಿಗೆ ಒಂದೊಂದು ರೀತಿಯಲ್ಲಿ ದರ ನಿಗಧಿ ಮಾಡುತ್ತಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಊ) ಇಲಾಖೆ ವತಿಯಿಂದ ಬಿಲ್ಲಿನ ಮೊತ್ತದಲ್ಲಿ ಶೇಕಡವಾರು ಕಡಿತಗೊಳಿಸುತ್ತಿರುವ ಅಧಿಕಾರಿಗಳ ಮೇಲೆ ಯಾವ ಕ್ರಮ ಜರುಗಿಸಲಾಗಿದೆ ? (ವಿವರ ನೀಡುವುದು)

## ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮಕ್ಕೆ ನೀಡಿದ ಅನುದಾನ.

**ಶ್ರೀ ರಘುನಾಥ್ ರಾವ್ ಮಲ್ಕಾಪೂರೆ (ವಿಧಾನಸಭೆಯಿಂದ ಚುನಾಯಿತರಾದವರು):-**

೧೫೦೦ (೧೬೭೧) ಮಾನ್ಯ ಜವಳಿ ಹಾಗೂ ಬಂದರು, ಒಳನಾಡು ಜಲಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ೨೦೧೨-೧೩ನೇ ಸಾಲಿನಿಂದ ೨೦೧೪-೧೫ನೇ ಸಾಲಿನವರೆಗೆ ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮಕ್ಕೆ ಆಯವ್ಯಯದಲ್ಲಿ ಒಟ್ಟು

ಮೀಸಲಿರಿಸಿದ ಅನುದಾನ ಮತ್ತು ಬಿಡುಗಡೆ ಮಾಡಿದ ಹಾಗೂ ಖರ್ಚು ಮಾಡಿದ ಮೊತ್ತವೆಷ್ಟು ; (ವರ್ಷವಾರು ಮಾಹಿತಿ ನೀಡುವುದು)

(ಆ) ಹೈದ್ರಾಬಾದ್ ಕರ್ನಾಟಕ ಭಾಗದ ಜಿಲ್ಲೆಗಳಿಗೆ ನೇಕಾರರ ಅಭಿವೃದ್ಧಿಗಾಗಿ ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮದಿಂದ ಕೈಗೊಂಡಿರುವ ವಿಶೇಷ ನೇಕಾರರ ಅಭಿವೃದ್ಧಿ ಕಾರ್ಯಕ್ರಮಗಳೇನು ; (ಪ್ರತಿ ಜಿಲ್ಲೆಯ ಒಟ್ಟು ನೇಕಾರರ ಸಂಖ್ಯೆಯ ಪೂರ್ಣ ಮಾಹಿತಿ ನೀಡುವುದು)

(ಇ) ಈ ಭಾಗದಲ್ಲಿ ಒಟ್ಟು ನೇಕಾರರ ಸಂಖ್ಯೆ ಎಷ್ಟು ? (ವಿವರ ನೀಡುವುದು)

## ವಿವಿಧ ಯೋಜನೆಯಡಿ ಕೈಗೊಂಡ ಕಾಮಗಾರಿಗಳು.

**ಶ್ರೀ ರಘುನಾಥ್ ರಾವ್ ಮಲ್ಕಾಪೂರೆ (ವಿಧಾನಸಭೆಯಿಂದ ಚುನಾಯಿತರಾದವರು):-**

೧೫೦೧ (೧೬೦೨) ಮಾನ್ಯ ಸಣ್ಣ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ೨೦೧೪-೧೫ನೇ ಸಾಲಿನಲ್ಲಿ ಬೀದರ್ ಜಿಲ್ಲೆಯ ಎಲ್ಲಾ ತಾಲ್ಲೂಕಿನಲ್ಲಿ ವಿವಿಧ ಯೋಜನೆಯಡಿ ಕೈಗೊಂಡ ಕಾಮಗಾರಿಗಳು ಯಾವುವು ; ಬಿಡುಗಡೆ ಮಾಡಿದ ಅನುದಾನ ಎಷ್ಟು ; (ಯೋಜನೆಗಳವಾರು, ಕಾಮಗಾರಿಗಳವಾರು ಮತ್ತು ತಾಲ್ಲೂಕುವಾರು ಮಾಹಿತಿ ನೀಡುವುದು)

(ಆ) ಆಪೈಕಿ ಪೂರ್ಣಗೊಂಡಿರುವ ಕಾಮಗಾರಿಗಳ ಸಂಖ್ಯೆ ಎಷ್ಟು ;

(ಇ) ಬಾಕಿ ಉಳಿದಿರುವ ಕಾಮಗಾರಿಗಳ ಸಂಖ್ಯೆ ಎಷ್ಟು ; (ತಾಲ್ಲೂಕುವಾರು ಮಾಹಿತಿ ನೀಡುವುದು)

(ಈ) ಬಾಕಿ ಇರುವ ಕಾಮಗಾರಿಗಳನ್ನು ಪ್ರಸಕ್ತ ಸಾಲಿನಲ್ಲಿ ಪೂರ್ಣಗೊಳಿಸಲಾಗುದೇ (ಅಂಕಿ ಅಂಶಗಳ ಸಮೇತ ವಿಮ ನೀಡುವುದು)

## ರುದ್ರಭೂಮಿಯ ಅಕ್ರಮ ಒತ್ತುವರಿ.

**ಶ್ರೀ ರಘುನಾಥ್ ರಾವ್ ಮಲ್ಕಾಪೂರೆ (ವಿಧಾನಸಭೆಯಿಂದ ಚುನಾಯಿತರಾದವರು):–**

೧೫೦೨ (೧೬೦೩) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೀದರ್ ಜಿಲ್ಲೆಯಲ್ಲಿ ರುದ್ರಭೂಮಿ ಇಲ್ಲದ ಗ್ರಾಮಗಳ ಸಂಖ್ಯೆ ಎಷ್ಟು ; (ಮಾಹಿತಿ ನೀಡುವುದು)

(ಆ) ಇದರಲ್ಲಿ ಅಕ್ರಮವಾಗಿ ಎಷ್ಟು ಎಕರೆ ರುದ್ರಭೂಮಿ ಒತ್ತುವರಿಯಾಗಿದೆ ; (ತಾಲ್ಲೂಕುವಾರು ವಿವರ ನೀಡುವುದು)

(ಇ) ರುದ್ರಭೂಮಿ ಇಲ್ಲದ ಗ್ರಾಮಗಳಿಗೆ ರುದ್ರಭೂಮಿ ಒದಗಿಸುವ ಬಗ್ಗೆ ಸರ್ಕಾರ ಯಾವ ರೀತಿಯ ಕ್ರಮ ಕೈಗೊಳ್ಳಲಿದೆ ;

(ಈ) ಒತ್ತುವರಿಯಾಗಿರುವ ರುದ್ರಭೂಮಿಯನ್ನು ತೆರವುಗೊಳಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ? (ಮಾಹಿತಿ ಒದಗಿಸುವುದು)

## ಗುಲ್ಬರ್ಗಾ ಜಿಲ್ಲೆಯಲ್ಲಿ ಅರಣ್ಯ ಇಲಾಖಾ ವತಿಯಿಂದ ಅಭಿವೃದ್ಧಿ

**ಶ್ರೀ ಇಕ್ಬಾಲ್ ಅಹ್ಮದ್ ಸರಡಗಿ (ನಾಮನಿರ್ದೇಶನ ಹೊಂದಿದವರು):–**

೧೫೦೩ (೧೭೫೨) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಗುಲ್ಬರ್ಗಾ ಜಿಲ್ಲೆಯಲ್ಲಿ ಕಳೆದ ೩ ವರ್ಷಗಳಲ್ಲಿ ಅರಣ್ಯ ಇಲಾಖೆ ವತಿಯಿಂದ ಯಾವ ಯಾವ ಯೋಜನೆಯಡಿ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ ; (ವಿವರ ಒದಗಿಸುವುದು)

(ಆ) ಜಿಲ್ಲೆಯಲ್ಲಿ ಅರಣ್ಯ ಪಾರ್ಕ್‌ನ್ನು ನಿರ್ಮಿಸುವ ಯೋಜನೆಯನ್ನು ಹಮ್ಮಿಕೊಳ್ಳಲಾಗಿದೆಯೇ ; (ವಿವರ ನೀಡುವುದು)

(ಇ) ಜಿಲ್ಲೆಯಲ್ಲಿ ಎಷ್ಟು ಎಕರೆ ಅರಣ್ಯ ಭೂಮಿಯನ್ನು ಒತ್ತುವರಿ ಮಾಡಲಾಗಿದೆ ; ಇಂತಹವರ ವಿರುದ್ಧ ಕೈಗೊಂಡಿರುವ ಕ್ರಮಗಳೇನು ? (ವಿವರ ಒದಗಿಸುವುದು)

## ಹೇಮಾವತಿ ಬಲದಂಡೆ ಕಾಲುವೆ ದುರಸ್ತಿ ಕುರಿತು.

**ಶ್ರೀ ಪಟೇಲ್ ಶಿವರಾಂ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೧೫೦೪ (೧೬೭೪) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಹೇಮಾವತಿ ಜಲಾಶಯ ಹಿನ್ನೀರಿನಿಂದ ಕೃಷಿ ಜಮೀನಿಗೆ ನೀರೊದಗಿಸುವ ಬಲ ಮೇಲ್ದಂಡೆ ನಾಲೆಯನ್ನು ಯಾವ ವರ್ಷದಲ್ಲಿ ನಿರ್ಮಾಣ ಮಾಡಲಾಯಿತು ;

(ಆ) ನಾಲೆಗಳನ್ನು ದುರಸ್ತಿ ಮಾಡದಿರುವುದರಿಂದ ಹೆಚ್ಚು ನೀರು ಹರಿಸಲು ಸಾಧ್ಯವಾಗದೆ ರೈತರಿಗೆ ಆಗುತ್ತಿರುವ ನಷ್ಟವನ್ನು ತಪ್ಪಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ;

(ಇ) ಬಲ ಮೇಲ್ದಂಡೆ ಕಾಲುವೆಯ ನಿರ್ವಹಣೆಗೆ ಈವರೆಗೆ ಮಾಡಿರುವ ಒಟ್ಟು ವೆಚ್ಚ ಎಷ್ಟು ;

(ಈ) ಈ ನಾಲೆಯ ವ್ಯಾಪ್ತಿಯಲ್ಲಿ ಬರುವ ವಿತರಣೆ, ಉಪ ನಾಲೆಗಳು ಸಂಪೂರ್ಣ ಹಾಳಾಗಿದ್ದು, ನಾಲೆಗಳ ಆಧುನೀಕರಣ ಅಥವಾ ದುರಸ್ತಿಗೊಳಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ?

**ಅಮೃತ್ ಮಹಲ್ ಕಾವಲ್ ಒತ್ತುವರಿ ತೆರವುಗೊಳಿಸುವ ಕುರಿತು.**

**ಶ್ರೀ ಪಟೇಲ್ ಶಿವರಾಂ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-**

೧೫೦೫ (೧೬೭೫) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಹಾಸನ ಜಿಲ್ಲೆಯಲ್ಲಿ ಅಮೃತ್ ಮಹಲ್ ಕಾವಲ್‌ಗೆ ಮೀಸಲಿಟ್ಟ ಪ್ರದೇಶಗಳಾವುವು ; ಮತ್ತು ಅದರ ವಿಸ್ತೀರ್ಣ ಎಷ್ಟು ;

(ಆ) ಅಮೃತ್ ಮಹಲ್ ಕಾವಲ್‌ಗೆ ಮೀಸಲಿಟ್ಟ ಭೂಮಿಯ ಪೈಕಿ ಎಷ್ಟು ಭೂಮಿಯನ್ನು ಮಂಜೂರು ಮಾಡಲಾಗಿದೆ ; ಇದನ್ನು ಯಾವ ಕಾನೂನಿನಡಿ ಮಂಜೂರು ಮಾಡಲಾಗಿದೆ ;

(ಇ) ಅಮೃತ್ ಮಹಲ್ ತಳಿ ಅಭಿವೃದ್ಧಿಗೆ ಪೂರಕವಾದ ವಾತಾವರಣವನ್ನು ನಿರ್ಮಿಸಲು ಕಾವಲ್ ಪ್ರದೇಶವನ್ನು ಸರ್ವೇ ಮಾಡಿ ಒತ್ತುವರಿ ತೆರವುಗೊಳಿಸಲು ಕೈಗೊಂಡಿರುವ ಕ್ರಮಗಳೇನು ?

## ಹಳೇಬೀಡು ನಾಡ ಕಛೇರಿಗೆ ಕಟ್ಟಡ ನಿರ್ಮಿಸುವ ಕುರಿತು.

**ಶ್ರೀ ಪಟೇಲ್ ಶಿವರಾಂ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೧೫೦೬ (೧೬೭೬) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೇಲೂರು ತಾಲ್ಲೂಕಿನ ಹಳೇಬೀಡು ನಾಡ ಕಛೇರಿ ಕಟ್ಟಡ ಶಿಥಿಲವಾಗಿ ಬೀಳುವ ಹಂತ ತಲುಪಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಹಳೇಬೀಡು ನಾಡ ಕಛೇರಿಯಲ್ಲಿನ ಕಂದಾಯ ದಾಖಲೆಗಳು ಕಟ್ಟಡದ ಶಿಥಿಲಾವಸ್ಥೆಯಿಂದ ಹಾಳಾಗುತ್ತಿದ್ದು ಇವುಗಳನ್ನು ರಕ್ಷಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ;

(ಇ) ನಾಡ ಕಛೇರಿ ಸುತ್ತಮುತ್ತಲಿನ ಜಾಗವನ್ನು ಸ್ವಚ್ಛಗೊಳಿಸದಿರುವುದರಿಂದ ಕೊಳಚೆ ಪ್ರದೇಶದಂತಾಗಿ ಸಾರ್ವಜನಿಕರಿಗೆ ತೊಂದರೆಯಾಗುತ್ತಿದ್ದು ಇದರ ಸ್ವಚ್ಛತೆಗೆ ಕೈಗೊಂಡಿರುವ ಕ್ರಮಗಳೇನು ;

(ಈ) ಐತಿಹಾಸಿಕ ಸ್ಥಳವಾದ ಹಳೇಬೀಡಿನಲ್ಲಿ ನಾಡ ಕಛೇರಿಯ ನೂತನ ಕಟ್ಟಡ ನಿರ್ಮಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ?

## ಮೈಸೂರು ಮೃಗಾಲಯದ ಅಭಿವೃದ್ಧಿ

**ಶ್ರೀ ಎಸ್. ನಾಗರಾಜು (ಸಂದೇಶ್ ನಾಗರಾಜ್)**
**(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೧೫೦೭ (೧೬೭೭) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಮೈಸೂರು ಮೃಗಾಲಯವನ್ನು ವಿಸ್ತರಿಸಿ ಅಭಿವೃದ್ಧಿಪಡಿಸಲು ಹಾಗೂ ಕಡಿಮೆ ಆಗುತ್ತಿರುವ ಗಿಡಮರಗಳು ಮತ್ತು ನೀರಿನ ಸೌಕರ್ಯ ಹೆಚ್ಚಿಸಲು ಸರ್ಕಾರ ಕೈಗೊಳ್ಳುವ ಕ್ರಮಗಳೇನು ;

(ಆ) ಮೈಸೂರಿನ ಕೂರ್ಗಹಳ್ಳಿಯಲ್ಲಿ ಮೃಗಾಲಯ ಸಫಾರಿ (ಚಾಮುಂಡಿ ವನ್ಯಜೀವಿ ಸಂರಕ್ಷಣೆ ಮತ್ತು ಪುನರ್‌ವಸತಿ) ಕೇಂದ್ರವನ್ನು ಸ್ಥಾಪಿಸಲು ಕ್ರಮ ತೆಗೆದುಕೊಳ್ಳಲಾಗಿದೆಯೇ ; ಇದಕ್ಕಾಗಿ ನಿಗಧಿಪಡಿಸಿರುವ ಭೂಮಿಯ ವಿಸ್ತೀರ್ಣ ಎಷ್ಟು ; ಇದನ್ನು ವಶಕ್ಕೆ ತೆಗೆದುಕೊಳ್ಳಲಾಗಿದೆಯೇ ; ಇದಕ್ಕಾಗಿ ಮಂಜೂರಾಗಿರುವ ಅನುದಾನ ಎಷ್ಟು ;

(ಇ) ಮೈಸೂರು ಮೃಗಾಲಯದಲ್ಲಿ ಯಾವ ಯಾವ ಪ್ರಾಣಿಗಳನ್ನು ಯಾವ ವ್ಯಕ್ತಿಗಳು, ಯಾವ ಸಂಸ್ಥೆಯುವರು ದತ್ತು ತೆಗೆದುಕೊಂಡಿದ್ದಾರೆ ; ಅವರು ನೀಡಿರುವ ಹಣ ಎಷ್ಟು ; (ವಿವರಗಳನ್ನು ಒದಗಿಸುವುದು)

## ರಾಜ್ಯದ ಅರಣ್ಯದಲ್ಲಿರುವ ಚಿರತೆಗಳು.

**ಶ್ರೀ ಎಸ್. ನಾಗರಾಜು (ಸಂದೇಶ್ ನಾಗರಾಜ್)**

**(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೧೫೦೮ (೧೬೭೮) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಅರಣ್ಯಗಳಲ್ಲಿರುವ ಚಿರತೆಗಳ ಅಂದಾಜು ಸಂಖ್ಯೆ ಎಷ್ಟು; ಇವುಗಳ ಬಗ್ಗೆ ವೈಜ್ಞಾನಿಕವಾಗಿ ಗಣತಿ ನಡೆಸಲಾಗಿದೆಯೇ ; (ಅರಣ್ಯವಲಯವಾರು ವಿವರ ಒದಗಿಸುವುದು)

(ಆ) ಕಳೆದ ಮೂರು ವರ್ಷಗಳಲ್ಲಿ ವಾಹನ ಅಪಘಾತ, ಬೇಟೆ, ಆಹಾರದ ಅಭಾವ, ವಿಷಾಹಾರ ಸೇವನೆ ಮೊದಲಾದ ಕಾರಣಗಳಿಗಾಗಿ ಸತ್ತಿರುವ ಚಿರತೆಗಳ ಸಂಖ್ಯೆ ಎಷ್ಟು ; (ಪ್ರಕರಣವಾರು ವಿವರ ಒದಗಿಸುವುದು)

(ಇ) ಕಳೆದ ವರ್ಷ ಚಿರತೆ ದಾಳಿಯಿಂದ ಎಲ್ಲೆಲ್ಲಿ ಯಾವ ಯಾವ ಗ್ರಾಮದ ಜನ ಹಾಗೂ ಜಾನುವಾರುಗಳ ಪ್ರಾಣಹರಣ ಆಗಿದೆ ; ಎಲ್ಲೆಲ್ಲಿ ಚಿರತೆಗಳನ್ನು ಬೋನಿನ ಮೂಲಕ ಹಿಡಿದು ಅರಣ್ಯಕ್ಕೆ ಬಿಡಲಾಗಿದೆ ; (ಪ್ರಕರಣವಾರು ವಿವರ ಒದಗಿಸುವುದು)

(ಈ) ಚಿರತೆ ದಾಳಿಯಲ್ಲಿ ಮೃತಪಟ್ಟವರ ಕುಟುಂಬಕ್ಕೆ ಮತ್ತು ಜಾನುವಾರುಗಳ ಮಾಲೀಕರಿಗೆ ಪರಿಹಾರ ನೀಡಲಾಗಿದೆಯೇ ? (ವಿವರ ಒದಗಿಸುವುದು)

## ನಾಗರಹೊಳೆ ರಾಷ್ಟ್ರೀಯ ಉದ್ಯಾನವನದ ಆದಿವಾಸಿಗಳಿಗೆ ಪುನರ್ ವಸತಿ

**ಶ್ರೀ ಎಸ್. ನಾಗರಾಜು (ಸಂದೇಶ್ ನಾಗರಾಜ್)**
**(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-**

೧೫೦೯ (೧೬೭೯) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ನಾಗರಹೊಳೆ ರಾಷ್ಟ್ರೀಯ ಉದ್ಯಾನವನದಲ್ಲಿ ವಾಸಿಸುವ ಬುಡಕಟ್ಟು ಜನರಿಗೆ ಪುನರ್‌ವಸತಿ ಕಲ್ಪಿಸುವ ಬಗ್ಗೆ ಪ್ರೊ. ಮುಜಾಫರ್ ಅಸಾದಿ ಸಮಿತಿ ವರದಿ ನೀಡಿದೆಯೇ ; ಸದರಿ ವರದಿಯ ಮುಖ್ಯಾಂಶಗಳೇನು ; ಈ ವರದಿಯನ್ನು ಜಾರಿಗೆ ತರಲು ಕ್ರಮಕೈಗೊಳ್ಳಲಾಗಿದೆಯೇ ;

(ಆ) ನಾಗರಹೊಳೆ ರಾಷ್ಟ್ರೀಯ ಉದ್ಯಾನವನದಲ್ಲಿ ವಾಸಿಸುತ್ತಿದ್ದ ೩೪೧೮ ಆದಿವಾಸಿ ಕುಟುಂಬಗಳಿಗೆ ಪುನರ್‌ವಸತಿ ಕಲ್ಪಿಸದೇ ಹೊರಹಾಕಲಾಗಿದೆಯೇ ; ಈ ಬಗ್ಗೆ ಆದಿವಾಸಿಗಳು ಪ್ರತಿಭಟನೆ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಹುಣಸೂರು, ಎಚ್. ಡಿ. ಕೋಟೆ, ವಿರಾಜಪೇಟೆ, ಪಿರಿಯಪಟ್ಟಣ ತಾಲ್ಲೂಕುಗಳಲ್ಲಿ ಇಂತಹ ಎಷ್ಟು ಆದಿವಾಸಿ ಕುಟುಂಬಗಳನ್ನು ಹೊರಹಾಕಲಾಗಿದೆ ; ಇವರಿಗೆ ಪುನರ್ ವಸತಿ ಕಲ್ಪಿಸಲು ಕೈಗೊಂಡಿರುವ ಕ್ರಮಗಳೇನು ?

## ಮೈಸೂರು ಚಾಮರಾಜನಗರ ಜಿಲ್ಲೆಯ ಅರಣ್ಯಗಳಲ್ಲಿ ಬೆಂಕಿ.

**ಶ್ರೀ ಎಸ್. ನಾಗರಾಜು (ಸಂದೇಶ್ ನಾಗರಾಜ್)**
**(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೧೫೧೦ (೧೬೮೦) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಯಲ್ಲಿ ಕಳೆದ ಎರಡು ತಿಂಗಳಲ್ಲಿ ಎಲ್ಲೆಲ್ಲಿ ಅರಣ್ಯದಲ್ಲಿ ಬೆಂಕಿ ಕಾಣಿಸಿಕೊಂಡಿದೆ ; ಇದರಿಂದ ನಾಶವಾಗಿರುವ ಅರಣ್ಯ ಪ್ರದೇಶ ಎಷ್ಟು ; ಸಂಭವಿಸಿರುವ ಅಂದಾಜು ನಷ್ಟ ಎಷ್ಟು ; ಪ್ರಾಣಿ ಪಕ್ಷಿಗಳು ಬೆಂಕಿಗೆ ಆಹುತಿಯಾಗಿವೆಯೇ ;

(ಆ) ಬೇಸಿಗೆಯಲ್ಲಿ ಈ ಜಿಲ್ಲೆಗಳ ಅರಣ್ಯದಲ್ಲಿ ಸಂಭವನೀಯ ಬೆಂಕಿ ಆಕಸ್ಮಿಕಗಳನ್ನು ತಡೆಗಟ್ಟುವಲ್ಲಿ ಕೈಗೊಂಡಿರುವ ಕ್ರಮಗಳೇನು ; ಇದಕ್ಕಾಗಿ ಒದಗಿಸಿರುವ ಅನುದಾನ ಎಷ್ಟು ; ತಾತ್ಕಾಲಿಕ ಸಿಬ್ಬಂದಿಯನ್ನು ನೇಮಿಸಿಕೊಳ್ಳಲಾಗಿದೆಯೇ ; ಯಾವ ಯಾವ ರೀತಿಯಲ್ಲಿ ಸಿದ್ಧತೆಗಳನ್ನು ಮಾಡಿಕೊಳ್ಳಲಾಗಿದೆ ?

## ಮಾಜಿ ಶ್ಯಾನುಭೋಗರಿಗೆ ವಿಶ್ರಾಂತಿ ವೇತನ.

**ಶ್ರೀ ಎಸ್. ನಾಗರಾಜು (ಸಂದೇಶ್ ನಾಗರಾಜ್)**
**(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೧೫೧೧ (೧೬೮೧) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯ ಸರ್ಕಾರದಿಂದ ವಿಶ್ರಾಂತಿ ವೇತನ ಪಡೆಯುತ್ತಿರುವ ಮಾಜಿ ಶ್ಯಾನುಭೋಗರುಗಳ ಹಾಗೂ ಶ್ಯಾನುಭೋಗರುಗಳ ಮರಣಾ

ನಂತರ ಕುಟುಂಬ ವಿಶ್ರಾಂತಿ ವೇತನ ಪಡೆಯುತ್ತಿರುವ ಅವರ ಕುಟುಂಬದವರ ಸಂಖ್ಯೆ ಎಷ್ಟು ; ಇದಕ್ಕಾಗಿ ಕಳೆದ ಸಾಲಿನಲ್ಲಿ ಒದಗಿಸಿದ್ದ ಆಯವ್ಯಯ ಎಷ್ಟು ; (ತಾಲ್ಲೂಕುವಾರು ವಿವರ ಒದಗಿಸುವುದು)

(ಆ) ಇವರ ಕುಟುಂಬದವರಿಗೆ ವಿಶ್ರಾಂತಿ ವೇತನ ನೀಡಲು ಸರ್ಕಾರವು ಹೊರಡಿಸಿರುವ ಆದೇಶಗಳು ಯಾವುವು ; (ಅವುಗಳ ಪ್ರತಿಯನ್ನು ಒದಗಿಸುವುದು)

(ಇ) ಮಾಜಿ ಶ್ಯಾನುಭೋಗರುಗಳ ಮರಣಾ ನಂತರ ಅವರ ಕುಟುಂಬದವರು ಕುಟುಂಬ ವಿಶ್ರಾಂತಿ ವೇತನ ಪಡೆಯಲು ಅನುಸರಿಸಬೇಕಾದ ವಿಧಾನಗಳೇನು ; ಈ ಬಗ್ಗೆ ಸರ್ಕಾರ ಹೊರಡಿಸಿರುವ ಆದೇಶಗಳು ನಿಗದಿಪಡಿಸಿರುವ ಅರ್ಜಿ ನಮೂನೆಗಳ ವಿವರ ಒದಗಿಸುವುದು ?

**ವಿ. ಶ್ರೀಶ್**
ಕಾರ್ಯದರ್ಶಿ
ಕರ್ನಾಟಕ ವಿಧಾನ ಪರಿಷತ್ತು

ಸರ್ಕಾರಿ ಕೇಂದ್ರ ಮುದ್ರಣಾಲಯ, ಘಟಕ-2, ಬೆಂಗಳೂರು-59/ಕಾ.ಸೂ. 0 3513/ 1200 ಪ್ರತಿಗಳು/13-03-2015